
# ಜಾನಪದ

# ಗ್ರಹಿಕೆ : ಪರಿಕಲ್ಪನೆ

ಪ್ರೊ. ಹಿ. ಶಿ. ರಾಮಚಂದ್ರೇಗೌಡ



# ಜಾನಪದ ಗ್ರಹಿಕೆ; ಪರಿಕಲ್ಪನೆ

## (ಜನಪದ ಕಲಾವಿದರ ಅನಿಸಿಕೆಗಳು)

ಸಂಪಾದಕರು

ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨.

ದೂರವಾಣಿ : ೨೨೨೧೫೫೦೯

JANAPADA GRAHIKE; PARIKALPANE : A collection of opinions by Folk Artists Edited by Prof. Hi. Shi. Ramachandre Gowda, Chairman, Karnataka Janapada mathu Yakshagana Academy. Kannada Bhavana, J. C. Road, Bangalore - 560 002. Published by : M. Muniraju, Registrar, Karnataka Janapada mathu Yakshagana Academy, Bangalore - 560 002.

First Edition : 2004

Pages : II + 125

Copies : 1,000

ಸಂಪಾದಕರು : ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಮುಖಪುಟ ಚಿತ್ರ : ಗೋಪಾಲಗೌಡ

ಪ್ರಕಾಶಕರು : ಎಂ. ಮುನಿರಾಜು
ರಿಜಿಸ್ಟ್ರಾರ್, ಕರ್ನಾಟಕ ಜಾನಪದ
ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨.
ದೂರವಾಣಿ : ೨೨೨೧೫೫೪೯

ಬೆಲೆ : ರೂ. ೬೦/-

ಮುದ್ರಕರು : ನಿಯೋ ಸಿಸ್ಟಮ್ಸ್
ನಂ. ೯೫೩/ಎ, ೨ನೇ ಮುಖ್ಯರಸ್ತೆ,
೪ನೇ ವಿಭಾಗ, ರಾಜಾಜಿನಗರ ಎಂಟ್ರನ್ಸ್
ಬೆಂಗಳೂರು - ೫೬೦ ೦೧೦.
ದೂರವಾಣಿ : ೩೦೬೧೨೦೨೮

# ಪ್ರಸ್ತಾವನೆ

## ನಮ್ಮ ಹಣತೆಗಳೇಕೆ ಉರಿಯುತ್ತಿಲ್ಲ

ಜಾನಪದ ಗ್ರಹಿಕೆ ಮತ್ತು ಪರಿಕಲ್ಪನೆಯ ಬಗ್ಗೆ ಕರ್ನಾಟಕದವರು ರಿಪೀಟರ್ಸ್ ಅಥವ ಸೆಪ್ಟೆಂಬರ್ ಪರೀಕ್ಷಾರ್ಥಿಗಳು. ನಾವು, ಕರ್ನಾಟಕದವರು ಯಾಕೆ? ಭಾರತದ ಜಾನಪದ ವಿದ್ವಾಂಸರೆ ಹಾಗೆ. ನಮಗೆ ಈ ಕಸುಬು ಹವ್ಯಾಸವಾಗಿ ಹೋಗಿದೆ. ಬ್ರಿಟಿಷ್ ಪೂರ್ವದಲ್ಲಿ ವೈದಿಕ ಅಕ್ಷರ ಸಂಸ್ಕೃತಿಗೆ ಶರಣು ಹೋಗಿ ಅದರ ಬೇಕು ಬೇಡವನ್ನೆಲ್ಲ ನಮ್ಮ ಸ್ಥಳೀಯ ಸಂಸ್ಕೃತಿಯಲ್ಲಿ ಅವತರಿಸುವಂತೆ ಮಾಡಿದೆವು. ಅದನ್ನು ಆಚರಿಸುವಲ್ಲಿ ಧನ್ಯತೆಯನ್ನು ಕಂಡೆವು. ಬ್ರಿಟಿಷರು ಬಂದ ಮೇಲೆ ಅವರ ಸಾಮಗ್ರಿ, ಸಂಸ್ಕೃತಿಯನ್ನು ನಮ್ಮ ಮೈ ಮೇಲೆ ಎಳೆದುಕೊಂಡೆವು. ಈಗ ಪಾಶ್ಚಾತ್ಯ ಅಲ್ಲದ್ದು ವಸ್ತುವೂ ಅಲ್ಲ, ಜ್ಞಾನವೂ ಅಲ್ಲ ಎಂಬ ದೆವ್ವ ಮೆಟ್ಟಿಕೊಂಡವರ ಸ್ಥಿತಿಗೆ ತಲುಪಿದ್ದೇವೆ.

ಅಭಿವೃದ್ಧಿಯನ್ನು ಅನುಸರಿಸುವುದು ಅಪರಾಧವಲ್ಲ. ಅನುಸರಿಸುವವನು ಸೃಷ್ಟಿಶೀಲನೂ ಆಗಬೇಕಾದುದು ಉಚಿತ. ಅನುಸರಣೆಯೆ ಜೀವನವಾದರೆ 'ನಾವು' ಖಾಲಿಯಾಗುವುದು ಖಂಡಿತ. ಬೆಳಗುವ ದೀಪವೊಂದರ ಕಡೆಗೆ ಕಣ್ಣಿಟ್ಟವರು ಅದರ ತಳದ ಕತ್ತಲೆಯನ್ನು ಗ್ರಹಿಸದಿದ್ದರೆ ಹೇಗೆ? ಅಂಥ ಹಣತೆಯನ್ನು ತನ್ನಲ್ಲಿ ಹತ್ತಿಸಿಕೊಳ್ಳದಿದ್ದರೆ ಹೇಗೆ?

ಈಗ ನಮ್ಮ ನಮ್ಮ ಜನಪದ ಹಣತೆಗಳನ್ನು ಹತ್ತಿಸಿಕೊಳ್ಳೋಣವೇ! ನೂರು ಜನಪದಗಳಿಗೆ ನೂರು ದೀಪಗಳಿವೆ. ಅವುಗಳನ್ನು ಕೂಡಿಸಿಕೊಳ್ಳುವ, ಜೋಡಿಸಿಕೊಳ್ಳುವ ಕೆಲಸವನ್ನು ಆಮೇಲೆ ಮಾಡೋಣ. ಮೊದಲು ನಮ್ಮ ನಮ್ಮ ಮನೆಯ ಹಣತೆಗಳು ಉರಿಯಲಿ. ಜನಪದ ಸಾಹಿತ್ಯವನ್ನು ಕುರಿತು 'ಜನವಾಣಿ ಬೇರು, ಕವಿವಾಣಿ ಹೂವು' ಎಂಬ ಮೊದಲ ಮಾತನ್ನು ಬಿಎಂಶ್ರೀ ಅವರು ಆಡಿದ್ದು ಈ ನೆಲೆಯಲ್ಲಿ, ಕವಿಗಳು ಪಂಥೀಯರು, ಸಾಹಿತ್ಯ ಪಂಥಾತೀತವಾದುದು. ಜನಪದರ ಜ್ಞಾನವೂ ಪಂಥ, ಪಂಗಡ ಹಾಗೂ ಜಾತ್ಯಾತೀತ. ಅದು ಜನಪರ ಮತ್ತು ಜೀವಪರ. ಇವರ ಉತ್ಪತ್ತಿಯಾದ ಜಾನಪದವನ್ನು ಗ್ರಹಿಸಬೇಕಾದುದು ಇವರ ಚಲನೆಯಲ್ಲಿ,

ಕರ್ನಾಟಕದ ಆರಂಭಿಕ ಜಾನಪದ ತಜ್ಞರೆನ್ನುವವರನ್ನು ನೋಡಿ. ಅವರು ಕವಿಗಳು ಮತ್ತು ರಾಷ್ಟ್ರೀಯವಾದಿಗಳು. ಇವರು ಜನಪದ ಸಾಹಿತ್ಯವನ್ನು ಕಂಡದ್ದು ಈ ನಾಡಿನ ಬೇರು ಮತ್ತು ಸಾರವನ್ನಾಗಿ. ಆ ಸಾಹಿತ್ಯ ಕೇವಲ ಸಾಹಿತ್ಯವಲ್ಲ ಜನಪದ ಸಮಾಜದ ಜ್ಞಾನದ ಪುಷ್ಪ ಎಂಬ ಅಂತರಂಗ ಶೋಧದ ಕಡೆಗೆ ಅವರು ಗಮನಹರಿಸಿದವರೂ ಉಂಟು. ಶಿಷ್ಟವಾಗುವ ಮೂಲಕ ನಾವು ನಮ್ಮ ಚಲನೆಯನ್ನು ನಿಯಂತ್ರಿಸಿಕೊಳ್ಳುತ್ತೇವೆ, ಜನಪದರಾಗುವ ಮೂಲಕ ಕ್ರಿಯಾಶೀಲರಾಗುತ್ತೇವೆ ಎಂಬ ನಿತ್ಯಸತ್ಯವನ್ನು ಮನಗಂಡರು. ನಮ್ಮ ಕರ್ನಾಟಕದಲ್ಲಿ ಜಾನಪದ ಪ್ರಜ್ಞೆ ಮೂಡಿದ್ದೆ ನಮ್ಮ ಸ್ವಾತಂತ್ರ್ಯ ಚಳುವಳಿಗೆ ಎಣ್ಣೆ ಬತ್ತಿಯ ಕೊರತೆ ಇದೆ ಎಂಬುದನ್ನು ಮನಗಂಡಾಗ. ಸ್ವಾತಂತ್ರ್ಯ ಚಳುವಳಿ 'ನಮ್ಮ'ದೆಂಬುದರ ಕೊರತೆಯನ್ನು ಅನುಭವಿಸಿದಾಗ, ಅಂದರೆ ಸೂಟುಬೂಟಿನವರ ಸಾಂಘಿಕ ಚಳುವಳಿ ಆಗಿದ್ದಾಗ ನಮ್ಮದು ಎಂಬುದು ಸಂವೃದ್ಧವಾಗಿರುವುದು ನಮ್ಮ ಜಾನಪದ ಜೀವನವಿಧಾನದಲ್ಲಿ ಎಂಬುದನ್ನು ದರ್ಶಿಸಿದರು. ಈ ನಮ್ಮದನ್ನು 'ದೇಶಿ' ಎಂದು ವಿವರಿಸಿಕೊಂಡರು. ಇವರಿಗೆ ಜಾನಪದಗೀನಪದ ಅಂಥ ಗೊತ್ತಿರಲಿಲ್ಲ. ಪಾಶ್ಚಾತ್ಯರನ್ನು ಓದಿ ತರ್ಜುಮೆ ಮಾಡಿದವರು ಈ ದೇಶಿಗೆ ಜಾನಪದ ಎಂದು ಕರೆದರು.

ಸಮಸ್ತರೂ ಹಂಚಿಕೊಳ್ಳಬಹುದಾದ ಬದುಕನ್ನು ದೇಶಿ ಎಂದು ನಾವು ಗ್ರಹಿಸಿದ್ದೇವೆ. ಭಾರತದ ಬಹುತೇಕ ಜೀವನ ವಿಧಾನ ದೇಶಿ ಆಗಿತ್ತು ಮತ್ತು ಆಗಿದೆ. ಶಿಷ್ಟ ಎಂಬುದು ಆಸ್ಥಾನ, ಅಗ್ರಹಾರ ಮತ್ತು ಮಠಮಾನ್ಯಗಳ ಸಂಸ್ಕೃತಿಯಾಗಿತ್ತು . ಅಲ್ಲೂ ಕೂಡ ಮಂತ್ರ ಪಠಣ ಶಿಷ್ಟವಾದರೆ ಮನೆಯ ಬದುಕು ದೇಶೀಯವೆ. ಭಾರತೀಯ ಶಿಷ್ಟ ಎನ್ನುವುದು ಒಂದು ಸಂವೃದ್ಧ ಹಾಗೂ ಸಮರ್ಥ ಸಂಸ್ಕೃತಿ ಅಲ್ಲ, ಅದೊಂದು ತಂತ್ರಗಾರಿಕೆಯ ಕಟ್ಟು ಕಥೆ, ಯಜಮಾನಿಕೆ, ಜೀವನದೃಷ್ಟಿಯಿಂದ ಹೇಳುವುದಾದರೆ ಒಂಟಿತನ. ಇದು ದೇಶಿಯನ್ನು ಬಳಕೆಗೆ ಇಟ್ಟುಕೊಂಡಿತ್ತು. ಆದರೆ ಅದನ್ನು ನಾಶ ಮಾಡುವ ಶಕ್ತಿ ಇರಲಿಲ್ಲ. ಜಾನಪದ ಒಂದು ಪ್ರತ್ಯೇಕ ವಿಷಯ ಎಂಬ ಚಿಂತನೆಯನ್ನು ಮೂಡಿಸಿದ್ದು ಪಾಶ್ಚಾತ್ಯ ಕೈಗಾರಿಕಾ ಜಗತ್ತು. ಅವರ ಶಿಷ್ಟ ನಮ್ಮವರ ಶಿಷ್ಟದಂತೆ ಶಾಸ್ತ್ರ ಪುರಾಣ ಆಗಿರಲಿಲ್ಲ, ಒಟ್ಟು ಕೈಗಾರಿಕೀಕರಣವೆಂಬುದೆ ಅವರ ಶಿಷ್ಟವಾಗಿ ಅದು ಇಂಗ್ಲೆಂಡ್ ಹಾಗೂ ತನ್ನ ಆಳ್ವಿಕೆಯ ದೇಶಗಳ ದೇಶೀ ಜೀವನ ವಿಧಾನವನ್ನು ಅಸ್ತವ್ಯಸ್ತಗೊಳಿಸಿತು. ಜೀವನ ನಗರೀಕರಣ ಮತ್ತು ದೇಶೀಯತೆ ಎಂಬ ಎರಡು ಹೋಳುಗಳಲ್ಲಿ ಸ್ಪಷ್ಟವಾಗಿ ಒಡೆದುಕೊಂಡಿತು. ಶಿಷ್ಟವು ಆಳುವ ಮತ್ತು ವಸ್ತು ಸಂಸ್ಕೃತಿ ಎಂದೂ ದೇಶಿ ಸಾಮಾನ್ಯರ ಮತ್ತು ತಾತ್ವಿಕ ಸಂಸ್ಕೃತಿಯೂ ಆಗಿ ನಿರ್ವಚಿಸಲ್ಪಟ್ಟವು. ಈ ಹಿನ್ನೆಲೆಯಲ್ಲಿ ನೋಡಿದಾಗ ಪಾಶ್ಚಾತ್ಯ ಶಿಷ್ಟವೆಂಬುದು ವಸ್ತು ಸಂಸ್ಕೃತಿಯ ಅರ್ಥದಲ್ಲಿದ್ದು ಇದನ್ನು ಆಧುನಿಕ ಎಂದು ಕರೆದುಕೊಳ್ಳಲಾಗಿದೆ. ನಮ್ಮ ಶಿಷ್ಟ ಜಾತಿಸಂಸ್ಕೃತಿಯ ನೆಲೆಯಲ್ಲಿದೆ. ಆದರೆ ನಮ್ಮ ಜಾತಿಗಳನ್ನು ಕೇವಲ ವಸ್ತು ಸಂಸ್ಕೃತಿಯ ನೆಲೆಗಳು ಎಂದು ಕರೆಯಲಾಗದು.

ಪಾಶ್ಚಾತ್ಯ ಶಿಷ್ಟ ಮತ್ತು ಭಾರತೀಯ ಶಿಷ್ಟ ಒಂದೇ ಅಲ್ಲ. ಅದೇ ರೀತಿ ಪಾಶ್ಚಾತ್ಯ ಜಾನಪದ ಪರಿಕಲ್ಪನೆ ಮತ್ತು ಭಾರತೀಯ ಜಾನಪದ ಪರಿಕಲ್ಪನೆ ಸಮಾನಾರ್ಥಕ ಅಲ್ಲ. ಪಾಶ್ಚಾತ್ಯ ಜಾನಪದ ಅವರ ಶಿಷ್ಟ ಅಥವ ಅದಕ್ಕೆ ಸಮಾನ ಅಲ್ಲದ ಒಂದು ಜೀವನ ವಿಧಾನ ಎನ್ನುವುದಕ್ಕಿಂತ ಒಂದು ವಿಧದ ಸಾಮಗ್ರಿ ಸ್ವರೂಪ ಎನ್ನಬಹುದು. ಜೀವಂತ ಪಳೆಯುಳಿಕೆ ಮತ್ತು ಆಧುನಿಕ ದೂರವಾದ ಅಥವಾ ಆಧುನಿಕತೆಯ ಒಳಗೆ ಇರುವ ಆದರೆ ಆಧುನಿಕವಲ್ಲದ ಬದುಕು ಎಂದು ಕರೆದರು. ನಮ್ಮ ಜಾನಪದವೆಂಬುದು ಬೇರೆ ಬೇರ ಕಾಲಗಳಲ್ಲಿ ಸ್ಥಳಗಳಲ್ಲಿ ಮತ್ತು ಸ್ಥಿತಿಗಳಲ್ಲಿ ಬದುಕುತ್ತಿರುವ ಜನಪದಗಳ ಜೀವನ ವಿಧಾನ ಎಂದು ಕರೆಯಬಹುದು. ಇದು ಈ ದೇಶದ ದೇಶಿ ಎಂದರೆ ಬಹುಥರಗಳಲ್ಲಿ ಬದುಕುತ್ತಿರುವ ಬಹು ಸಂಸ್ಕೃತಿಗಳ ನಿತ್ಯದ ಜೀವನ ವಿಧಾನ. ಆದ್ದರಿಂದ ಪಾಶ್ಚಾತ್ಯ ಜಾನಪದ ಎಂಬ ಪದ ನಮ್ಮ ದೇಶಿ ಎಂಬ ಪದಕ್ಕೆ ಸಮಾನಾರ್ಥಕ ಅಲ್ಲ. ನಮ್ಮ ದೇಶೀ ಪರಿಕಲ್ಪನೆ ಜಾನಪದ ಪರಿಕಲ್ಪನೆಗಿಂತ ವಿಸ್ತಾರವಾದ ಅರ್ಥ ವ್ಯಾಪ್ತಿಯನ್ನು ಉಳ್ಳದ್ದು ಹಾಗೂ ಸಜೀವ ಜೀವನಕ್ರಮವನ್ನು ಕುರಿತದ್ದು.

ನಮ್ಮ ಜಾನಪದ ವಿದ್ವಾಂಸರು ಜಾನಪದದ ಸರಿಯಾದ ಅರ್ಥವನ್ನು ಹುಡುಕಲು 'ಸ್ಟಾಂಡರ್ಡ್ ಡಿಕ್ಷನರಿ ಆಫ್ ಫೋಕ್‌ಲೋರ್ ಅಂಡ ಮೈಥಾಲಜಿ' ಕೃತಿಗೆ ಹೋಗ ಬೇಕಾಗಿರಲಿಲ್ಲ. ನಮ್ಮ ಪಂಪ, ರನ್ನ, ಬ್ರಹ್ಮಶಿವ, ನಯಸೇನ, ಕುಮಾರವ್ಯಾಸ, ರತ್ನಕರವರ್ಣಿ, ಕನಕದಾಸ ಮೊದಲಾದ ಕೆಲವು ಕವಿಗಳನ್ನು ಆಳದಲ್ಲಿ ಅರ್ಥಮಾಡಿಕೊಂಡಿದ್ದರೆ ಸಾಕಾಗಿತ್ತು. ಕನಕದಾಸರ ರಾಮಧಾನ್ಯ ಚರಿತೆ ಒಂದನ್ನು ಶ್ರದ್ಧೆಯಿಂದ ಓದಿದ್ದರೆ ನಮ್ಮ ಜಾನಪದ ಪರಿಕಲ್ಪನೆಯ ಬೀಜ ಅಲ್ಲಿರುವುದು ಗೊತ್ತಾಗುತ್ತಿತ್ತು. ಶಿಷ್ಟ ದೇಶಿಯನ್ನು ಹೆದರಿಸುವ, ದೇಶೀ ಶಿಷ್ಟರ ಮರ್ಯಾದೆಯನ್ನು ಉಳಿಸಿಕೊಡುವ ಔದಾರ್ಯದಲ್ಲಿ ಜಾನಪದವಿದೆ. ಇದು ಪಾಶ್ಚಾತ್ಯ ಅರೆಸತ್ತ ಜಾನಪದವಲ್ಲ ನಿತ್ಯ, ನಿರಂತರ ಜೀವನಮುಖಿಯಾದ ಜಾನಪದ. ಇನ್ನು ಮುಂದೆ ನಾವು ಜಾನಪದ ಪದವನ್ನು ಬಿಟ್ಟು ಸಂಸ್ಕೃತಿ ಅನುಸಂಧಾನ ಪ್ರಕ್ರಿಯೆಯಾದ ದೇಶಿಯನ್ನೆ ಬಳಸಬಹುದಾಗಿದೆ.

ಪಾಶ್ಚಾತ್ಯ ಜಾನಪದ ಪರಿಕಲ್ಪನೆಯನ್ನು ಇಟ್ಟುಕೊಂಡು ಜಾನಪದ ಕ್ಷೇತ್ರ, ಕ್ಷೇತ್ರ ಕಾರ್ಯಕರ್ತ, ಮತ್ತು ವಕ್ತೃಗಳನ್ನು ಹುಡುಕುತ್ತಿರುವ ಜಾನಪದ ವಿದ್ವಾಂಸರ ಸ್ಥಿತಿಗತಿಯನ್ನು ನೋಡಿದರೆ ನಾಚಿಕೆಯಾಗುತ್ತದೆ. ನಮ್ಮ ಜನಪದ ಕಥೆಯ ಅಜ್ಜಿಯೊಬ್ಬಳು, ತನ್ನ ದಡ್ಡ ಮಗ ಹೆಂಡತಿ ಊರಿಗೆ ದಾರಿ ಯಾವುದು ಎಂದು ಕೇಳಿದಾಗ ಆಕೆ ಊರೂರ ಮೇಲೆ ಹೋಗು ಎಂದಳಂತೆ. ಆತ ಊರೂರ ಮನೆಗಳ ಮೇಲೆ ಹತ್ತಿ ಹೋಗುತ್ತಿರುವಾಗ ಊರ ಜನ ಇದೇನು ಆಶ್ಚರ್ಯ ಎಂದು ಬೆರಗಾಗಿ ನೋಡಿದರಂತೆ. ಇದೇ ನಮ್ಮ ಜಾನಪದ ವಿದ್ವಾಂಸರ ಸ್ಥಿತಿಯೂ ಆಗಿದೆ. ಈ ದೇಶದ ೨% ಪ್ರದೇಶ, ೨% ಜನ ಮತ್ತು ೨% ವಿದ್ಯಾವಂತರನ್ನು ಬಿಟ್ಟರೆ ಉಳಿದುದೆಲ್ಲ ಜಾನಪದ ಕ್ಷೇತ್ರವೆ ಮತ್ತು ವಕ್ತೃಗಳೇ ಆಗಿದ್ದಾರೆ. ಅದು ತಿಳಿಯದೆ ತಮಗೆ

ತಾವೇ ಫಾರಿನ್ ಆಗುವ ಜಾನಪದ ವಿದ್ವಾಂಸರ ಮೈಮರೆವೆಯನ್ನು ಕಂಡು ಏನು ಹೇಳಬೇಕೊ ತಿಳಿಯದು. ನಮ್ಮ ಜಾನಪದ ಅಧ್ಯಯನ ಎಡವಿ ಬಿದ್ದಿರುವುದು ಇಲ್ಲಿ. ಇದನ್ನು ಪುರಾತನ ಕಾಲದ ಬ್ರಾಹ್ಮಣಿಕೆ ಮಾದರಿ ಎನ್ನಬಹುದು. ಈಗಲೂ ನನಗೆ ಈ ಕರ್ಮಠ ಜಾನಪದ ವಿದ್ವಾಂಸರಿಗಿಂತ ನವೋದಯ ಕಾಲದ ಕವಿಚಿಂತಕರಾದ ಬಿಎಂಶ್ರೀ, ಬೆಟಗೇರಿ ಕೃಷ್ಣಶರ್ಮ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೇಂದ್ರೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕುವೆಂಪು ಮೊದಲಾದವರು ನಿಜವಾದ ಕ್ರಿಯಾಶೀಲ ಜಾನಪದತಜ್ಞರು ಎನಿಸುತ್ತದೆ. ಹೆಚ್ಚಿನ ಪಾಲು ತಮ್ಮ ಚಿಂತನೆಯನ್ನು ಜಾನದಪದ ಸಾಹಿತ್ಯಕ್ಕೆ ಸೀಮಿತಗೊಳಿಸಿದರು ಎನ್ನುವುದನ್ನು ಬಿಟ್ಟರೆ ಅವರ ಚಿಂತನೆಯ ಒಳನೆಲೆಯಲ್ಲಿ ದೇಶಿ ಎಂಬ ಸೃಜನಶೀಲವಾದ ಜಾನಪದ ಪರಿಕಲ್ಪನೆ ಗೋಚರವಾಗುತ್ತದೆ. ಹಾಗೆ ನೋಡಿದರೆ ಈ ಅರೆ ಸತ್ತ ಪಾಶ್ಚಾತ್ಯ ಜಾನಪದ ಪರಿಕಲ್ಪನೆಯಿಂದಲೇ ನಮ್ಮ ಜಾನಪದ ಅಧ್ಯಯನ ಹಿಂದೆ ಬೀಳುತ್ತಿದೆ.

ನಮ್ಮ ಜಾನಪದ ವಿದ್ವಾಂಸರು ನಮ್ಮ ದೇಶದ ಸಾಂಸ್ಕೃತಿಕ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲಿಲ್ಲ, ಪಾಶ್ಚಾತ್ಯ ಜಾನಪದ ಗ್ರಹಿಕೆ ಮತ್ತು ಪರಿಕಲ್ಪನೆಯ ಹುಟ್ಟಿಗೆ ಇದ್ದ ಸಾಂಸ್ಕೃತಿಕ ಇತಿಹಾಸದಂತೆ ನಮ್ಮದೊಂದು ವಿಶಿಷ್ಟವೆನ್ನಬಹುದಾದ ಸಾಂಸ್ಕೃತಿಕ ಇತಿಹಾಸ ಇದೆ ಎನ್ನುವುದನ್ನು ತಿಳಿಯದ ಕಾರಣ ನಮ್ಮ ಜಾನಪದ ಅಧ್ಯಯನ ಕೈಕಟ್ಟಿ ಕುಳಿತಿದೆ. ಜಾನಪದ ಅಧ್ಯಯನದ ಜೊತೆಯಲ್ಲಿಯೆ ಹಳ್ಳಿಗೆ ಸಾಂಸ್ಕೃತಿಕ ಯಜಮಾನಿಕೆಯ ನೇತೃತ್ವ ಬಂದಿರುವುದನ್ನು ಗುರುತಿಸಿ. ಇದೊಂದು ದಿಢೀರ್ ಕ್ರಿಯೆಯಲ್ಲ. ಭಾರತದ ಉಚ್ಚ ಸಂಸ್ಕೃತಿ ಎದುರಾದ ಸ್ಥಾಯಿ ಪ್ರತಿಭಟನೆಯ ಧ್ವನಿಗಳು ಇಲ್ಲಿವೆ. ನಗರದಿಂದ ಹಳ್ಳಿಗೆ ಮಾರ್ಗದರ್ಶನ ಸ್ಥಾನ ಬಂದಂತಿದೆ. ಜನಪದ ಗೀತೆಗಳನ್ನು ಸಂಗ್ರಹಿಸಿ ಪುಸ್ತಕ ಪ್ರಕಟಿಸಿದವರ ಉದ್ದೇಶವನ್ನು ಕುರಿತ ಪ್ರಸ್ತಾವನೆ ಮತ್ತು ಮುನ್ನುಡಿಗಳನ್ನು ಓದಿ ನೋಡಿ ಇಡೀ ದೇಶದ ಶೀಲ ಮತ್ತು ಅಭಿವೃದ್ಧಿ ಹಳ್ಳಿಯ ಕೇಂದ್ರದಲ್ಲಿದೆ. ಹಳ್ಳಿ ಚಲಿಸಿದರೆ ದೇಶ ಚಲಿಸುತ್ತದೆ ಎಂಬ ತತ್ವ ಪ್ರಣೀತವಾಗಿದೆ. ಇದರ ಮೂಲ ಕೇಂದ್ರ, ಗಾಂಧೀಜಿ ಎಂಬುದು ನಿಜವಾದರೂ ದೇಶದ ಸ್ವಾತಂತ್ರ್ಯದ ಉದಯದ ಜೊತೆಗೇ ಸಹಜವೆಂಬಂತೆ ಗ್ರಾಮಕೇಂದ್ರಿತ ಚಿಂತನೆ ಅಸ್ತಿತ್ವ ಪಡೆದಿದೆ. ಈ ಕೇಂದ್ರದಲ್ಲಿ ಗಾಂಧಿ ಮೂಲಕ ರೈತ ಮತ್ತು ಅಂಬೇಡ್ಕರ್ ಮೂಲಕ ದಲಿತ ಪ್ರೊಜೆಕ್ಟ್ ಆಗಿದ್ದಾರೆ.

ನಮ್ಮ ಜಾನಪದ ಅಧ್ಯಯನದಲ್ಲಿ ಹಳ್ಳಿ ಸಾಂಸ್ಕೃತಿಕ ಯಜಮಾನಿಕೆಯನ್ನು ವಹಿಸಿಕೊಂಡಿದೆ. ಇಲ್ಲಿ ಭಾಷಾ ಯಜಮಾನಿಕೆಯ ಜೊತೆಗೆ ನವೀಕೃತ ರಾಜ್ಯ ಶಕ್ತಿಯೂ ಸೇರಿಕೊಂಡಿದೆ. ಈ ಸಂಚಯ ಬರುಬರುತ್ತ ದೇಶದ ಶಕ್ತಿಯನ್ನು ಬ್ರಾಹ್ಮಣಿಕೆಯಲ್ಲೂ, ರಾಜ್ಯದ ಶಕ್ತಿಯನ್ನು ಶೂದ್ರತ್ವದಲ್ಲೂ ನಿರ್ವಚಿಸಿತು. ಈವೊಂದು ಪ್ರಬಲ ಶಕ್ತಿ ಜಾನಪದ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನಕ್ಕೆ ದೊಡ್ಡ ಚಾಲನೆ ಕೊಟ್ಟಿತು. ಭಾರತದ ಸಂದರ್ಭದಲ್ಲಿ 'ಗಾದೆ ವೇದಕ್ಕೆ ಸಮ' ಎಂಬ ಗ್ರಾಮೀಣ ಅನುಭವ ಜ್ಞಾನವನ್ನು ಎತ್ತಿಕೊಂಡು ಶೋಷಿತ

ಪುರೋಹಿತಶಾಹಿ ಜ್ಞಾನಕ್ಕೆ ಪರ್ಯಾಯವಾಗಿ ಜನಪರಜ್ಞಾನದ ನೆಲೆಯಾದ ಜಾನಪದವನ್ನು ಎತ್ತಿಹಿಡಿಯಲಾಯಿತು. ಇದರಿಂದಾಗಿ ಜಾನಪದವನ್ನು ಮೊತ್ತದಲ್ಲಿ ಉಳಿಸುವ ತುರ್ತು ಹೆಚ್ಚಾಯಿತು. ಕೂಡಲೇ ರೈತಾಪಿ ವರ್ಗದ ವಿದ್ಯಾವಂತ ಜನ ಜಾನಪದವನ್ನು ತಮ್ಮ ಸಂಪತ್ತೆಂದೂ ಅದು ಕಳೆದುಹೋದರೆ ಮತ್ತೆ ಸಿಗುವುದಿಲ್ಲವೆಂದೂ ಬಹಳ ತುರ್ತಾಗಿ ಅದನ್ನು ಸಂಗ್ರಹಿಸಿ ವಿವರಿಸಿಕೊಳ್ಳಬೇಕೆಂಬ ಹಟಕ್ಕೆ ಬಿದ್ದರು. ಪ್ರತಿಯೊಂದು ರಾಜ್ಯದಲ್ಲಿಯೂ ಈ ಕೆಲಸ ನಡೆದಿದೆ. ಆದರೆ ಇದನ್ನು ಮತೀಯ ಸ್ವಭಾವದ ಬೆಳವಣಿಗೆ ಎಂದು ಕರೆಯುವಂತಿಲ್ಲ, ಭಾರತದ ಅನೇಕ ಬ್ರಾಹ್ಮಣ ವಿದ್ವಾಂಸರು ನಿಷ್ಠೆಯಿಂದ ಜಾನಪದ ಸಂಗ್ರಹವನ್ನು ಮಾಡಿ ಅಧ್ಯಯನ ಮಾಡಿದ್ದಾರೆ. ಈ ಎರಡೂ ವರ್ಗದ ಹಿಂದೆ ಹೊರದೇಶದಿಂದ ಬಂದು ಜಾನಪದ ಸಂಗ್ರಹ ಮತ್ತು ಅಧ್ಯಯನ ಮಾಡಿದವರಿದ್ದಾರೆ. ಇದನ್ನು ಭಾರತದ ಸಾಂಸ್ಕೃತಿಕ ಚಲನೆಯ ಅಂತರಗಳಲ್ಲಿ ನಡೆಯುವ ವೈದಿಕ ಶೂದ್ರರ ಸಾಂಸ್ಕೃತಿಕ ಮುಖಾಮುಖಿ ಎಂದಷ್ಟೆ ಕರೆಯಬಹುದು.

ಈ ಪ್ರಕ್ರಿಯೆಯಲ್ಲಿ ಶೂದ್ರರ ಹೆಸರಿನಲ್ಲಿ ಕೆಲಸ ಮಾಡದಿದ್ದರೂ ಆವೊಂದು ವರ್ಗ ಮುಖ್ಯ ಧಾರೆಯಲ್ಲಿದೆ. ಆದರೆ ಇವರು ತಮ್ಮ ಬದ್ಧತೆಯಲ್ಲಿ ದಾರಿ ತಪ್ಪಿರುವುದೂ ಎದ್ದು ಕಾಣುತ್ತದೆ. ಇವರ ರೈತಾಪಿ ಅಥವಾ ಗ್ರಾಮೀಣ ಚಿಂತನೆ ಗ್ರಾಮದಲ್ಲೇ ಇದ್ದ ಬಹುಸಂಖ್ಯಾತ ಮತ್ತು ಆ ಮಟ್ಟದ ಸ್ಥಿತಿವಂತ ಜನರ ಚಟುವಟಿಕೆಗೆ ಸೀಮಿತವಾಗಿದೆ. ದಲಿತ ಮತ್ತು ತಳವರ್ಗದ ಜನ ಈ ವರ್ಗದ ಜನರನ್ನು ದಾಟಬೇಕೆಂಬ ಕಾರಣಕ್ಕೆ ತಮ್ಮ ಪಾರಂಪರಿಕಜ್ಞಾನ ಪ್ರಸ್ತುತ ಸಂದರ್ಭಕ್ಕೆ ಅವಮಾನಕರ ಎಂದು ಭಾವಿಸಿದಂತೆ ಕಾಣುತ್ತದೆ. ದೇಶದ ಮಟ್ಟದಲ್ಲಿ ವೈದಿಕ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಬಲರಾಗಿರುವ ರೈತಾಪಿ ಜನರ ಸಂಸ್ಕೃತಿಯ ದಬ್ಬಾಳಿಕೆಯ ಪ್ರತಿಫಲವೇ ತಮ್ಮ ಜನಪದ ಸಂಸ್ಕೃತಿ ಎಂದೂ ಅದರ ನಿರಾಕರಣೆಯಿಂದಲೇ ತಮ್ಮ ಬಿಡುಗಡೆ ಸಾಧ್ಯವೆಂದು ಈ ಜನವರ್ಗ ಭಾವಿಸಿದ್ದರ ಕಾರಣವಾಗಿ ಅವರು ಜಾತಿ ಶೋಷಣೆಗೆ ಬೇರೆ ಯಾದ ತಮ್ಮದೇ ಬದುಕಿನ ಜ್ಞಾನ ಇದೆ ಮತ್ತು ಅದನ್ನು ಪುನರ್ ಸಂಘಟಿಸಿಕೊಂಡು ಎದುರು ನಿಲ್ಲಬೇಕೆಂಬ ಮನೋಧರ್ಮವನ್ನು ಬೆಳೆಸಿಕೊಂಡಂತೆ ಕಾಣಲಿಲ್ಲ. ಬಹುತೇಕ ತಳ ಮತ್ತು ಕೆಳಹಂತದ ಜನ ಜಾತಿಯ ಶೋಷಣಾ ಸಂಸ್ಕೃತಿಯ ವಿರುದ್ಧ ಎದುರು ನಿಲ್ಲುವಾಗ ದಲಿತರಂತೆಯೆ ಜಾತಿಹೇರಿಕೆಗೆ ಹೊರತಾಗಿ ತಾವು ಭೂಮಿಯ ಜೊತೆಗಿದ್ದು ಪಡೆದುಕೊಂಡ ಅಸಲಿ ಜ್ಞಾನವನ್ನೂ ಜಾತಿ ಸಮಾಜದ ಹೇರಿಕೆ ಎಂದು ತಿರಸ್ಕರಿಸಿದ್ದಾರೆ. ಇತ್ತೀಚಿನ ಆಫ್ರಿಕಾ ಖಂಡದ ಸಾಂಸ್ಕೃತಿಕ ಚಲನೆಯಿಂದಾಗಿ ಈ ವರ್ಗದ ಪ್ರಜ್ಞಾವಂತ ಜನ ಭಿನ್ನ ನೆಲೆಯಲ್ಲಿ ಯೋಚಿಸಲು ತೊಡಗಿದ್ದಾರೆ.

ಚಿಂತನೆ ಮತ್ತು ಅಭಿವೃದ್ಧಿ ಕೇಂದ್ರ, ಈಗ ನಗರಕ್ಕೆ ಬಂದಿದೆ. ಹಳ್ಳಿಯಲ್ಲಿ ರೈತ ಪ್ರಾಧಾನ್ಯತೆ ಇಲ್ಲ. ರೈತ ಕೂಡ ಜಮೀನುಳ್ಳ ಕೂಲಿಯಾಗಿದ್ದಾನೆ. ಇವನ ಜನಪದದ ಅಸ್ತಿತ್ವ

ವಿಘಟನೆಗೊಂಡಿದೆ. ರೈತನ ಜೊತೆಗೆ ಇದ್ದ ಜನಪದ ಕಲಾಕಾರರು ಈಗ ನಗರದ ಕಡೆಗೆ ಮುಖ ಮಾಡಿದ್ದಾರೆ. ಅವರು ತಮ್ಮ ಕಲಾ ಪ್ರದರ್ಶನಕ್ಕೆ ಅವಕಾಶ ನೀಡಿರೆಂದು ಸರ್ಕಾರಿ ಮತ್ತು ಖಾಸಗಿ ಮಾಲೀಕರ ಕಡೆ ಅರ್ಜಿ ಹಿಡಿದು ನಿಂತಿದ್ದಾರೆ. ಕಲೆ ನಮ್ಮ ಸಂಸ್ಕೃತಿ ಮತ್ತು ನಮ್ಮ ಐಡೆಂಟಿಟಿ ಎಂಬ ಮನೋಭಾವ ಉಳಿದಿಲ್ಲ. ನಗರಕ್ಕಾಗಿ ತಮ್ಮದಾದ ಯಾವುದನ್ನೂ ಮಾರಲು ಸಿದ್ಧರಿದ್ದಾರೆ. ತಮ್ಮಲ್ಲಿ ಆಚರಣೆಯಾಗಿದ್ದ ಕಲೆ ಹೊರಗೆ ಮನರಂಜನೆಯಾಗಿದೆ. ಹಾಗೆ ತಮ್ಮ ಆಚರಣಾ ಕಲೆಯನ್ನು ಹಣಕ್ಕಾಗಿ ಮನರಂಜನೆ ಮಾಡಲು ಅವರಿಗೆ ಅಳುಕೇನೂ ಇಲ್ಲ. ಹೀಗೆ ಹಳ್ಳಿ ನಗರಕ್ಕೆ ಸರಕಾಗಿರುವುದರಿಂದ ಗ್ರಾಮ ಕೇಂದ್ರದಲ್ಲಿಟ್ಟು ಜಾನಪದವನ್ನು ನಿರ್ವಚಿಸಿಕೊಳ್ಳಲು ಆಗದು. ಒಂದು ದೊಡ್ಡ ಜೀವನಕ್ರಿಯೆಯಾಗಿ ಬಂದಿರುವ ಜಾನಪದವನ್ನು ಹಳ್ಳಿಯ ಸರಕು ಎಂದು ಹೇಳುವುದು ಕೂಡ ಆಗದು.

ಗ್ರಾಮಕೇಂದ್ರ, ಪ್ರಭುಕೇಂದ್ರ, ನಗರ ಕೇಂದ್ರ ಮತ್ತು ತಂತ್ರಜ್ಞಾನ ಕೇಂದ್ರಗಳೆಂಬ ಜೈಲುಗಳಿಂದ ಜಾನಪದವನ್ನು ಬಿಡಿಸಿಕೊಳ್ಳಬೇಕಿದೆ. ಮೊತ್ತದ ಸಂಪಾದನೆ ಮತ್ತು ಮೊತ್ತದ ಬದುಕನ್ನು ಬದುಕದೆ ಹಂಚಿಕೊಂಡು ಬದುಕಿದ ಜನರ ಜೀವನ ಚಿಂತನೆಯನ್ನು ಕೇಂದ್ರ ಚಿಂತನೆಗೆ ಒಳಪಡಿಸಿ ಅಳೆಯುವುದು, ಬಳಿಯುವುದು ಸೂಕ್ತವಾಗಲಾರದು. ಕೇಂದ್ರಗಳು ಹುಟ್ಟುತ್ತವೆ, ಹೋಗುತ್ತವೆ. ಜನ ಎಂಬುವವರು ಮತ್ತು ಅವರ ಜೀವನ ಯಾವಕಾಲಕ್ಕೂ ಇರುತ್ತದೆ. ಅವರ ಜೀವನವೇ ಜಾನಪದವಾಗಿರುತ್ತದೆ. ಆ ನೆಲೆಯಲ್ಲಿ ಮಾತ್ರ ಜಾನಪದವನ್ನು ಗ್ರಹಿಸುವುದು ಮತ್ತು ಪರಿಕಲ್ಪಿಸಿಕೊಳ್ಳುವುದು ಉಚಿತವಾದ ಮಾರ್ಗವಾಗಿರುತ್ತದೆ.

ಈಗಾಗಲೆ ಜಾನಪದವನ್ನು ಪರಿಕಲ್ಪಿಸಿಕೊಂಡಿರುವ ಬಗೆಯನ್ನು ನೋಡಿದರೆ ಜಾನಪದ ಸ್ತಬ್ಧತೆಯಲ್ಲಿ ಕಾಣದು ಎನ್ನುವುದು ಸ್ಪಷ್ಟವಾಗುತ್ತದೆ. ಆ ಬಗೆಗಳನ್ನು ನೋಡಿ.

೧. **ಸ್ಥಳಾಧಾರಿತ ಚಿಂತನೆ**

| | ಸ್ಥಾನ ೧ | ಸ್ಥಾನ ೨ |
|---|---|---|
| ನೆಲೆ | ನಗರ | ಹಳ್ಳಿ |
| ನಿಲುವು | ನಗರೀಕತೆ | ಜಾನಪದ |
| ಪ್ರಕ್ರಿಯೆ | ಆಧುನಿಕತೆ | ಪುರಾತನತೆ |

೨. **ಜೀವನಾಧಾರಿತ ಚಿಂತನೆ**

| | | |
|---|---|---|
| ನೆಲೆ | ಶಿಷ್ಟ | ಪರಿಶಿಷ್ಟ |
| ನಿಲುವು | ಮಾರ್ಗ | ದೇಶಿ |
| ಪ್ರಕ್ರಿಯೆ | ವರ್ಗ ಜೀವನ | ಸಾಮಾನ್ಯ ಜೀವನ |

**೩. ನಡವಳಿಕೆ ಆಧಾರಿತ ಚಿಂತನೆ**

| | | |
|---|---|---|
| ನೆಲೆ | ಸಂಸ್ಕರಿತ | ಪ್ರಾಕೃತ |
| ನಿಲುವ | ಆವೃತ | ಅನಾವೃತ |
| ಪ್ರಕ್ರಿಯೆ | ಒಂದು ಪದ್ದತಿ | ಪದ್ದತಿಗಳ ಕ್ರಿಯೆ |

**೪. ಅಭಿವ್ಯಕ್ತಿ ಆಧಾರಿತ ಚಿಂತನೆ**

| | | |
|---|---|---|
| ನೆಲೆ | ಪಠ್ಯ | ಸಾಂದರ್ಭಿಕ |
| ನಿಲುವು | ಬರಹ | ಪ್ರದರ್ಶನ |
| ಪ್ರಕ್ರಿಯೆ | ಏಕಸೃಷ್ಟಿ | ಪುನರ್‌ಸೃಷ್ಟಿ |

**೫. ಜನಾಧಾರಿತ ಚಿಂತನೆ**

| | | |
|---|---|---|
| ನೆಲೆ | ಪೌರೋಹಿತ | ಜನರಿಂದ ಜನರಿಗಾಗಿ |
| ನಿಲುವು | ಪರಿಷ್ಕೃತ | ತಲೆಮಾರು |
| ಪ್ರಕ್ರಿಯೆ | ಉವಾಚ ನಿರ್ದೇಶಿತ | ಹಲವು ಜನ ಹಲವು ಮನ |

**೬. ಭವಿಷ್ಯವಾದಿ ಚಿಂತನೆ**

| | | |
|---|---|---|
| ನೆಲೆ | ಔದ್ಯಮಿಕ | ಹಂಚಿಕೊಂಡ |
| ನಿಲುವು | ಸಂಗ್ರಹಿಸು | ಉಳಿಸು |
| ಪ್ರಕ್ರಿಯೆ | ಬಳಸು ಮತ್ತು ಬಿಸಾಡು | ಬಳಸು ಮತ್ತು ಉಳಿಸು |

ಮೇಲಿನ ಚಿಂತನಾಕ್ರಮಗಳನ್ನು ನೋಡಿದರೆ ಜಾನಪದ ಹೋಲಿಕೆ, ವ್ಯತ್ಯಾಸಗಳ ನಿರ್ವಚನದಲ್ಲಿ ಸಿಗುತ್ತಿದೆಯೆ ಹೊರತು ಸ್ವತಂತ್ರ ಸ್ಥಿತಿಯಲ್ಲಿ ಅಲ್ಲ. ಹಾಗೆ ನೋಡಿದರೆ ಅದು ನಿರಂತರ ಬದುಕಿಗೆ ಅಡ್ಡಿಯಾದಂತಿದೆ ಇಲ್ಲವೆ ಒಂದು ಕಾಲಘಟ್ಟದಲ್ಲಿ ನಿಂತು ಕಳೆದು ಹೋದಂತಿದೆ. ಈ ಬಂಧಿತ ಸ್ಥಿತಿಯಿಂದ ಹೊರಗೆ ಬದುಕಿನ ಸ್ಥಿತಿಯಲ್ಲಿ ಜಾನಪದವನ್ನು ಗ್ರಹಿಸಿ ಪರಿಕಲ್ಪಿಸಿಕೊಳ್ಳಬೇಕಿದೆ.

ಜಾನಪದ ಎಷ್ಟೆಲ್ಲ ಅವಾಂತರಕ್ಕೆ ಒಳಗಾಗಲು ಹದಿನೆಂಟನೆಯ ಶತಮಾನದಲ್ಲಿ ಅವತರಿಸಿದ ಉದ್ಯಮಪತಿ ಆಧಾರಿತ ತಂತ್ರಜ್ಞಾನ. ಜೀವನದ ಅಭಿವೃದ್ದಿಗೆ ಯಾಹೊತ್ತೂ ತಂತ್ರಜ್ಞಾನ ಬೇಕು. ಆದರೆ ಬಹುಜನರನ್ನು ಕೂಲಿಗಳನ್ನಾಗಿಯೂ ಕೆಲವರನ್ನು ಮಾತ್ರ

---

ನೆಲೆ = ನಿಂತ ಸ್ಥಳ, ಸಂಸ್ಕೃತಿ ಪ್ರದೇಶ, ಇತಿಹಾಸವುಳ್ಳ ಪ್ರದೇಶ

ನಿಲುವು = ಬದುಕಲು ಒಪ್ಪಿಕೊಂಡ ಮಾರ್ಗ, ತೆರೆದುಕೊಂಡ ನಿರ್ಧಾರ

ಪ್ರಕ್ರಿಯೆ = ಬದುಕುವ ಕ್ರಮ; ಒಪ್ಪಿಕೊಂಡ ನಿಲುವಿಗೆ ಅನುಗುಣವಾಗಿ ಹೇಗಿದೆ ಮತ್ತು ಹೇಗಿಲ್ಲ ಎಂಬುದು.

ಪತಿಗಳನ್ನಾಗಿಯೂ ಮಾಡುವ ಜ್ಞಾನ ಜೀವ ಹಾಗೂ ಜನವಿರೋಧಿ. ಅಂಥ ತಂತ್ರಜ್ಞಾನವೆ ಜಾನಪದವನ್ನು ಪಳೆಯುಳಿಕೆ ಅಥವಾ ಜೀವಂತ ಪಳೆಯುಳಿಕೆ ಮಾಡಿತು. ಜಾಗತಿಕ ವಸ್ತುಗಳನ್ನು ಕೊಳ್ಳುವವ, ಅಭಿವೃದ್ಧಿಶೀಲ, ಕೊಳ್ಳದವ ಹಿಂದುಳಿದವ ಎಂಬ ಈ ಹೊತ್ತಿನ ಜಾಗತಿಕ ತತ್ವ ಇದೇ ಮೂಲದಿಂದ ಬಂದದ್ದು. ಆದ್ದರಿಂದ ಪ್ರಸ್ತುತ ಜಾನಪದ ಚಿಂತಕ;

೧. ಕೈಗಾರಿಕಾ - ಉದ್ಯಮೀಕರಣ ಸಂಸ್ಕೃತಿಗೆ ಮಾತ್ರ ಬದ್ಧವಾಗಿ ಬಂದ ಜಾನಪದ ಗ್ರಹಿಕೆಯನ್ನು ಅತ್ತಕಡೆ ಇಡಬೇಕು.

೨. ಜಾನಪದ ಪುರಾತನ, ಹಳೆಯ ಎಂಬ 'ಆಧುನಿಕತೆ' ಪ್ರೇರಿತ ಗುಣವಾಚಕಗಳನ್ನು ಕೈಬಿಡುವುದು.

೩. ಜಾನಪದ ತಂತ್ರಜ್ಞಾನದ ಹೊರಗೆ ಇರುವ ಬುರುಡೆ ತತ್ವಜ್ಞಾನ ಅಲ್ಲ, ಅದು ಕಾಲ ಸಂಬಂಧಿ ತಂತ್ರಜ್ಞಾನವನ್ನು ಒಳಗೊಂಡ ಜೀವನ ವಿಧಾನ ಎನ್ನುವುದನ್ನು ಖಚಿತಪಡಿಸುವುದು.

೪. ಉದ್ಯಮಪತಿಯ ತಂತ್ರಜ್ಞಾನ ಜನ ಮತ್ತು ಜನಪದಕ್ಕೆ ಒಂದು ಆಕರ್ಷಕ ಸೆಳೆತವೆ ಹೊರತು ವಾಸ್ತವ ಅನುಭವಕ್ಕೆ ಬರದು ಎಂದು ತಿಳಿಯುವುದು.

೫. ಜನಪದ ಸಂಸ್ಕೃತಿ ನಿರಂತರ ಸಂಸ್ಕೃತಿ, ಆಧುನಿಕ ಸಂಸ್ಕೃತಿ, ತಾತ್ಕಾಲಿಕ ಸಂಸ್ಕೃತಿ. ಜಾನಪದ ಸಂಸ್ಕೃತಿ ಜೀವನಕ್ಕೆ ಗಾಳಿ ಮತ್ತು ನೀರು ಇದ್ದ ಹಾಗೆ. ಆಧುನಿಕತೆ ತಾರೆಯರು ಕ್ಷಣಕ್ಕೊಂದು ಸೀರೆ ಬದಲಿಸಿದ ಹಾಗೆ.

೬. ಒಟ್ಟೆಂಬ ಸಾರ್ವಕಾಲಿಕ ಜೀವನ ವಿಧಾನವೇ ಜಾನಪದ. ಅದು ಸರಳ, ಸಾಮಾನ್ಯ ಮತ್ತು ಎಲ್ಲರೂ ಹಂಚಿಕೊಳ್ಳಬಹುದಾದದ್ದು.

೭. ಜಾನಪದದಲ್ಲಿ ವಿಶಿಷ್ಟತೆ, ಶ್ರೇಷ್ಠತೆಗಳಿವೆ. ಇವು ಸಾಮುದಾಯಿಕ ಸಾಧನೆಗಳೆ ಹೊರತು ವ್ಯಕ್ತಿನಿಷ್ಠ ಸಾಧನೆಗಳಲ್ಲ. ಉದಾ : ಸಾಮಾನ್ಯ ಊಟ ಮತ್ತು ವಿಶೇಷ ಊಟ.

ಜಾನಪದವನ್ನು ಸರಿಯಾಗಿ ತಿಳಿದುಕೊಳ್ಳುವ ಪ್ರಜ್ಞೆ ನಮ್ಮಲ್ಲಿ ಹುಟ್ಟಬೇಕು. ಜಾನಪದವನ್ನು ತಿಳಿಯುವ ಸಾಮಾನ್ಯತೆ, ಸಮೂಹತೆ, ಸರಳತೆ, ಸೋಪಜ್ಞತೆ ಮತ್ತು ಸಜೀವತೆ ಎಂಬ ಐದು ಪ್ರಜ್ಞೆಗಳಿವೆ. ಇವು ಯಾವ ಸಮೂಹದಲ್ಲಿ ನಡವಳಿಕೆಯಲ್ಲಿವೆಯೋ ಅಲ್ಲಿ ಜಾನಪದ ಅಸಲಿಯಾಗಿರುತ್ತದೆ. ಇವುಗಳ ಕೊರತೆ ಇದ್ದ ಕಡೆ ಜಾನಪದ ನಲುಗಿರುತ್ತದೆ. ಅತಿ ವಿಶಿಷ್ಟತೆ ಮತ್ತು ಶೋಷಣಾಮೂಲದ ಪ್ರತ್ಯೇಕತೆ ಜನಪದ ಬದುಕಿನ ಗಂಡಾಂತರಕಾರಿಗಳು. ಇದಕ್ಕೆ ಸ್ಪಷ್ಟ ಉದಾಹರಣೆಗಳೆಂದರೆ ಜಾತಿ, ಮತೀಯ ಧರ್ಮ ಮತ್ತು ಪ್ರಚೋದಕ ಬದುಕನ್ನು ಹೇಳುವ ವಸ್ತು ಸಂಸ್ಕೃತಿ. ಎಲ್ಲರ ಕೈಗೂ ಸಿಗುವ ತಂತ್ರಜ್ಞಾನ ಮಾನವನ ಅಭಿವೃದ್ಧಿ ಮಾಡುತ್ತದೆ. ಕೆಲವರ ಕೈ ವಶವಾಗಿರುವ ತಂತ್ರಜ್ಞಾನ ಜಾನಪದಗಳಲ್ಲಿ ತಾರತಮ್ಯ ಮಾಡುತ್ತದೆ.

ಸಂಸ್ಕೃತಿ ಮತ್ತು ಧರ್ಮವನ್ನು ಒಂದೇ ಅರ್ಥದಲ್ಲಿ ನೋಡಬಾರದು. ಸಂಸ್ಕೃತಿ ಎಂಬುದು ಬದುಕುವ ಒಟ್ಟು ವ್ಯವಸ್ಥೆ, ಅದರ ನೈತಿಕ ಬಲವೇ ಧರ್ಮ. ಈ ಧರ್ಮ ಇಲ್ಲದ ಸಂಸ್ಕೃತಿ ದುಷ್ಟ ಸಂಸ್ಕೃತಿಯಾಗಿರುತ್ತದೆ. ಧರ್ಮದ ಕೇಂದ್ರ, ದೇವರು ಅಲ್ಲ ; ಸತ್ಯ ಅಥವಾ ನ್ಯಾಯ ನಿಷ್ಠೆ. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮಗಳು ಜಾನಪದ ಧರ್ಮಗಳಲ್ಲ ; ಇವು ವ್ಯಕ್ತಿಗಳು ಹೇಳಿದ ತತ್ವಗಳ ಮೊತ್ತ, ಜನಪದ ಧರ್ಮದ ಸಾರ; 'ನೀ ನನಗಿದ್ದರೆ ನಾ ನಿನಗೆ ನೆನಪಿರಲಿ ನುಡಿ ನಮ್ಮೊಳಗೆ' ಎಂಬುದಾಗಿದೆ. ಜನಪದ ಧರ್ಮ ನ್ಯಾಯ ಸಮ್ಮತವಾದ ಬದುಕು, ಇನ್ನೊಬ್ಬರಿಗೆ ಹೇಳುವ ಬೊಗಳೆ ಅಲ್ಲ. ಜಾತಿಯ ತತ್ವದಲ್ಲಿ ಧರ್ಮ ಇಲ್ಲ. ಜಾನಪದವೂ ಇಲ್ಲ. ಜಾತಿಯನ್ನು ಮರೆತು ಸಾಮಾನ್ಯನಂತೆ ಬದುಕಿದ ಎಲ್ಲರ ಬದುಕಿನಲ್ಲೂ ಜಾನಪದ ಇದೆ.

ಸಾಮಾನ್ಯ ಎಂದರೆ ಯಾವ ಕಾಲಕ್ಕೂ ಸಾಮಾನ್ಯನಾಗಿಯೆ ಇರಬೇಕೆ. ಹೆಚ್ಚಿನ ಅನುಕೂಲಗಳನ್ನು ಅನುಭವಿಸಬಾರದೆ? ಸಾಮಾನ್ಯತೆಯಲ್ಲಿ ಎರಡು ಸ್ಥಿತಿಗಳಿವೆ. ೧. ಸಾರ್ವಕಾಲಿಕ ಸಾಮಾನ್ಯ ೨. ಸಮಕಾಲೀನ ಸಾಮಾನ್ಯ. ಸಾರ್ವಕಾಲಿಕ ಸಾಮಾನ್ಯವೆಂದರೆ ಜಗತ್ತಿನ ಎಲ್ಲ ಮನುಷ್ಯರಂತೆ ಇರುವುದು. ಮನುಷ್ಯ ಸಹಜವಾಗಿ ಅನುಭವಿಸುವ ಎಲ್ಲಾ ಸಾಮಾನ್ಯ ಸುಖಗಳನ್ನು ಅನುಭವಿಸುವುದು. ಸಮಕಾಲೀನ ಸಾಮಾನ್ಯತೆ ಎಂದರೆ ಆಯಾ ಕಾಲದಲ್ಲಿ ಬೆಳೆದ ಎಲ್ಲ ಜ್ಞಾನ-ತಂತ್ರಜ್ಞಾನದ ಸೌಲಭ್ಯಗಳನ್ನು ಎಲ್ಲರೂ ಹೊಂದಿಸಿಕೊಂಡು ಬದುಕುವುದು. ಹಾಗಾದಾಗ ಮಾನವನ ಸಂಬಂಧಗಳು ಲವಲವಿಕೆಯಿಂದ ಕೂಡಿರುತ್ತವೆ. ಲಕ್ಷಾಧಿಪತಿ, ಕೋಟ್ಯಾಧಿಪತಿ ಆಗಲು ಹೊರಟ ತಕ್ಷಣ ಮಾನವನ ಸಂಬಂಧಗಳು ಕುಸಿದು ಬೀಳುತ್ತವೆ. ಜನ-ಜನಪದಗಳ ಮಧ್ಯದ ಸೌಹಾರ್ದತೆ ಕುಸಿದು ಬೀಳುತ್ತದೆ. ಸಾಮಾನ್ಯತೆ ಎಂದರೆ ಬಡತನ ಅಲ್ಲ, ನೈಜವಾದ ಬದುಕು, ಆದ್ದರಿಂದಲೇ ಸಾಮಾನ್ಯತಾ ಸಮಾಜದಲ್ಲಿ ಸಾಮೂಹಿಕತೆ, ಸರಳತೆ, ಸೋಪಜ್ಞತೆ ಮತ್ತು ಸಜೀವತೆಗಳು ಇರುತ್ತವೆ. ಶೋಷಣ ಸಮಾಜದ ಯಜಮಾನರನ್ನು ಉಳಿದು ಆ ಸಮಾಜದ ಬಡವರಲ್ಲೂ ಬಹುಪಾಲು ಸಾಮಾನ್ಯತಾ ಸಂಸ್ಕೃತಿ ನಡವಳಿಕೆಯಲ್ಲಿರುತ್ತದೆ. ಬಡವರು ಎಂಬ ಸ್ಥಿತಿ ಹುಟ್ಟಿಕೊಂಡದ್ದೆ ಶೋಷಣಾಮೂಲದ ಶ್ರೀಮಂತಿಕೆ ಸಂಸ್ಕೃತಿಯಿಂದ. ಸಾಮಾನ್ಯತಾ ಸಮಾಜದಲ್ಲಿ ಬಡತನ ಎಂಬುದು ಇರುವುದಿಲ್ಲ. ಹಾಗೊಂದು ವೇಳೆ ಬಡತನ ಇದ್ದರೆ ಅದು ತಾರತಮ್ಯದಿಂದ ಬಂದುದಲ್ಲ, ದುಡಿಮೆಯ ಕೊರತೆಯಿಂದ ಬಂದುದಾಗಿರುತ್ತದೆ.

ಸಾಮಾನ್ಯತಾ ಸಮಾಜ (ಅಂದರೆ ಜನಪದ)ದಲ್ಲೂ ವಿಶಿಷ್ಟತೆಗಳಿರುತ್ತವೆ. ಇವು ವ್ಯಕ್ತಿ ಅಥವ ಸಮಾಜದ ನೈಪುಣ್ಯದ ಆವಿಷ್ಕಾರದಿಂದ ಹುಟ್ಟುತ್ತವೆ. ಒಂದು ಕಾಲದ ತಂತ್ರಜ್ಞಾನವೆಂಬ ನೈಪುಣ್ಯ ಏಕಕಾಲದಲ್ಲಿ ಎಲ್ಲಾ ಸಮುದಾಯಗಳಲ್ಲೂ ಕಾಣಿಸಿಕೊಳ್ಳುವುದಿಲ್ಲ. ಎಲ್ಲಿ ಮಾನಸಿಕ ವಿಕಾಸ ವಿಶೇಷವಾಗಿ ಸಾಧ್ಯವಾಗುತ್ತದೊ ಅಲ್ಲಿ ಹೊಸ ಜ್ಞಾನ ಹುಟ್ಟಿ ಬೇರೆಲ್ಲ ಕಡೆಗೆ ಅದರ ಫಲ ಹರಡುತ್ತದೆ. ಪ್ರತ್ಯೇಕ ವಿಶಿಷ್ಟತೆಯನ್ನು ಅನುಭವಿಸಬೇಕೆಂಬ ದುರುಳ ಹುಟ್ಟಿದ ಕಡೆ ಆತ

ವಿಶಿಷ್ಟ ಶೋಧವನ್ನು ತನ್ನದಾಗಿಸಿಕೊಂಡು ಸಾಮಾನ್ಯ ಸಮಾಜವನ್ನು ವಂಚಿಸುತ್ತಾನೆ. ಆಗ ಸಾಮಾನ್ಯ ಮತ್ತು ಶಿಷ್ಟ ಎಂಬ ವರ್ಗಗಳು ಉಂಟಾಗುತ್ತವೆ.

ಯಾವ ದೇಶ ಅಥವ ಯಾವ ಸಮಾಜವನ್ನೇ ತೆಗೆದುಕೊಳ್ಳಿ, ಯಾವ ಕಾಲದಲ್ಲೂ ಸಾಮಾನ್ಯ ಮತ್ತು ವಿಶಿಷ್ಟ ಎನ್ನುವ ಜನವರ್ಗಗಳು ಇರುತ್ತವೆ. ರಾಜಪ್ರಭುತ್ವ ಇದ್ದ ಕಾಲದಲ್ಲಿ ರಾಜ ಕುಟುಂಬ, ಪುರೋಹಿತ ವರ್ಗ, ಶ್ರೇಷ್ಠಿಗಳು ಮತ್ತು ಆಡಳಿತ ವರ್ಗ ವಿಶಿಷ್ಟವೆಂದೂ ಇತರರು ಪ್ರಜೆಗಳು ಎಂದೂ ವಿಂಗಡಣೆಯಾಗಿತ್ತು. ಈ ವಿಶಿಷ್ಟರಿಗೆ ಹೆಚ್ಚಿನ ಅನುಕೂಲಗಳು, ಅಧಿಕಾರವೂ ಇತ್ತು. ಜನಸಾಮಾನ್ಯರಿಗೆ ಸಾಮಾನ್ಯ ಸೌಲಭ್ಯಗಳು ಮತ್ತು ನಿರಂತರ ದುಡಿಮೆ ಅವರ ಬದುಕಾಗಿತ್ತು. ಭಾರತದ ಜಾತಿ ಸಮಾಜವನ್ನು ಒಟ್ಟಾಗಿ ತೆಗೆದುಕೊಂಡರೆ ಬ್ರಾಹ್ಮಣರು, ವೈಶ್ಯರು ಮತ್ತು ಕ್ಷತ್ರಿಯರು ವಿಶಿಷ್ಟವರ್ಗವಾಗಿ ಪರಿಗಣಿಸಲ್ಪಟ್ಟಿದ್ದ ಇವರು ವಿಶೇಷ ಅನುಕೂಲ ಮತ್ತು ಅಧಿಕಾರಕ್ಕೆ ಭಾಜನರಾಗಿದ್ದರು. ಶೂದ್ರರು ಎಂಬುವವರು ನಿರಂತರ ದುಡಿಯುವವರೂ ಮತ್ತು ಜಾತಿಯಿಂದ ಕೆಳಗೆ ಇರುವವರೂ ಆಗಿದ್ದರು. ಆಧುನಿಕ ಸಮಾಜದಲ್ಲೂ ಸಾಮಾನ್ಯ ಮತ್ತು ವಿಶಿಷ್ಟ ಎಂಬ ಎರಡು ಪ್ರತ್ಯೇಕ ವರ್ಗಗಳು ಕಾಣುತ್ತವೆ. ನಿರಂತರ ರಾಜಕಾರಣದಲ್ಲಿ ಇರುವವರು, ನೌಕರ ವರ್ಗದವರು, ಉಪಾಧ್ಯಾಯ ವರ್ಗದವರು ಮತ್ತು ವ್ಯಾಪಾರಸ್ಥರು, ಮೇಲುವರ್ಗದವರಾಗಿ ಪರಿಗಣಿಸಲ್ಪಟ್ಟು ಆಡಳಿತ ಶಾಹಿಯ ಭಾಗಗಳಾಗಿದ್ದಾರೆ. ರೈತರು, ದಲಿತರು, ಕೆಳ-ತಳ ಜನವರ್ಗದವರು ಸಾಮಾನ್ಯ ವರ್ಗಕ್ಕೆ ಸೇರುತ್ತಾರೆ. ಸಾಮಾನ್ಯ ವರ್ಗದಲ್ಲಿ ಸಮಾನವಾದ ಬದುಕು ಸರ್ವೇಸಾಧಾರಣವಾಗಿದ್ದು ಅವರ ನಂಬಿಕೆ ನಡವಳಿಕೆ, ವಿಚಾರ-ಆಚಾರ, ಕಲೆ-ಸಾಹಿತ್ಯ, ಕಸುಬು, ಕಾನೂನು ಕಟ್ಟಳೆ ಎಂಬುವು ಸಾಮಾನ್ಯ ಸಂಸ್ಕೃತಿಗೆ ಸೇರುತ್ತವೆ. ಇದನ್ನೇ ನಾವು ಜಾನಪದ ಎಂದು ಕರೆಯುವುದು. ಮೇಲು ಜಾತಿ, ಮೇಲು ವರ್ಗದವರ ನಂಬಿಕೆ, ನಡವಳಿಕೆ, ವಿಚಾರ ಆಚಾರಗಳು ಬೇರೆಯಾಗಿರುತ್ತವೆ.

ಇವರು ಸಮಕಾಲೀನ ಭೌತಿಕ ಸಾಮಗ್ರಿಗಳ ಉಪಭೋಗಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಜನಸಾಮಾನ್ಯರು ತತ್ವ ಜೀವನಕ್ಕೆ ಒತ್ತು ನೀಡುತ್ತಾರೆ. ಇವರ ಬದುಕು ಅನಂತ ಕಾಲವನ್ನು ಉದ್ದೇಶಿಸಿರುತ್ತದೆ. ಶಿಷ್ಟರು ತಾನುಂಟು ಮೂರುಲೋಕ ಉಂಟು ಎಂಬ ತತ್ವಕ್ಕೆ ಬದ್ಧರಾಗಿದ್ದರೆ, ಜನಸಾಮಾನ್ಯರು ಜಗತ್ತು ಇದ್ದರೆ ನಾನುಂಟು, ಎಲ್ಲರಂತೆ ನಾನು, ಎಂಬ ಜೀವನ ನಿಲುವಿಗೆ ಬದ್ದರಾಗಿರುತ್ತಾರೆ. ಇದನ್ನೇ ಜನಪದ ಬದುಕು ಎನ್ನುತ್ತೇವೆ. ಇವರು ತಮ್ಮ ನಂಬಿಕೆ ನಡವಳಿಕೆ, ವಿಚಾರ-ಆಚಾರ, ಭಾಷೆ, ಭಾವನೆ, ಕಲೆ, ಧರ್ಮ, ಕಾನೂನು, ಊಟ-ಉಡುಪುಗಳ ಮೂಲಕ ಉತ್ಪತ್ತಿ ಮಾಡುವ ಜೀವನಕ್ರಮವನ್ನೇ ಜಾನಪದ ಎನ್ನುತ್ತೇವೆ. ಪ್ರತಿಯೊಂದು ಸಾಮಾನ್ಯ ಸಮಾಜ ಮತ್ತು ವಿಶಿಷ್ಟ ಸಮಾಜದಲ್ಲಿ ಮತ್ತೆ ಸಾಮಾನ್ಯ ಸೃಷ್ಟಿ ಮತ್ತು ವಿಶಿಷ್ಟ ಸೃಷ್ಟಿ ಎಂಬ ಶೋಧನೆಗಳಿವೆ. ಸಾಮಾನ್ಯ ಸಮಾಜದ ಊಟೋಪಚಾರದ ಉದಾಹರಣೆ ತೆಗೆದುಕೊಳ್ಳಿ. ಸಾಮಾನ್ಯ ಬೆಳಗಿನ ಆಹಾರ ರೊಟ್ಟಿ ಮಧ್ಯಾಹ್ನದ ಊಟ ರೊಟ್ಟಿಪಲ್ಯ ಅಥವಾ ಮುದ್ದೆಸಾರು,

ವಿಶೇಷವಾಗಿ ಹಬ್ಬ, ಜಾತ್ರೆ, ಉತ್ಸವ ಮತ್ತು ಜೀವನಾವರ್ತನಾ ಆಚರಣೆಗಳಲ್ಲಿ ಹೋಳಿಗೆ, ವಡೆ, ಪಾಯಸ, ಬಾತು ಅಥವ ಬಾಡಿನ ಸಾರು ಮತ್ತು ಇತರ ವೆರೈಟಿಗಳನ್ನು ಮಾಡುತ್ತಾರೆ. ಊಟದಲ್ಲಿ ಸಾಮಾನ್ಯ-ವಿಶೇಷ ಇರುವಂತೆ ವ್ಯಕ್ತಿಗಳಲ್ಲೂ ಇರುತ್ತಾರೆ. ಪಟೇಲ, ಶಾನುಭಾಗ, ಸಾಹುಕಾರ, ನ್ಯಾಯಗಾರ, ಕಲಾಕಾರ, ಪೂಜಾರಿ, ತತ್ವಕಾರ ಮತ್ತು ತಕರಾರು ಮನುಷ್ಯ ಎಂಬ ವಿಶಿಷ್ಟ ವ್ಯಕ್ತಿತ್ವದವರು ಇರುತ್ತಾರೆ. ಶಿಷ್ಟ ಸಮಾಜದಲ್ಲಿಯೂ ಸಾಮಾನ್ಯ ಆಹಾರ, ಸಾಮಾನ್ಯ ಜೀತದ ಪದ್ಧತಿ ಎಂಬುದು ಇರುತ್ತದೆ. ಇದು ದಿನನಿತ್ಯದ ಪದ್ಧತಿ. ಆದರಲ್ಲೂ ವಿಶೇಷ ಆಚರಣಾ ಸಂದರ್ಭಗಳಾದ ಪಾರ್ಟಿ, ಡ್ರೆಸ್, ಊಟ, ವ್ಯವಹಾರ ಮೀಟಿಂಗ್, ಗ್ರೀಟಿಂಗ್ ಮೇಟಿಂಗ್ ಮುಂತಾದ ನಡವಳಿಕೆ ಇರುತ್ತವೆ.

ಅಂದರೆ ಶಿಷ್ಟ-ವಿಶಿಷ್ಟವೆಂಬುದು ಯಾವುದೇ ಒಂದು ವರ್ಗದ ಸಂಸ್ಕೃತಿಗೆ ಸೀಮಿತವಾದುದಲ್ಲ. ಎಲ್ಲ ವರ್ಗಗಳಲ್ಲೂ ಅವೆರಡೂ ಉಂಟು. ಸಾಮಾನ್ಯ ನಡವಳಿಕೆ ಅಥವ ಸಂಸ್ಕೃತಿ ಎಂಬುದು ಸಾರ್ವಕಾಲಿಕ, ಇದೇ ಜಾನಪದ. ಸಕಾಲಿಕವೆಂಬ ಸಂತೋಷ, ಮುದ, ಮಜ ಅಥವ ಶೋಕಿ ವಿಶೇಷ ಎನಿಸಿಕೊಳ್ಳುತ್ತದೆ. ಸದಾ ಇಂಥ ವಿಶೇಷವನ್ನೇ ಅನುಭವಿಸಬೇಕೆನ್ನುವವರು ಸದಾ ಪ್ರತ್ಯೇಕ ಶಿಷ್ಟರಾಗಿ ಬದುಕಲು ಬಯಸುತ್ತಾರೆ. ಇಂಥ ಸದಾ ಪ್ರತ್ಯೇಕ ಶಿಷ್ಟವಾಗಿ ಬದುಕಬೇಕೆನ್ನುವ ಜನ ಇತರರನ್ನು ಶೋಷಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ಅವರು ಅಡ್ಡಮಾರ್ಗ ಹಿಡಿಯುತ್ತಾರೆ. ಬೇರೆ ಬೇರೆ ದೇಶ ಮತ್ತು ಜನಾಂಗಗಳ ಪುರೋಹಿತಶಾಹಿ ಮತ್ತು ಬಂಡವಾಳಿಗರು ಹೀಗೆ ಬದುಕಿದ ದಾಖಲೆಗಳಿವೆ. ಬದುಕುತ್ತಿರುವ ಸ್ಥಿತಿ ಇದೆ.

ಈಗ ಶಿಷ್ಟರಲ್ಲೂ ಎರಡು ವಿಧ : ಸಾಮಾನ್ಯ ಶಿಷ್ಟ ಮತ್ತು ಪ್ರತ್ಯೇಕ ಶಿಷ್ಟ ಎಂದು ನಾವು ತಿಳಿದೆವು. ಸಾಮಾನ್ಯ ಶಿಷ್ಟವೆಂಬುದು ಆಯಾಕಾಲದ ಸಾಮಾಜಿಕ-ರಾಜಕೀಯ ಇತಿಹಾಸದ ಕಾರಣದಿಂದ ಹುಟ್ಟುತ್ತದೆ. ವಿಶೇಷ ಅವಕಾಶ ಕಳೆದು ಹೋದಾಗ ಸಾಮಾನ್ಯವಾಗುತ್ತದೆ. ಒಂದು ಕಾಲದಲ್ಲಿ 'ಅರಸು' ಜನಾಂಗ ಕರ್ನಾಟಕದ ರಾಜ ಮನೆತನವಾಗಿತ್ತು. ಈಗ ಅದು ಹಿಂದುಳಿದ ವರ್ಗದ ಪಟ್ಟಿಗೆ ಸೇರಿದೆ. ಕಲಚೂರ್ಯವಂಶ ರಾಜ್ಯವಾಳುತ್ತಿದ್ದಾಗ ಕ್ಷೌರಿಕ ವರ್ಗ ಆಳುವ ವರ್ಗವಾಗಿತ್ತು. ರಾಜಗೊಂಡ ಎನ್ನುವ ಜನವರ್ಗ ಒಂದು ಕಾಲದಲ್ಲಿ ದಕ್ಷಿಣ ಭಾರತದ ಕಡೆ ರಾಜ್ಯವಾಳಿದ ಜನಾಂಗ. ಈಗ ಅವರು ಪರಿಶಿಷ್ಟ ವರ್ಗಕ್ಕೆ ಸೇರುತ್ತಾರೆ. ಹೈದರಾಬಾದ್ ನಿಜಾಮನ ರಾಜ್ಯಭಾರ ಇದ್ದಾಗ ಸಿದ್ಧಿಯರು ಸೈನಿಕ ಜನವರ್ಗವಾಗಿದ್ದರು. ಈಗ ಅವರು ಆದಿವಾಸಿ ಗುಂಪಿಗೆ ಬರುತ್ತಾರೆ. ಆದರೆ ಪ್ರತ್ಯೇಕ ಶಿಷ್ಟ ಇದೆಯಲ್ಲ ಇದು ನಿರಂತರ ಸುಖಸಂಪತ್ತಿನಿಂದ ಅಥವ ಇತರರಿಗಿಂತ ಹೆಚ್ಚಿನ ಅನುಕೂಲಗಳಿಂದ ಬದುಕಲು ಹವಣಿಸುತ್ತದೆ. ಅದಕ್ಕಾಗಿ ಸದಾ ಜಾಗೃತವಾಗಿರುತ್ತದೆ. ಯಾವ ಕಾಲ ಬಂದರೂ, ಯಾವ ಸಾಮಾಜಿಕ ಬದಲಾವಣೆಯಾದರೂ ಅವರು ತಮ್ಮ ಅನುಕೂಲಸಿಂಧು ನಡವಳಿಕೆಯನ್ನು ಉಳಿಸಿ

ಕೊಳ್ಳುತ್ತಾರೆ. ನಮ್ಮ ದೇಶದ ಪುರೋಹಿತ ವರ್ಗವನ್ನು ಇದಕ್ಕೆ ಉತ್ತಮ ಉದಾಹರಣೆಯಾಗಿ ನೀಡಬಹುದು. ಇಂಥ ವರ್ಗ ಜನದೂರ, ಎಂದರೆ ಜನಪದ ದೂರ. ಇವರಿಗೆ ಜಾನಪದವೂ ದೂರ. ಇವರು ಪುರಾತನ ಆದಿವಾಸಿಗಳಂತೆ ಆಧುನಿಕರ ಮಧ್ಯೆಯೂ ಪ್ರತ್ಯೇಕವಾಗಿ ಬದುಕುತ್ತಾರೆ. ಸ್ಪೃಶ್ಯ - ಅಸ್ಪೃಶ್ಯ, ಶ್ರೇಷ್ಠ ಕನಿಷ್ಟ , ಆಚಾರ-ಅನಿಷ್ಟ ಎಂಬ ಮೌಲ್ಯಗಳನ್ನು ಸೃಷ್ಟಿ ಮಾಡಿ ತಾವು ಸ್ವರ್ಗದಲ್ಲಿ ಬದುಕುತ್ತ ಇತರರು ನರಕ ಸದೃಶವಾಗಿ ಬದುಕುವಂತೆ ಮಾಡುತ್ತಾರೆ. ಇಂಥ ತಾರತಮ್ಯ ಜನವಿರೋಧಿ ಜನವರ್ಗವನ್ನು 'ಜನಪದ' ಎಂದು ಕರೆಯುವುದು ಕಷ್ಟ ಇವರಲ್ಲಿ ಉತ್ಪತ್ತಿಯಾಗುವ ಜಾನಪದ ಕನಿಷ್ಟ .

'ಜನಪದ'ಕ್ಕೆ ಶಿಷ್ಟ, ವಿಶಿಷ್ಟ, ಅನಿಷ್ಟ, ಕನಿಷ್ಟ ಎಂಬ ಕಳಂಕ-ತಾರತಮ್ಯ ಇಲ್ಲ. ಸಾಮಾನ್ಯತಾ ಬದುಕನ್ನು ಬದುಕುತ್ತಿರುವುವೆಲ್ಲ ಜನಪದಗಳೇ. ಸಾರ್ವಕಾಲಿಕವಾಗಿ ಅವು ಸಾಮಾನ್ಯತಾ ಸಮಾಜದ ತತ್ವಕ್ಕೆ ಬದ್ಧವಾಗಿವೆ. ಸಾಂದರ್ಭಿಕವಾಗಿ ವಿಶೇಷ ನಡವಳಿಕೆಯನ್ನು ನಿರ್ವಹಿಸುತ್ತವೆ. ತಮ್ಮ ಸಾಮಾನ್ಯತಾ ಬದುಕಿಗೆ ಆಘಾತ ಉಂಟಾದಾಗ ವಿಘಟಿತವಾಗುತ್ತವೆ. ಕೆಲಕಾಲ ಈ ಅಸ್ವಾಥ್ಯ ಮುಂದುವರಿದು ಮತ್ತೆ ಸಮಕಾಲೀನ ಅವಶ್ಯಕತೆಗೆ ಅನುಗುಣವಾಗಿ ಪುನಸಂಘಟಿತವಾಗುತ್ತವೆ. ಅವು ಎಂದೆಂದೂ ತಮ್ಮ ನಿರಂತರತೆಯನ್ನು ಕಾಯ್ದುಕೊಳ್ಳುತ್ತವೆ.

ಪ್ರತಿಯೊಂದು 'ಜನಪದ'ಕ್ಕೂ ಒಂದು ಸಮಾನತಾ ತತ್ವ ಇರುತ್ತದೆ. ಅದು ವೃತ್ತಿ, ಆಧಾರಿತ ತತ್ವ. ಆ ಕಾರಣಕ್ಕೆ ವೃತ್ತಿಗಳು ಬದಲಾದಂತೆ ಹೊಸ ಜನಪದಗಳು ಅಸ್ತಿತ್ವಕ್ಕೆ ಬರುತ್ತವೆ. ಒಂದು ಜನಪದಕ್ಕೆ ಮೊದಲಿದ್ದ ಅಸ್ತಿತ್ವ ಹೋಗಿ ಹೊಸ ಅಸ್ತಿತ್ವ ಬರಬೇಕಾದರೆ ಯುಗಾಂತರ ಬದಲಾವಣೆಗಳೆ ಸಂಭವಿಸಬೇಕು. ಇಡೀ ಜನಪದ ಬದಲಾಗದೆ ಅದರೊಳಗಿಂದ ಕೆಲವರು ಹೋಗಿ ಮತ್ತು ಕೆಲವರು ಬಂದು ಹೊಸ ಅಸ್ತಿತ್ವ ಸಾಧ್ಯವಾಗಬಹುದು. 'ಜಾತಿ ಜನಪದ'ದೊಳಗೆ ಇವೆಲ್ಲ ಅಸಾಧ್ಯ. ಜಾತಿ ಶೋಷಣಾತತ್ವಕ್ಕೆ ಬದ್ಧವಾಗಿರುವುದರಿಂದ ಕಾಲ ಬದಲಾದಂತೆ ಶೋಷಣಾ ತತ್ವಗಳಲ್ಲಿ ಮಾರ್ಪಾಡು ಆಗಬಹುದೇ ವಿನಹ ಶೋಷಣಾಮೂಲ ನೆಲೆ ಬದಲಾಗದು.

ಆಧುನಿಕ ಜೀವನ ಪ್ರಕ್ರಿಯೆ ಜನಪದಗಳ ಅಸ್ತಿತ್ವವನ್ನು ಬದಲಾಯಿಸಿದೆ. ಜಗತ್ತಿನ ಅನೇಕ ಕಡೆ ಇಂಥ ಬದಲಾವಣೆಗಳನ್ನು ಕಂಡಿದ್ದೇವೆ. ನಮ್ಮ ಜಾತಿ ಜನಪದಗಳು ಬದಲಾಗಿಲ್ಲ. ಅದರೊಳಕ್ಕೆ ಹೊಸ ಜನ ಬರುವುದು ಆಗದು. ಆದರೆ ಅದರೊಳಗಿಂದ ಜನ ಹೊರಕ್ಕೆ ಹೋಗಿ ಬೇರೆ ಜನಪದಗಳಲ್ಲಿ ಗುರುತಿಸಿಕೊಂಡಿದ್ದಾರೆ. ಅದೂ ಕೂಡ ತಾತ್ಕಾಲಿಕ. ಜಾತಿ ಜನಪದದಿಂದ ಕಾರ್ಮಿಕವರ್ಗಕ್ಕೆ ಹೋಗಿ ಕಾರ್ಮಿಕ ಜನಪದದಲ್ಲಿ, ನೌಕರಿ ವರ್ಗಕ್ಕೆ ಹೋಗಿ ನೌಕರ ಜನಪದದಲ್ಲಿ, ಅಧ್ಯಾಪಕರ ವರ್ಗಕ್ಕೆ ಹೋಗಿ ಅಧ್ಯಾಪಕ ಜನಪದದಲ್ಲಿ, ವಿದ್ಯಾರ್ಥಿ ವರ್ಗಕ್ಕೆ ಹೋಗಿ ವಿದ್ಯಾರ್ಥಿ ಜನಪದದಲ್ಲಿ, ವ್ಯಾಪಾರಿ ವರ್ಗಕ್ಕೆ ಹೋಗಿ ವ್ಯಾಪಾರಿ ಜನಪದದಲ್ಲಿ.. ಹೀಗೆ ಗುರುತಿಸಿಕೊಂಡಿದ್ದಾರೆ. ಆದರೆ ಇದು ಹಗಲು ವೇಷದ

ನಡವಳಿಕೆಯಾಗಿದೆ. ಸಂಜೆ, ಕೆಲಸ ಮುಗಿದ ಮೇಲೆ ಮನೆಗೆ ಬಂದಾಗ ಆತ ತನ್ನ ಮೂಲ ಜಾತಿ ಜನಪದದ ಮನೆಗೆ ಹಿಂತಿರುಗಿದ್ದಾನೆ. ನಮ್ಮ ಭಾರತದಲ್ಲಿ ಪಾಶ್ಚಾತ್ಯ ಕಾರ್ಖಾನೆ ಸಂಸ್ಕೃತಿ ಮಾಡಿರುವ ಮಾರ್ಪಾಡು ಇಷ್ಟು ಮಾತ್ರ. ನಮ್ಮ ಬೌದ್ಧ, ಜೈನ ಮತ್ತು ವೀರಶೈವ ಚಳುವಳಿಗಳು ಮಾಡಿರುವ ಮಾರ್ಪಾಡು ಅಪಾರ ಮತ್ತು ಅಸಾಧಾರಣ. ವಸ್ತು ಸಂಸ್ಕೃತಿಗಿಂತ ತತ್ವ ಸಂಸ್ಕೃತಿ ಮಾಡುವ ಮಾರ್ಪಾಡು ಅಗಾಧ ಮತ್ತು ಅನಂತವಾಗಿರುತ್ತದೆ ಎಂಬುದಕ್ಕೆ ಇವು ಸಾಕ್ಷಿ.

ಒಂದು ಜನಪದಕ್ಕಿಂತ ಮತ್ತೊಂದು ಜನಪದಕ್ಕೆ ಇರುವ ಅಂತರ ಏನು? ಒಂದು ಜನಪದ ತನ್ನದೇ ಆದ ಒಂದು ನಿಶ್ಚಿತ, ನಿರ್ದಿಷ್ಟ ತತ್ವದ ಮೇಲೆ ತನ್ನ ಅಸ್ತಿತ್ವವನ್ನು ನೆಲೆ ನಿಲ್ಲಿಸಿಕೊಂಡಿದೆ. ಆ ತತ್ವವನ್ನು ಆ ಜನಪದದ ಎಲ್ಲ ಸದಸ್ಯರು ತಿಳಿದಿದ್ದಾರೆ. ಮತ್ತು ಹಂಚಿಕೊಂಡಿದ್ದಾರೆ. ಆ ಜನಪದದ ತತ್ವ ಅದರ ಸದಸ್ಯರಿಗೆ ಸರ್ವ ಮಾನ್ಯ ಸಾರ್ವಕಾಲಿಕ ಮತ್ತು ಸಮಾನತಾ ನೀತಿ. ಒಂದು ಜನಪದದಿಂದ ಮತ್ತೊಂದು ಜನಪದಕ್ಕೆ ತತ್ವದ ಅಂತರವಿದೆ, ಸ್ಥಳದ ಅಂತರವಿದೆ, ಮತ್ತು ಕಾಲದ ಅಂತರವಿದೆ. ಇಂತಹ ಜನಪದಗಳ ಜೊತೆಗೆ ಪಾರಸ್ಪರಿಕವಾಗಿ ಹೋಲಿಸಿಕೊಂಡಾಗ ಸ್ಥಾನದ ಅಂತರವೂ ಉಂಟಾಗುತ್ತದೆ.

ಒಂದು ಜನಪದದ ಸ್ಥಾನ ಮತ್ತು ಅಂತರವನ್ನು ಹೀಗೆ ನಿರ್ವಚಿಸಬಹುದು :

ಒಂದು ಜನಪದದ ಜನ ಭೌಗೋಳಿಕವಾಗಿ ಒಂದೇ ಕಡೆ ನೆಲೆ ನಿಂತಿರಬಹುದು. ಸಾಮಾಜಿಕ ಬದಲಾವಣೆಯ ಕಾರಣದಿಂದ ಕೆಲವು ಸದಸ್ಯರು ಬೇರೆ ಕಡೆ ಹೋಗಿ ನೆಲಸಿರಬಹುದು. ಆದರೆ ತಾತ್ವಿಕವಾಗಿ ಅವರೆಲ್ಲ ಒಂದೆ. ಅಮೆರಿಕಕ್ಕೆ ಹೋದರೂ ಭಾರತೀಯರು ತಿರುಪತಿ ದೇವಸ್ಥಾನ ಕಟ್ಟುವುದನ್ನು ಬಿಡುವುದಿಲ್ಲ, ಪೌರೋಹಿತ್ಯ ಮಾಡುವುದನ್ನು ನಿಲ್ಲಿಸುವುದಿಲ್ಲವಲ್ಲ ಹಾಗೆ. ತನ್ನ ತತ್ವ ಅಥವ ಸಂಸ್ಕೃತಿಯಿಂದ ಜನಪದವೊಂದಕ್ಕೆ ಸ್ಥಾನ ಪ್ರಾಪ್ತವಾಗುತ್ತದೆ. ಈ ಸ್ಥಾನ ತಾನೇ ನಿರ್ಧರಿಸಿಕೊಂಡದ್ದಾಗಿರಬಹುದು ಅಥವ ಅನ್ಯ ಜನಪದಗಳು ತುಲನೆ ಮಾಡಿ ನಿರ್ಧರಿಸಿದ್ದಾಗಿರಬಹುದು. ಭರತಖಂಡ ಅಖಂಡ. ನಮ್ಮದೇ ಆದ ಶಾಶ್ವತ ಹಾಗೂ ಶುದ್ಧ ಸಂಸ್ಕೃತಿ ತಮಗಿದೆ ಎಂದು ಭಾರತ ಹೇಳುತ್ತದೆ. ಪಾಶ್ಚಾತ್ಯ ಜನಪದಗಳು ತುಲನೆ ಮಾಡಿ ಹೇಳುತ್ತವೆ: ತಾರತಮ್ಯ ಮತ್ತು ಅಸ್ಪೃಶ್ಯತೆಯಿಂದ ಭಾರತವೆಂಬ ಜನಪದ ನರಳುತ್ತಿದೆ ಎಂದು.

**ಈ 'ಜನಪದ' ವೆಂಬುದರ ತತ್ವದ ಸ್ವರೂಪ ಎಂಥದು?**

ಬೀದಿಯಲ್ಲಿ ಮಾತಾಡುವ ತತ್ವ ಜನಪದವೊಂದರ ತತ್ವ ಆಗುವುದಿಲ್ಲ, ಆ ಬೀದಿ ಮಾತು ಮನೆ ಮಾತು, ಮನೆತನದ ಮಾತು ಹಾಗೂ ತಮ್ಮ ಸಮುದಾಯದ ಮಾತು ಆಗಿದ್ದಾಗ ಅದಕ್ಕೊಂದು ನೆಲೆ ಬೆಲೆ ಇರುತ್ತದೆ. ಆ ತತ್ವವನ್ನು ಆ ಜನಪದರು ಎರಡು ರೀತಿಯಲ್ಲಿ ಬಳಸುತ್ತಾರೆ.

೧) ಸದ್ಯದ ಬದುಕುವ ಮಾರ್ಗವಾಗಿ

೨) ತಮ್ಮ ನಿರಂತರ ಜೀವನಕ್ರಮವಾಗಿ

ಆಗ ಅದು ಸಂಸ್ಕೃತಿ ಮತ್ತು ಸಂಸ್ಕೃತಿ ಇತಿಹಾಸ ಎನಿಸಿಕೊಳ್ಳುತ್ತದೆ. ಇಟ್ಟುಕೊಂಡ ತತ್ವ ಅಸಲಿಯಾಗಬೇಕಾದರೆ ಅದು ಜನಪದರ ನಡವಳಿಕೆ ಆಗಬೇಕು. ಅದನ್ನೇ ನಾವು ಸಂಸ್ಕೃತಿ ಎನ್ನುತ್ತೇವೆ. ಈ ಸಂಸ್ಕೃತಿ ಈಹೊತ್ತು ಮಾತ್ರ ಉಂಡು ಉಟ್ಟು ಕಳಚಿ ಹೋಗುವಂಥದಾಗಿರಬಾರದು. ಅಂಥದಕ್ಕೆ ಬೆಲೆ ಇರುವುದಿಲ್ಲ. ಒಂದು ಸಂಸ್ಕೃತಿ ಚಾರಿತ್ರಿಕವಾಗಿ ಹಿಂದಿನಿಂದ ಬಂದಿರುವುದಾಗಿರಬೇಕು. ಇಲ್ಲವೇ ಈಹೊತ್ತು ಹುಟ್ಟಿ ಭವಿಷ್ಯವನ್ನು ಉಳಿಸಿಕೊಡುವುದಾಗಿರಬೇಕು. ಇದನ್ನೇ ನಿರಂತರ ಜೀವನಕ್ರಮ ಅಥವ ಸಂಸ್ಕೃತಿ ಇತಿಹಾಸ ಎಂದು ಕರೆಯುತ್ತವೆ. ಇದನ್ನೇ ನಾವು ಪರಂಪರೆ ಎಂದು ಕರೆಯುತ್ತೇವೆ. ಒಂದು ದೊಡ್ಡ ಸಂಸ್ಕೃತಿ ಪರಂಪರೆ ಇರುವ ಜನಪದಕ್ಕೆ ಸ್ಥಾನದಲ್ಲಿ ಬೆಲೆ ಹೆಚ್ಚು. ಅದರೊಟ್ಟಿಗೆ ಆ ಸಂಸ್ಕೃತಿಯ ತತ್ವ ಅಥವ ಮೌಲಿಕತೆ ಯಾವ ಸ್ವರೂಪದ್ದು ಎಂಬುದು ಮುಖ್ಯ. ಒಂದು ಜನಪದ ಅನೇಕ ಶತಮಾನಗಳಿಂದ ಕಳ್ಳತನ ಮಾಡುವ ಸಂಸ್ಕೃತಿ ಉಳಿಸಿಕೊಂಡು ಬಂದಿದೆ ಎನ್ನುವ ಕಾರಣಕ್ಕೆ ಅದಕ್ಕೆ ಮಾನ್ಯತೆ ಇಲ್ಲ. ಜನ ಹೇಳಿದ್ದಾರೆ. ಕಳ್ಳನ ಹೆಂಡತಿ ಯಾಹೊತ್ತಿದ್ದರೂ ಮುಂಡೆ ಅಂತ. ಅಂದರೆ ಸಹಜ ಕುಟುಂಬ ವ್ಯವಸ್ಥೆ ಇಲ್ಲದ್ದು ನಿಜ ಸಂಸ್ಕೃತಿ ಅಲ್ಲ. ಆ ಜನಪದವೂ ನಿಜಸ್ವರೂಪಿ ಅಲ್ಲ ಎಂಬುದೆ ಇದರ ಮಥಿತಾರ್ಥ. ಸಮಾಜದ ಮೂಲ ಘಟಕ ಸಂಸಾರ. ಕುಟುಂಬ ಸಂಸ್ಕೃತಿಯ ಗಂಗೋತ್ರಿ.

ಸ್ಥಳ ಜನಪದವನ್ನು ಹೇಗೆ ನಿರ್ಧರಿಸುತ್ತದೆ?

ಸಾಮಾನ್ಯ ತತ್ವದ ನಂತರ ಜನಪದವೊಂದರ ನಿರ್ಧಾರದಲ್ಲಿ ಸ್ಥಳ ಮುಖ್ಯ ಪಾತ್ರ ವಹಿಸುತ್ತದೆ. ಸ್ಥಳ ಎನ್ನುವುದು ಭೂಗೋಳ, ಎಂದರೆ ಸಂಪನ್ಮೂಲಗಳ ನೆಲೆ. ಜನಪದರ ಚಲನೆ ಅಥವ ಸ್ತಬ್ಧತೆ ಈ ಭೂಗೋಳವನ್ನು ಅವಲಂಬಿಸಿದೆ. ತಮಿಳುನಾಡಿನವರು ಮತ್ತು ಕೇರಳದವರು ಜಗತ್ತಿನ ಎಲ್ಲ ಕಡೆಗೆ ಚಲಿಸಿದ್ದಾರೆ. ಕರ್ನಾಟಕದಲ್ಲಿ ದಕ್ಷಿಣ ಕರ್ನಾಟಕದವರು ಉತ್ತರ ಕರ್ನಾಟಕಕ್ಕೆ, ಉತ್ತರ ಕರ್ನಾಟಕದವರು ದಕ್ಷಿಣ ಕರ್ನಾಟಕಕ್ಕೆ ಚಲಿಸಲು ಇಷ್ಟ ಪಡುವುದಿಲ್ಲ ಯಾಕೆ? ತಮಿಳುನಾಡಿನಲ್ಲಿ ದೊಡ್ಡ ನದಿಗಳಿಲ್ಲ, ಕೇರಳದ ನದಿಗಳು ಹುಟ್ಟಿನಿಂದಲೇ ಓಡಿಹೋಗಿ ಸಮುದ್ರ ಸೇರುತ್ತವೆ. ತಮಿಳುನಾಡಿಗೆ ಬರದ ಶಾಪ, ಮಲಯಾಳಂ ದೇಶಕ್ಕೆ ಬೆಟ್ಟಗುಡ್ಡಗಳ ಕಾರಣ ಭೂಮಿಯ ಕೊರತೆ. ಈ ಕೊರತೆ ಎಂಬುದಿದೆಯಲ್ಲ ಅದು ಯಾರನ್ನೂ ಚಲಿಸುತ್ತದೆ. ಜಗತ್ತಿನಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ, ಆಕ್ರಮಣ, ದರೋಡೆಗಳು ನಡೆದಿದ್ದರೆ ಅದಕ್ಕೆ ಆಸೆಗಿಂತ ಕೊರತೆಗಳೇ ಮುಖ್ಯ ಕಾರಣ.

ಪ್ರಾದೇಶಿಕ ನಿರ್ದಿಷ್ಟತೆ ಎಂಬುದು ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಮತ್ತು ಸಮರ್ಥನೆಗೆ

ತುಂಬ ಪ್ರೇರಕ ಶಕ್ತಿಯಾಗಿದೆ. ಮಲೆನಾಡಿನವರು, ಬಯಲು ಸೀಮೆಯವರು, ಕರಾವಳಿಯವರು ಅಥವ ಮರಳುಗಾಡಿನವರು ಎಂದರೆ ಅವರು ಅಲ್ಲಿಯ ಸಂಸ್ಕೃತಿಯ ಪ್ರತಿರೂಪ ಮತ್ತು ಪ್ರತಿನಿಧಿ ಆಗಿರುತ್ತಾರೆ. ಅವರ ನಂಬಿಕೆ, ನಡವಳಿಕೆ, ಊಟ-ಉಡುಗೆ ಮತ್ತು ತಮ್ಮನ್ನು ಪ್ರಸೆಂಟ್ ಮಾಡಿಕೊಳ್ಳುವ ರೀತಿ ಅವರಿಗೇ ವಿಶಿಷ್ಟವಾಗಿರುತ್ತದೆ. ಮೈಸೂರಿನ ಸಭ್ಯ ನಾಗರೀಕನೊಬ್ಬ ಉತ್ತರ ಕರ್ನಾಟಕದ ಹಳ್ಳಿಯಲ್ಲಿ ಬಸ್ ಹತ್ತುವಾಗ ಪಕ್ಕದವ 'ಹತ್ರಿ ಗಡಗಡ್ನೆ' ಅಂದರೆ ಹೆದರಿಕೆಯಾಗುತ್ತದೆ. ಆ ಕಡೆಯವರು ಸಾಮಾನ್ಯ ರೀತಿಯಲ್ಲಿ ಮಾತಾಡುತ್ತಿದ್ದರೆ, ಬೆಂಗಳೂರಿನವನಿಗೆ ಗಲಾಟೆ ಎಬ್ಬಿಸಿದ್ದಾರೆ ಎನಿಸುತ್ತದೆ.

ಇನ್ನೊಂದು ಮುಖದಲ್ಲಿ ಭೂಗೋಳ ಎಂದರೆ ವಾತಾವರಣ ಅಥವಾ ಪರಿಸರ. ಅದು ಜೀವಸಂಕುಲಗಳ ಸಮಾಜ. ಅದರೊಂದಿಗೆ ಒಡನಾಡಿ, ಹೊಂದಾಣಿಕೆ ಮಾಡಿಕೊಂಡು ಇಲ್ಲವೆ ಹೋರಾಟ ಮಾಡಿಕೊಂಡು ಜನಪದ ನೆಲೆನಿಂತಿರುತ್ತದೆ, ಅಥವಾ ಆ ಜೀವಸಂಕುಲದ ಲೂಟಿ ಮಾಡಿಕೊಂಡು ಬದುಕಿರಬಹುದು. ಅಲ್ಲಿಯ ಜನ ಮತ್ತು ಜೀವಸಂಕುಲ ಪರಸ್ಪರವಾಗಿವೆಯೆ ಅಥವಾ ಒಂದು ಇನ್ನೊಂದನ್ನು ಜಾಲಾಡುತ್ತಿದೆಯೆ ಎನ್ನುವ ಪ್ರಶ್ನೆ ಆ ಜನಪದದ ಈ ಹೊತ್ತಿನ ಅಸ್ತಿತ್ವ ನಿರ್ಣಯದ ಪ್ರಶ್ನೆಯೂ ಆಗುತ್ತದೆ. ಒಂದು ಕಾಲದಲ್ಲಿ ಕಾಡಿನ ಪ್ರಾಣಿಗಳನ್ನು ಧಾರಾಳ ತಿಂದು, ನಗರಕ್ಕೆ ತಂದು ಮಾರುತ್ತಿದ್ದ ಹಕ್ಕಿಪಿಕ್ಕಿ ಜನಪದ ಈ ಹೊತ್ತು ನೆಲೆಯೆ ಇಲ್ಲದಂತಾಗಿದೆ. ಆದ್ದರಿಂದ ಭೂಗೋಳವನ್ನು ಈ ಹೊತ್ತು ಸ್ತಬ್ಧ ಸ್ಥಿತಿ ಎಂದು ನಿರ್ವಚಿಸಬಾರದು. ಈಗ ಭೂಗೋಳ ಆರ್ಥಿಕವಾಗಿ ಹೆಚ್ಚು ಹೆಚ್ಚು ಬಳಕೆಯಾಗುತ್ತಿದೆ. ಇಡೀ ಭೂಗೋಳವನ್ನು ಮನುಷ್ಯ ಇತರೆಲ್ಲ ಜೀವಿಗಳನ್ನು ಸ್ಥಳಾಂತರಿಸಿ ತಾನೇ ತಾನು ನೆಲೆಯೂರುತ್ತಿದ್ದಾನೆ.

**ಜನಪದಕ್ಕೆ ಕಾಲದ ಅಂತರ ಏನು ಮಾಡುತ್ತದೆ?**

ಕಾಲ ಜನಪದವೊಂದನ್ನು ಉಳಿಸಬಹುದು ಇಲ್ಲವೆ ಸಂಪೂರ್ಣ ನಾಶ ಮಾಡಬಹುದು. ಕಾಲವನ್ನು ಗಮನಿಸದ ಜನಪದ ಕಾಲನ ಕಸವಾಗಿ ಹೋಗಬಹುದು. ಜನಪದವೊಂದಕ್ಕೆ ಕಾಲ ಗೊತ್ತಾಗುವುದು ಹೇಗೆ? ಜನಪದ ಮತ್ತು ಅದರ ಸಂಸ್ಕೃತಿ ಪಾರಸ್ಪರಿಕ ತತ್ವಕ್ಕೆ ಬದ್ಧವಾಗಿದ್ದಾಗ ಮಾತ್ರ ಕಾಲ ಗೊತ್ತಾಗುತ್ತದೆ. ಅಂಡಮಾನ್ ಆದಿವಾಸಿಗಳು ಇತರ ಜನಪದಗಳು ಹೇಗೆ ಇವೆ ಎಂಬುದನ್ನು ಗಮನಿಸಲಿಲ್ಲ. ಅವರು ನಿಧಾನ ನಶಿಸುತ್ತಿದ್ದಾರೆ. ಕಾಡುವಾಸಿಗಳು ಊರವಾಸಿಗಳಿದ್ದಾರೆ ಎಂಬುದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಬ್ರಿಟಿಷ್ ಭಾರತದ ಹಳ್ಳಿಗರು ಭಾರತ ಯಾರ ಜೊತೆಗೋ ಓಡುತ್ತಿದೆ ಎಂಬುದನ್ನು ಗುರುತಿಸಲಿಲ್ಲ. ಆಗ ಕಾಲೇಜಿಗೆ ಬಂದ ಗೌಡನ ಮಗ ಮೇಷ್ಟ್ರಿಗೆ ಹೇಳುತ್ತಿದ್ದ : 'ನಿಮ್ಮ ಓದು ಇಲ್ದೆ ಇದ್ರೆ ನನ್ನ ಶಪ್ಪ, ನಮ್ಮಪ್ಪ ಮಾಡಿದ ಆಸ್ತಿ ಇದೆ ಕಣ್ರಿ' ಅಂತ. ಈಗ ಅವನು ಪೇಟೆಗೆ ಸೊಪ್ಪು ಹೊತ್ತು ಮಾರುತ್ತಿದ್ದಾನೆ. ಓಡುತ್ತಿರುವ ಕಾಲನನ್ನು ಗುರುತಿಸಿ ಆ ಕಾಲದ ಹಳ್ಳಿಯ ಶಾನುಬಾಗರು

**ತೂಬಿನ ಕೆಳಗಡೆಯೆ ಇದ್ದ ತಮ್ಮ ಅಪಾರ ಗದ್ದೆಯನ್ನು ಮಾರಿ ಪಟ್ಟಣ ಸೇರಿಕೊಂಡರು. ಸಂಪತ್ತು ಎಲ್ಲಿ ಸೃಷ್ಟಿಯಾಗುತ್ತಿದೆ, ಸಂಪತ್ತಿನ ಕೇಂದ್ರಗಳು ಎಲ್ಲಿ ಹುಟ್ಟುತ್ತಿವೆ. ಅವುಗಳ ಜೊತೆಗೆ ಹೇಗೆ ಸಂವಾದ ಮಾಡಬೇಕಾಗುತ್ತದೆ ಎಂಬ ಎಚ್ಚರವೆ ಕಾಲದ ಎಚ್ಚರ. ಇಲ್ಲದಿದ್ದರೆ ಭೂಗೋಳ ಎಂಬ ನೆಲೆ ಜನ ವಸತಿಯಾಗುವುದಕ್ಕೆ ಬದಲಾಗಿ ಸಮಾಧಿಗಳ ವನ ಆಗುತ್ತದೆ.**

ಸಮಾಜ ಒಂದು ವ್ಯವಸ್ಥೆ, ಸಂಸ್ಕೃತಿ ಅದರ ಯೋಚನೆ ಮತ್ತು ಯೋಜನೆ. ಆ ಸಂಸ್ಕೃತಿಯ ಆಚರಣೆಯೆ ಆ ಸಮಾಜದ ಧರ್ಮಕರ್ಮ. ಈ ಒಂದೊಂದು ಸಮಾಜವೂ ಒಂದೊಂದು ಜನಪದ. ಅದರ ಮಾನಸಿಕ ಮತ್ತು ದೈಹಿಕ ಉತ್ಪನ್ನ ಎಲ್ಲರೂ ಹಂಚಿಕೊಳ್ಳಬಹುದಾಗಿದ್ದರೆ, ಅದರ ಆಚರಣೆಯಲ್ಲಿ ಭಾಗವಹಿಸಬಹುದಾಗಿದ್ದರೆ ಅದು ಜಾನಪದ. ಗಾಳಿ, ನೀರು ಮತ್ತು ಆಹಾರವನ್ನು ಹಾಗೂ ಅವುಗಳಿಂದ ಉತ್ಪತ್ತಿಯಾದ ಉತ್ಪನ್ನಗಳನ್ನು ಎಲ್ಲ ಜನಪದಗಳೂ ಹಂಚಿಕೊಳ್ಳಬಹುದು. ಆದರೆ ಅಸ್ಪೃಶ್ಯತೆ? ಅಸ್ಪೃಶ್ಯತೆಯನ್ನು ಆಚರಿಸುವ ಜನಪದಗಳೆಲ್ಲವೂ ಅಸ್ಪರ ಮಟ್ಟಿಗೆ ಮುಕ್ಕಾಗಿವೆ. 'ಹಂದಿಯ ಜೊತೆಗೆ ಆಡಿ ಕೆಂದಗರು ಹಂದಿ ತಿನ್ನುವುದನ್ನೆ ತಿಂದಿತು' ಎನ್ನುವಂತಾಗಿವೆ. ಜನಪದ-ಜಾನಪದಕ್ಕೆ ಬಂದಿರುವ ದುರ್ಗತಿಯನ್ನು ಕುರಿತು ಹೇಳುವಾಗ ಇಂಥ ಮಾತುಗಳನ್ನು ಹೇಳಲೇಬೇಕಾಗುತ್ತದೆ. ಯಾಕೆಂದರೆ ಜನಪದಗಳು ಚಲಿಸಬೇಕು. ಅವುಗಳ ಉತ್ಪತ್ತಿಯಾದ ಜಾನಪದ ಜೀವಂತವಾಗಿರಬೇಕು. ಇದು ಜಾನಪದ ಚಿಂತಕನ ಅಪೇಕ್ಷೆಯೂ ಹೌದು ಬದ್ಧತೆಯೂ ಹೌದು.

**'ಜನಪದ'ಗಳು ಹಳೆಯ ಸಮಾಜಗಳಲ್ಲಿ ಯಾಹೊತ್ತೂ ಚಲಿಸುವ ಜೀವನ ನೆಲೆಗಳು. ಹಾಗಾದ ಮೇಲೆ ಅವುಗಳ ಉತ್ಪತ್ತಿಯಾದ ಜಾನಪದ ಹಳೆಯದು, ಹಿಂದಿನ ಕಾಲದ್ದು, ಒರಟಾದದ್ದು, ಉಳಿದದ್ದು, ಜನಪ್ರಿಯವಾದುದು. ರಂಜನೆಗೆ ಇರುವುದು ಮತ್ತು ಪಳಯುಳಿಕೆಯಾಗಿರುವುದು ಹೇಗೆ ಸಾಧ್ಯ?** ನಮ್ಮ ತಾತ ರಾಗಿರೊಟ್ಟಿ ಹುಚ್ಚೆಳ್ಳು ಚಟ್ನಿ ತಿನ್ನುತ್ತಿದ್ದ. ರಾಗಿ ಮುದ್ದೆ ಹುರುಳಿಕಾಳು ಸಾರು ಉಣ್ಣುತ್ತಿದ್ದ. ನಮ್ಮಜ್ಜಿ ಅದನ್ನು ಹಳೆಯದು ಅನ್ನಲಿಲ್ಲ, ನಮ್ಮಪ್ಪ ಅದು ಹಳೆಯದು ಅನ್ನಲಿಲ್ಲ. ನನಗೆ ಅದು ಹಳೆಯ ರುಚಿ ಅನಿಸಿಲ್ಲ, ನನ್ನ ಮಗನಿಗೂ ಹಾಗೆ ಅನಿಸಿಲ್ಲ. ಒಂದು ಪಕ್ಷ ಅವನಿಗೆ ಅದು ಬೇಡವಾಯಿತು ಎನ್ನಿ. ಅಷ್ಟಕ್ಕೆ ಅದು ಹಳೆಯದಾಗುವುದಿಲ್ಲ, ಕುರುಡಿಗೆ ದೀಪ ಆಗುವುದಿಲ್ಲ ಎನ್ನೊ ಕಾರಣಕ್ಕೆ ಇತರರು ಅದನ್ನು ತಿರಸ್ಕರಿಸುತ್ತಾರೆಯೆ? ಹಾಗೆಯೆ ಕೆಲವರ ಅಭಿಪ್ರಾಯದಲ್ಲಿ ಜನಪದ ಹಿಂದಿನದು, ಹಲವರ ಅಭಿಪ್ರಾಯದಲ್ಲಿ ಅದೇ ಅಸಲಿ. ಬೆಂಗಳೂರಿನ ಬೀದಿ ಬೀದಿಗಳ ಪಕ್ಕದಲ್ಲಿ ಮಧ್ಯಾಹ್ನ ಊಟದ ಸಮಯದಲ್ಲಿ ಜನ ಕ್ಯೂ ನಿಂತುರವುದೇಕೆಂದು ನೋಡಿ. ಅಲ್ಲಿ ಗಾಡಿಗಳಲ್ಲಿ ಬಿಸಿ ಬಿಸಿ ಮುದ್ದೆ, ಕೋಳಿ ಸಾರು, ಮಟನ್ ಚಾಪ್ಸ್, ಮೀನು ಪ್ರೈ ತಯಾರಾಗಿರುತ್ತದೆ. ಇದೇ ಕ್ಯೂ ಕಾಮತ್ ಹೋಟೆಲ್ ಮುಂದೆ ಇರುವುದಿಲ್ಲ.

ಸದಾ ನಮ್ಮ ಸೆಳೆತವೂ, ಕ್ರಿಯೆಯೂ ಆದ ಈ ಜಾನಪದವನ್ನು ನಾವು ನಿರ್ವಚಿಸಬೇಕಾಗಿರುವುದು ಹಿಂದಿನ ಜನಪದ ಬಿಟ್ಟು ಹೋಗಿರುವ ಸಾಮಗ್ರಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಅಲ್ಲ. ಅದು ನಿರ್ವಹಿಸುತ್ತಿರುವ ಕಾರ್ಯಭಾರವನ್ನು ಗಮನಿಸಿ ಅದರ ಗುಣ ಹೇಳಬೇಕು. ಈ ಬಗೆಯ ಚಿಂತನೆಯನ್ನು ಪ್ರಕ್ರಿಯಾತ್ಮಕ ದೃಷ್ಟಿ ಎನ್ನುತ್ತಾರೆ. ನಾನು ಮೊದಲಿನಿಂದಲೂ ಪ್ರಕ್ರಿಯಾತ್ಮಕ ಜಾನಪದ ಚಿಂತಕ. ಜಾನಪದವನ್ನು ನಾನು ಬದುಕುವ ರೀತಿಯಲ್ಲಿ ಕಾಣುತ್ತೇನೆ. ಜಾಪನದ ಯಾವುದು ಎನ್ನುವುದಕ್ಕಿಂತ ಜಾನಪದ ಹೇಗೆ ಜಾನಪದವಾಗಿ ಕಾಣುತ್ತಿದೆ, ನೋಡಲ್ಪಡುತ್ತಿದೆ ಹಾಗೂ ಅನುಭವಿಸಲ್ಪಡುತ್ತಿದೆ ಎಂಬುದು ಮುಖ್ಯ. ಹಾಗಾದಾಗಲೆ ಜಾನಪದವನ್ನು ನನ್ನಲ್ಲಿ, ನಿಮ್ಮಲ್ಲಿ ಹಾಗೂ ಎಲ್ಲರಲ್ಲಿ ನಿರಂತರವಾಗಿ ಗುರುತಿಸಲು ಸಾಧ್ಯ. ಪ್ರಕ್ರಿಯೆಯಲ್ಲಿ ಇಲ್ಲದ್ದು ಜಾನಪದವಾಗುವುದಿಲ್ಲ. ಆಧುನಿಕ ಫ್ಯಾಕ್ಟರಿಯೊಂದು ಒಂದು ಮಾದರಿಯ ಷೂ ತಯಾರಿಸಿ ಮಾರುಕಟ್ಟೆಗೆ ಬಿಟ್ಟ ಮೇಲೆ ಮತ್ತೊಂದು ಹೊಸ ಮಾದರಿಯನ್ನು ಬಿಡುಗಡೆ ಮಾಡುತ್ತದೆ. ಹಿಂದಿನ ಮಾದರಿಯ ಷೂಗಳು ಉಳಿದಿದ್ದರೆ ಅವು ಉಳಿಕೆಗಳು. ಅವನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಮಾರಲಾಗುತ್ತದೆ. ಜಾನಪದದಲ್ಲಿಯೂ ಹಾಗೆಯೆ ಒಂದು ಜಾನಪದ ಆಚರಣೆ ಹಿಂದೆ ಬಿದ್ದರೆ, ಉದಾ. ಸಿಡಿ ಆಡಿಸುವುದು. ಅದು ಪ್ರಸ್ತುತ ಅಲ್ಲ ಎಂದು ಕೈ ಬಿಡಲಾಗುತ್ತದೆ. ಫ್ಯಾಕ್ಟರಿ ಉತ್ಪಾದನೆಗೂ ಜನಪದದ ಉತ್ಪಾದನೆಗೂ ಒಂದು ಸ್ಪಷ್ಟ ವ್ಯತ್ಯಾಸ ಇದೆ. ಫ್ಯಾಕ್ಟರಿ ಉತ್ಪಾದನೆ ತಾತ್ಕಾಲಿಕ ಮತ್ತು ಅಲ್ಪ ಬಾಳಿಕೆ ಬರುವಂಥದು. ಜಾನಪದ ಅನಂತಕಾಲದ ಉತ್ಪಾದನೆ ಮತ್ತು ನಿರಂತರ ಬಾಳಿಕೆ ಬರುವಂಥದು. ಹತ್ತೊಂಬತ್ತನೆಯ ಶತಮಾನದ ಕಾರುಗಳು ಈಗ ಇಲ್ಲ. ಇದ್ದವು ಪುರಾತನ ಮೌಲ್ಯದ ಕಾರುಗಳು ಎನಿಸಿವೆ. ಆದರೆ ಜನಪದವೇ ಕಂಡುಹಿಡಿದ ಚಕ್ರಗಳು ಯಾಹೊತ್ತಿಗೂ ಪ್ರಸ್ತುತವೆ. ಅವುಗಳನ್ನು ಉದ್ದ-ಗಿಡ್ಡ ಅಥವಾ ಬೇರೆ ಬೇರೆ ವಸ್ತುಗಳಿಂದ ನಿರ್ಮಿಸುವುದು ಕಾಲದ ಬೇಡಿಕೆ ಅಷ್ಟೆ.

ಅಂದರೆ ನಿಜವಾದ ಜಾನಪದ ಗ್ರಹಿಕೆ ಎಂದರೆ ಜಾನಪದ ಹೇಗೆ ಎಲ್ಲಿ ಮತ್ತು ಯಾವ ಮಾದರಿಯಲ್ಲಿ ಯಾರಿಂದ ಯಾರಿಗಾಗಿ ಕ್ರಿಯಾಶೀಲವಾಗಿದೆ ಎಂಬುದನ್ನು ತಿಳಿಯುವುದು. ರಾಗಿ ಬೀಸುವವರು ಮತ್ತು ರಾಗಿ ಪದ, ಬತ್ತ ಕುಟ್ಟುವವರು ಮತ್ತು ಕುಟ್ಟುವ ಪದ, ನೀರೆತ್ತುವವರು ಮತ್ತು ನೀರೆತ್ತುವ ಹಾಡು, ಕಣ ಮತ್ತು ಹಂತಿಯ ಹಾಡುಗಳು ಹೋದವು ಎಂಬ ದುಃಖ ಒಂದು ನೆನಪು ಮಾತ್ರವಾಗಿರಲಿ. ಅವೇ ಇರಬೇಕೆಂದರೆ ನಾವೂ ಸಮಾಧಿಯೊಳಕ್ಕೆ ಹೋಗಬೇಕಾಗುತ್ತದೆ. ಜನಪದಗಳು ಯಾವ ಕಾಲಕ್ಕೂ ಬದುಕಬೇಕು ಎಂಬುದೆ ಜಾನಪದ ಸೃಷ್ಟಿಯ ಉದ್ದೇಶವಾಗಿದೆ. ಜಾನಪದ ಸಾಯುವವರನ್ನು ಹುಡುಕುತ್ತ, ಬದುಕಿರುವವರನ್ನು ಮರೆಯುವಂಥದಲ್ಲ, ಬದುಕಿರುವವರನ್ನು ಉಸಿರಾಡಿಸುತ್ತ, ಉಳಿಸಿ ಬೆಳೆಸುವಂಥದು. ಮನುಷ್ಯ ಬದುಕನ್ನು ಸಂಬಂಧಾತ್ಮಕವಾಗಿಸುತ್ತ ಅನಂತಕಾಲ ಮುನ್ನಡೆಯುವಥದ್ದು. ಜಾನಪದ ಜ್ಞಾನ

ಆಧುನಿಕ ವಿಜ್ಞಾನದಂತೆ ಆಕಾಶದ ಕಡೆಗೆ ನೋಡುವಂಥದಲ್ಲ. ಭೂಮಿಯ ಒಳಗಿಂದ ಬೆಳೆದು ಆಕಾಶದ ಕಡೆಗೆ ಅರಳಿ ನಿಲ್ಲುವ ಕ್ರಿಯೆಯೆ ಜಾನಪದವಾಗಿದೆ. ಜಾನಪದ ಎಂಬುದು ಜನ, ಸಾಮಾನ್ಯವಾಗಿ ಹುಟ್ಟು ಹಾಕಬಹುದಾದದ್ದು, ಹಂಚಿಕೊಳ್ಳಬಹುದಾದದ್ದು, ಒಡನಾಡ ಬಹುದಾದದ್ದು ಮತ್ತು ವಿಸ್ತರಿಸಬಹುದಾದದ್ದು. ಈ ಪ್ರಕ್ರಿಯೆ ಬಿದ್ದ ಗಾಯಕ್ಕೆ ಎಲೆ ಔಷಧ ಹಚ್ಚಿಕೊಂಡಷ್ಟು ಸರಳವಾಗಿರಬಹುದು ಅಥವ ನೇಗಿಲು, ಕುಂಟೆ ಹೊಡೆಯುವುದನ್ನು ಕಲಿತಷ್ಟು ಕಷ್ಟವೂ ಆಗಿರಬಹುದು. ಯಾವ ಕಾರಣಕ್ಕೂ ಜಾನಪದ ಸೃಜನಶೀಲ ಕ್ರಿಯೆ, ಖಾಸಗಿ ಮಾತ್ರ ಅಲ್ಲ : ಅಂದರೆ ಸಾರ್ವಜನಿಕ ಅಲ್ಲ. ಅದು ಒಂದು ಕೂಟದ, ತಂಡದ ಅಥವ ಸಮೂಹದ ಶೋಧ. ಪ್ರೇರಣೆಗೆ ಒಬ್ಬ ವ್ಯಕ್ತಿ ಕಾರಣವಾಗಬಹುದು. ಆದರೆ ಒಟ್ಟು ಉತ್ಪತ್ತಿಯಲ್ಲಿ ಒಂದು ಕೂಟ ಅಥವ ತಂಡ ಇದ್ದೇ ಇರುತ್ತದೆ. ಹಾಗಿಲ್ಲದಿದ್ದಲ್ಲಿ ಅದು ಪೇಟೆಂಟ್ ಆಗಿ ಹೋಗುತ್ತದೆ. ಜಾನಪದ ಸರ್ವಥಾ ಏಕಸ್ವಾಮ್ಯ ವಿರೋಧಿ. ಈ ಏಕಸ್ವಾಮ್ಯ ಎಂಬುದು ಪ್ರತ್ಯೇಕತೆಯನ್ನು ಸೃಷ್ಟಿ ಮಾಡಿ ಜನಸಾಮಾನ್ಯರ ಉತ್ಪಾದನಾ ಚಟುವಟಿಕೆಯನ್ನು ನಿರ್ಬಂಧಿಸುತ್ತದೆ. ನಮ್ಮ ದೇಶದ ಜಾತಿ ಮತ್ತು ಅಸ್ಪೃಶ್ಯತೆಗಳು ಇದಕ್ಕೆ ಜ್ವಲಂತ ಸಾಕ್ಷಿ. ನಮ್ಮಲ್ಲಿ ಅಸ್ಪೃಶ್ಯತೆ ಹುಟ್ಟಿದ್ದೆ ಈ ದೇಶದ ದುಡಿಯುವ ಶಕ್ತಿ ಸೃಜನಶೀಲತೆಯಲ್ಲಿ ತೊಡಗಿ ಸಂಪತ್ತನ್ನು ಸಂಪಾದಿಸಿಕೊಳ್ಳದಂತೆ ನೋಡಿಕೊಳ್ಳಲು. ಅಸ್ಪೃಶ್ಯತೆ ಕೇವಲ ಮುಟ್ಟಿಸಿಕೊಳ್ಳುವುದಕ್ಕೆ ಸೀಮಿತವಾಗಿಲ್ಲ. ನೋಡುವುದು, ತಿನ್ನುವುದು, ಉತ್ಪತ್ತಿ ಮಾಡುವುದು ಮತ್ತು ಚಲಿಸುವುದಕ್ಕೂ ಸಂಬಂಧಿಸಿದೆ. ಒಂದು ಸಮಾಜವನ್ನು ಸಂಪೂರ್ಣ ನಿಷ್ಕ್ರಿಯಗೊಳಿಸಲು ಇದಕ್ಕಿಂತ ಹೆಚ್ಚಿನ ಸರ್ವಾಧಿಕಾರ ಬೇಕಾಗಿಲ್ಲ.

ಜಾನಪದ ಪಳಯುಳಿಕೆಯೋ, ಜೀವಂತ ಪಳಯುಳಿಕೆಯೋ ಆಗಿದ್ದರೆ ಸತ್ತು ಬಿದ್ದ ಹಕ್ಕಿಗಳನ್ನು ಲೆಕ್ಕ ಮಾಡುವಂತೆ ಏನೇನು ಅಂಶಗಳು (items) ಇವೆ ಎಂದು ಹೇಳಬಹುದು. ನನಗೆ ಅನಿಸುವ ಹಾಗೆ ಜಾನಪದ ಹಾರುವ ಹಕ್ಕಿಯ ಹಾಗೆ, ಹರಿಯುವ ನೀರಿನ ಹಾಗೆ ಮತ್ತು ಮಳೆಯ ಹದಕ್ಕೆ ಗರ್ಭಧರಿಸುವ ಭೂಮಿಯ ಹಾಗೆ. ಜಾನಪದ ಸಂಗ್ರಹ ಎಂದರೆ ಹಕ್ಕಿ ಕೂತಾಗ ಅದರ ಬಗ್ಗೆ ಮಾಹಿತಿ ಪಡೆದಂತೆ ಮತ್ತು ಬೆಳೆದ ತೆನೆಗಳನ್ನು ಲೆಕ್ಕ ಹಾಕಿದಂತೆ. ಉಳಿದ ಪ್ರಕ್ರಿಯೆ ನಮಗೆ ಸಿಕ್ಕಿಯೆ ಇರುವುದಿಲ್ಲ. ಆದ್ದರಿಂದ ಜಾನಪದ ಏನೆಲ್ಲವನ್ನು ಒಳಗೊಂಡಿರುತ್ತದೆ ಎಂದರೆ ಜಾನಪದ ಇದ್ದಕಡೆ, ಕರೆಂಟು ಇದ್ದಕಡೆ ದೀಪ ಉರಿಯುವಂತೆ ಒಂದು ಸಾಮಾನ್ಯತಾ ಸಮಾಜ ಮತ್ತು ಸಾಮಾನ್ಯತಾ ಸಂಸ್ಕೃತಿ ಕ್ರಿಯಾಶೀಲವಾಗಿರುತ್ತದೆ ಎಂದು ಹೇಳಬೇಕು. ಕುವೆಂಪು ಅವರ ಅರ್ಥದಲ್ಲಿ ಹೇಳುವುದಾದರೆ ಜಾನಪದ ಎಂಬುದು 'ಶ್ರೀಸಾಮಾನ್ಯತೆ' ನನ್ನ ಅರ್ಥದಲ್ಲಿ 'ಗೌರವ ಮಾನ್ಯತೆ', ಸಾಮಾನ್ಯನಿಂದ ಒಪ್ಪಿಕೊಂಡು, ಸ್ಥಾನ-ಮಾನ ಪಡೆದುಕೊಂಡು ನಿರಂತರವಾಗಿ ಅವನ ಬಳಕೆಯಲ್ಲಿ ಇರುತ್ತದೊ ಅದೆಲ್ಲವೂ ಜಾನಪದ. ಇದು ಹಳ್ಳಿಯಿಂದ ದಿಲ್ಲಿಯವರೆಗೆ, ಸಾಮಾನ್ಯನಿಂದ ಶ್ರೀಮಂತನವರೆಗೆ ವಾತಾವರಣದಂತೆ ಹರಡಿಕೊಂಡಿದೆ. ಹವಾನಿಯಂತ್ರಿತ ಬದುಕು ಜಾನಪದ ಬದುಕಲ್ಲ. ಹವಾಮಾನವನ್ನು ನಿಸರ್ಗ

ಕೊಟ್ಟಂತೆ ಉಳಿಸಿಕೊಳ್ಳುವುದು ಮತ್ತು ಅದಕ್ಕೆ ಒಗ್ಗಿ ಕೊಳ್ಳುವುದು ಜಾನಪದೀಯತೆ. ಆಗಲೇ ನಮಗೆ ಒಂದು ಕಡೆ ಎಸ್ಕಿಮೋಗಳ ಶೀತ ಜಾನಪದವೂ, ಮತ್ತೊಂದು ಕಡೆ ಆಫ್ರಿಕಾದ ಬೇಗೆಯ ಜಾನಪದವೂ ಸೋಪಜ್ಞವಾಗಿ ಕಾಣುತ್ತವೆ. ಕೆಲವರು ನಿರ್ದಿಷ್ಟ ಐಟಂಗಳಲ್ಲಿ ಸೂಚಿಸದಿದ್ದರೆ ವಿಷಯದ ಚೌಕಟ್ಟು ಉಳಿಯುವುದಿಲ್ಲ ಎನ್ನುತ್ತಾರೆ. ಜಾನಪದದ ಚೌಕಟ್ಟು ಸಾಮಾನ್ಯತೆ, ಅದು ಸಾರ್ವಕಾಲಿಕ ಸಾಮಾನ್ಯತೆ. ಯಾಕೆ ಅದು 'ಶ್ರೀಸಾಮಾನ್ಯತೆ' ಎಂದರೆ ಎಲ್ಲ ಕಾಲದಲ್ಲಿ; ಜಾತಿ, ವರ್ಗ, ಪುರೋಹಿತರು ಹುಟ್ಟಿ ಸಾಮಾನ್ಯತೆಯನ್ನು ಕೆಳಗಿರಿಸಿದ ಕಾಲದಲ್ಲಿ ಸರ್ವಸಾಧಾರಣ ಸಾಮಾನ್ಯತೆ ಎಂಬುದು ಅಲ್ಲಗಳೆದವರಲ್ಲೂ ಇದ್ದು ಇತರರೆಲ್ಲರಲ್ಲೂ ಇರುತ್ತದೆ, ಇದೆ.

ಈ ನಿಯಮಕ್ಕೆ ಒಳಪಟ್ಟಂತೆ ಯಾವೆಲ್ಲ ವಸ್ತು, ವ್ಯಕ್ತಿ, ವಿಷಯ ಮತ್ತು ಸಂದರ್ಭಗಳು ಬರುತ್ತವೊ ಅವೆಲ್ಲವೂ ಜಾನಪದದೊಳಗೆ ಸೇರುತ್ತವೆ. ಈ ನಾಲ್ಕೂ ಪ್ರಮುಖ ಆಶಯಗಳನ್ನು ಇಟ್ಟುಕೊಂಡು ಪ್ರಕ್ರಿಯಾತ್ಮಕವಾಗಿ ಜಾನಪದವನ್ನು ಕೆಳಗಿನಂತೆ ಅರ್ಥ ಮಾಡಿಕೊಳ್ಳಬಹುದು.

೧. ವಸ್ತು ಪ್ರಕ್ರಿಯಾತ್ಮಕತೆ

೨. ವ್ಯಕ್ತಿ ಪ್ರಕ್ರಿಯಾತ್ಮಕತೆ

೩. ವಿಷಯ ಪ್ರಕ್ರಿಯಾತ್ಮಕತೆ

೪. ಸಂದರ್ಭ ಪ್ರಕ್ರಿಯಾತ್ಮಕತೆ

೧) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ವಸ್ತು ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತದೊ ಅದು ಜಾನಪದೀಯವಾಗಿರುತ್ತದೆ. ಅಲ್ಲಿಂದ ಹಿಂದೆ ಸರಿದರೆ ಪಳಯುಳಿಕೆಯಾಗುತ್ತದೆ. ಎತ್ತರಿಸಿಕೊಂಡರೆ ಅನ್ಯ ಜನಪದಕ್ಕೆ ಹೋಗುತ್ತದೆ. ದಿನನಿತ್ಯ ಜನಪದದೊಳಗೆ ಬಳಕೆಯಾಗುತ್ತಿರುವ ವಸ್ತುಗಳೆಲ್ಲವೂ ಜಾನಪದೀಯವೆ ಆಗಿರುತ್ತವೆ.

| | ಭೋಗದ ವಸ್ತುಗಳು |
|---|---|
| ೧) ವಾಸದ ವಸ್ತುಗಳು (ಸಾಮಾನ್ಯ + ವಿಶೇಷ) | ೧) ರಾಜಭೋಗ |
| ೨) ವೃತ್ತಿಯ ವಸ್ತುಗಳು (ಸಾಮಾನ್ಯ + ವಿಶೇಷ) | ೨) ಭೋಜನ ಭೋಗ |
| ೩) ಊಟದ ವಸ್ತುಗಳು (ಸಾಮಾನ್ಯ + ವಿಶೇಷ) | ೩) ವಸ್ತ್ರ ಭೋಗ |
| ೪) ಆಟದ ವಸ್ತುಗಳು (ಸಾಮಾನ್ಯ + ವಿಶೇಷ) | ೪) ವಾಹನ ಭೋಗ |
| ೫) ಜೀವನಾವರ್ತನ ವಸ್ತುಗಳು (ಸಾಮಾನ್ಯ + ವಿಶೇಷ) | ೫) ಸ್ತ್ರೀ ಭೋಗ |
| ೬) ಉಡುಗೆ ವಸ್ತುಗಳು (ಸಾಮಾನ್ಯ + ವಿಶೇಷ) | ೬) ವಸತಿ ಭೋಗ |

೭) ಸಾರಿಗೆ ವಸ್ತುಗಳು (ಸಾಮಾನ್ಯ + ವಿಶೇಷ) ೭) ಯಾತ್ರೆ ಭೋಗ

೧) ಜನಪದ ವಸ್ತುವಾಗಿ ನಾವೆಲ್ಲ ಹಾಸಿ ಹೊದ್ದುಕೊಳ್ಳುವ ಕಂಬಳಿ ಜನಸಾಮಾನ್ಯರ ಹೊದಿಕೆ. ಕುರಿಯ ತುಪ್ಪಟವನ್ನೇ ಮೊದಲ ವಾಸಿಗಳು ಹಾಸಿ ಹೊದ್ದುಕೊಳ್ಳುತ್ತಿದ್ದಿರ ಬಹುದು. ಅದನ್ನು ಆನಂತರ ಕಂಬಳಿ ಮಾಡಿಕೊಂಡರು. ಅದು ಮುಂದೆ ಹಾಸಿಕೊಳ್ಳುವ ಕಂಬಳಿ, ಜಮಖಾನ, ಹಾಸಿಗೆ ಬಟ್ಟೆ, ಸ್ವೆಟರ್ ಮುಂತಾದ ರೂಪ ಹೊಂದಿದೆ. ಇದರ ಅನಿವಾರ್ಯತೆಯನ್ನು ಸಾಮಾನ್ಯ ಬದುಕಿನ ಸ್ತರದಲ್ಲಿ ಕಂಡು ಕೊಂಡಿದ್ದ ಪ್ರಭುಗಳು ತಮ್ಮ ಅಂತಸ್ತಿಗಾಗಿ ಅದನ್ನು ರತ್ನಗಂಬಳಿ ಮಾಡಿಕೊಂಡರು.

೨) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ವ್ಯಕ್ತಿ ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತಾನೊ ಅವನು ಜನಪದ ಸಮಾಜದ ವ್ಯಕ್ತಿತ್ವ ಆಗಿರುತ್ತಾನೆ. ಅದರೊಳಗಿಂದ ಹಿಂದೆ ಸರಿದರೆ ತಿರಸ್ಕೃತನಾಗುತ್ತಾನೆ. ಅದರ ಆಚೆಗೆ ಬೆಳೆದರೆ ಹೊರಗೆ ಹೋಗುತ್ತಾನೆ. ಹಳ್ಳಿಯಲ್ಲಿ ತಿಪ್ಪಣ್ಣನೊ ಕಪ್ಪಣ್ಣನೊ, ಭಾವನೊ ಬಂಧುವೊ, ಏನೇನೋ ಆಗಿದ್ದವನು ಜನಪದ ವ್ಯಕ್ತಿ ನಗರಕ್ಕೊ, ಹೊರದೇಶಕ್ಕೋ ಹೋದವನು ಸಾರೊ? ಸಾಹೇಬರೊ ಅಥವಾ ಫಾರಿನ್ ರಿಟರ್ನೊ ಆಗುತ್ತಾನೆ. ಜನಪದದ ವ್ಯಕ್ತಿಗಳೆಲ್ಲರೂ ವೃತ್ತಿಯ ವ್ಯಕ್ತಿಗಳೇ ಆಗಿರುತ್ತಾರೆ. ಕೆಲಸ ಮಾಡದವನಿಗೆ ಅಲ್ಲಿ ಮಾನ್ಯತೆ ಇಲ್ಲ. ತರಲೆ, ಚಾಟಗಿತ್ತಿ, ತಲೆಹಿಡುಕ, ಚಾಡಿಕೋರ ಇಂಥ ಚಿಲ್ಲರೆ ವ್ಯಕ್ತಿಗಳಿಗೂ ಅಲ್ಲಿ ಕೆಲಸ ಇರುತ್ತದೆ. ಅದಕ್ಕೆ ಅನುಗುಣವಾದ ಉತ್ಪಾದನೆ ಮತ್ತು ಗೌರವ ಇರುತ್ತದೆ. ಜನಪದ ವ್ಯಕ್ತಿಗಳಲ್ಲಿ ನೇಮಕ ಮಾಡಲ್ಪಟ್ಟವನು ಇರುವುದಿಲ್ಲ. ಜವಾಬ್ದಾರಿ ವಹಿಸಿಕೊಂಡವರು ಇರುತ್ತಾರೆ. ಇವರಲ್ಲಿ ೧) ಮುಖಂಡರು, ೨) ಉಸ್ತುವಾರಿಯವರು, ೩) ಪೂಜೆಯವರು, ೪) ಸೇವೆಯವರು, ೫) ಸರ್ವರು ಇರುತ್ತಾರೆ.

೩) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ವಿಷಯ ನಂಬಿಕೆಯಾಗಿ, ತತ್ವವಾಗಿ, ಸಿದ್ಧಾಂತವಾಗಿ, ಧರ್ಮವಾಗಿ ಅಥವ ಜ್ಞಾನವಾಗಿ ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತದೋ ಅದನ್ನು ಜನಪದ ಸಮಾಜದ ವಿಷಯ ಎಂದು ಕರೆಯಲಾಗುತ್ತದೆ. ಅದು ಜನಪದ ಸಮಾಜದಿಂದ ಹಿಂದೆ ಸರಿದರೆ ಭೂತ ಕಾಲವಾಗಿ ಉಳಿಯುತ್ತದೆ. ಅಭಿವೃದ್ಧಿ ಹೊಂದಿದರೆ ಸರ್ವ ಸಮಾಜಕ್ಕೆ ಮಾರ್ಗದರ್ಶನವಾಗುತ್ತದೆ. ಜನಪದ ಸಮಾಜದ ಗಾದೆಯೊಂದನ್ನು ತೆಗೆದುಕೊಳ್ಳಿ. ಒಂದು ಗಾದೆ ಏಕಕಾಲದಲ್ಲಿ ಒಂದು ನಂಬಿಕೆ, ಆಚರಣೆ ಮತ್ತು ಮಾರ್ಗದರ್ಶನವಾಗಿರುತ್ತದೆ. ಗಂಡ ಹೆಂಡತಿ ಮಧ್ಯೆ ಏನಿರಬೇಕು ಎಂಬುದು ಒಂದು

ಪ್ರಮುಖವಾದ ಜನಪದ ಸವಾಲು. ಸರಳವಾಗಿ ಯೋಚಿಸುವವರು ಒಂದು ಮಗು ಎನ್ನುತ್ತಾರೆ, ನಿಜವಾದ ಉತ್ತರ ನಂಬಿಕೆ. ಗಾದೆಯೆ ಸಮಾಜಸ್ತರ ಮಧ್ಯೆ ಏನಿಸಬೇಕು ಎಂದರೂ ಇದೇ ಉತ್ತರ. ಆ ನಂಬಿಕೆ ಕೇವಲ ನಂಬಿಕೆ ಅಲ್ಲ, ಅದು ಅವರ ಧರ್ಮ ದೇವರು, ವಿಚಾರ ಮತ್ತು ಆಚರಣೆಯೂ ಆಗಿರುತ್ತದೆ. ಹೊರಗಿನವರಿಗೆ ಅದು ಎಷ್ಟು ಪ್ರಸ್ತುತ ಎನ್ನುವ ಮಾತು ಬೇರೆ. ಒಳಗೆ ಜನಪದವನ್ನು ಕೂಡಿಸಲು ಮತ್ತು ಕೊಂಡೊಯ್ಯಲು ಅದು ಜೀವಧಾತುವಾಗಿದೆಯೆ ಎಂಬುದಷ್ಟೇ ಮುಖ್ಯವಾಗುತ್ತದೆ. ಈ ನಂಬಿಕೆ ಆ ಸಮಾಜದ ಒಪ್ಪಿಗೆಯೂ ವಿಮರ್ಶೆಯೂ ಆಗಿ ಕೆಲಸ ಮಾಡುವುದು ಸಾಮಾನ್ಯ.

ಳ) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ಸಂದರ್ಭ ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತದೊ ಅದನ್ನು ಜನಪದ ಸಮಾಜದ ಸಂದರ್ಭ ಎಂದು ಕರೆಯಲಾಗುತ್ತದೆ. ಅದು ಜನಪದ ಸಮಾಜದಿಂದ ಹೊರಗೆ ಹೋದರೆ ನಿರ್ಜೀವವಾಗುತ್ತದೆ. ಉತ್ತಮಗೊಂಡರೆ ಹೊಸ ಮಾದರಿ ವ್ಯವಸ್ಥೆಯಾಗುತ್ತದೆ. ಜನಪದ ಸಮಾಜದ ಒಳಗೆ ಹುಟ್ಟುವ ಮತ್ತು ಪ್ರಾಯೋಗಿಸುವ ಸಂದರ್ಭಗಳು ಬಹುಮುಖ್ಯವಾಗಿ ನಡವಳಿಕೆಗಳು, ಆಚರಣೆಗಳು, ಸಂಪ್ರದಾಯಗಳು, ಪಂಚಾಯ್ತಿಗಳು ಮತ್ತು ಹೊಡೆದಾಟಗಳಾಗಿರುತ್ತವೆ. ಈ ಎಲ್ಲವೂ ಸಕಾರಣದ ಮೇಲೆ ನಡೆದು ಸಕಾರಣವಾಗಿ ಅಂತ್ಯವಾಗುತ್ತವೆ.

ಜನಪದ ಮತ್ತು ಜಾನಪದವನ್ನು ಗ್ರಹಿಸಬೇಕಾದ ಚಿಂತನೆ ಯಾವ ಬಗೆಯದಾಗಿರಬೇಕು ಎಂಬ ಅಂಶಗಳನ್ನು ಕುರಿತು ಚರ್ಚಿಸಿದೆವು. ಈಗ ಜಾನಪದದ ನಿರಂತರತೆ ಎಂದರೆ ಭೂತ, ವರ್ತಮಾನ ಮತ್ತು ಭವಿಷ್ಯದಲ್ಲಿ ಜಾನಪದ ಹೇಗಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ಗ್ರಹಿಸಿ ಹೇಳಬೇಕಾಗಿದೆ.

ಜಾನಪದ ಏನೆಂದು ಮೊದಲು ಹೇಳಿದ್ದು ಬ್ರಿಟಿಷ್ ಉದ್ಯಮಪತಿ ವ್ಯವಸ್ಥೆ. ಅದು, ಜನಪದ ಭೂತಕಾಲದಲ್ಲಿ ಜೀವನ ವಿಧಾನ ಎಂದು ಹೇಳಿತು. ಈಗ ಇದ್ದರೂ ಅದು ಪ್ರಸ್ತುತ ಅಲ್ಲ ಎಂದಿತು. ಅಂದರೆ ಉಳಿಕೆ, ಪಳಯುಳಿಕೆ ಅಥವ ಜೀವಂತ ಪಳಯುಳಿಕೆ ಈ ಅರ್ಥದಲ್ಲಿ ಜಾನಪದವನ್ನು ಉತ್ಪತ್ತಿ ಮಾಡುವ ಮೂಲವಾದ ಜಾನಪದ, ಎಂದರೆ ಜನರ ಸಮೂಹ ಹಾಲಿ ವಾಸವಾಗಿದ್ದರೂ ನಾಗರೀಕ ಸಮಾಜಕ್ಕೆ ಹೋಲಿಸಿದರೆ ಹಳೆಯಕಾಲದ ಜನ. ಹಾಲಿ ಜೀವಂತವಾಗಿದ್ದು, ಒಂದು ಪ್ರದೇಶದಲ್ಲಿ ನಿರ್ದಿಷ್ಟ ಜೀವನ ವಿಧಾನವನ್ನಿಟ್ಟುಕೊಂಡು ಬದುಕುತ್ತಿದ್ದರೂ ಈ ಜನಪದವನ್ನು ವಾಸ್ತವ ಎಂದು ಯಾಕೆ ಒಪ್ಪಿಕೊಳ್ಳಲಿಲ್ಲ?

ಕೈಗಾರಿಕೆ-ಉದ್ಯಮಪತಿ-ಮಾರುಕಟ್ಟೆ ಎಂಬುವು ಒಂದೇ ತತ್ವದ ಮೂರು ನೆಲೆಗಳು.

ತಾನು ಉತ್ಪತ್ತಿ ಮಾಡುತ್ತಿರುವುದಕ್ಕಿಂತ ಹಿಂದಿನದು ಹಳೆಯದು ಎನ್ನದಿದ್ದರೆ ಇವರ ಮಾಲುಗಳು ಬಿಕರಿಯಾಗುವುದಿಲ್ಲ. ಆದ್ದರಿಂದ ಜನಪದರ ಜ್ಞಾನ ಮತ್ತು ಉತ್ಪತ್ತಿ ಈ ಕಾಲಕ್ಕೆ ಸೂಕ್ತವಲ್ಲ ಎಂದು ಪ್ರಗತಿಯ ಭಾಷೆಯಲ್ಲಿ (outdated) ಎಂದು ಹೇಳಿಬಿಟ್ಟರೆ ಮುಗಿಯಿತು, ತಮ್ಮ ವಸ್ತುಗಳ ಕಡೆಗೆ ಜನ ಗಿರಾಕಿಗಳಾಗಿ ಬರುತ್ತಾರೆ. ಹದಿನೆಂಟನೆಯ ಶತಮಾನದಲ್ಲಿ ಕೈಗಾರಿಕೋದ್ಯಮಿ ಹೇಳಿದ ರೀತಿಯಲ್ಲಿಯೆ ಈಗಿನ ಸ್ಟೈಟ್ ಉದ್ಯಮಿ ತನ್ನ ಟಿ.ವಿ. ಜಾಹೀರಾತಿನಲ್ಲಿ ಸ್ಟೈಟ್ ಒಂದೇ ಅಸಲಿ ಉಳಿದುವೆಲ್ಲ ನಕಲಿ ಎನ್ನುತ್ತಾನೆ. ಸರ್ಫ್ ಖರ್ಚಾಗದಿದ್ದರೆ ಅದು ಹಳೆಯದಾಯಿತು ಎಂದು ಹೇಳಿ ಸರ್ಫ್ ಸೂಪರ್ ಎಂದು ಜಾಹೀರಾತು ನೀಡುತ್ತಾನೆ. ಅದಕ್ಕೂ ಬೇಡಿಕೆ ಕಡಿಮೆಯಾದರೆ ಈಗ ಬಂದಿದೆ ಸರ್ಫ್ ಎಕ್ಸೆಲ್ ಎಂದು ಸೆಳೆಯುತ್ತಾನೆ. 'ಈಗ' ಅಥವಾ 'ಈಹೊತ್ತು' ಮತ್ತು 'ಸೆಳೆ' ಎಂಬ ವರ್ತಮಾನ ಮತ್ತು ಆಕರ್ಷಣೆ ಎಂಬ ತತ್ವಗಳು ಪಾರಂಪರಿಕವಾಗಿ ನಿರಂತರ ಬದುಕುತ್ತಾ ಬಂದಿರುವ ಜಾನಪದ ಉತ್ಪತ್ತಿ ಎಂಬ ಜ್ಞಾನ ಮತ್ತು ವಸ್ತುಗಳನ್ನು ಹಿಂದೆ ತಳ್ಳಿವೆ.

ಹಾಗಿದ್ದಲ್ಲಿ ವರ್ತಮಾನದ ಜನಪದ ಮತ್ತು ಜಾನಪದ ಯಾವುದು? ಯಾವುದೇ ಜನ ಸಮೂಹ ಈಗ ಬದುಕುತ್ತಿದೆ ಎಂದರೆ ಅದು ವರ್ತಮಾನಕಾಲದ ಜಾನಪದವೇ ಆಗುತ್ತದೆ. ಬುಡಕಟ್ಟು, ಅಲೆಮಾರಿ, ರೈತ, ದಲಿತ ಮತ್ತು ಹಿಂದುಳಿದ ಎಂಬ ಬೇರೆ ಬೇರೆ ಸ್ಥಿತಿಯ ಜನ ಸಮೂಹಗಳು ನಮ್ಮಲ್ಲಿ ಇವೆ. ನಾಗರೀಕರಿಗೆ ಹೋಲಿಸಿದರೆ ಇವರು ಹಿಂದುಳಿದಿದ್ದಾರೆ ಎಂಬುದು ನಿಜ. ಅವರಿಗೆ ನಾಗರೀಕರಿಗೆ ಸಿಕ್ಕಿರುವ ಸೌಲಭ್ಯಗಳು ಸಿಕ್ಕಿಲ್ಲಾ ಅಂದ ಮಾತ್ರಕ್ಕೆ ಅವರು ವರ್ತಮಾನಕಾಲದಲ್ಲಿ ಅಂದರೆ, ಈ ಹೊತ್ತು ಬದುಕಿಲ್ಲ ಎಂದು ಅರ್ಥವೆ? ನಾಗರೀಕರು ಎನ್ನುವವರ ಸಂಖ್ಯೆಗೆ ಹೋಲಿಸಿದರೆ ಈ ಜನರ ಸಮೂಹಗಳ ಸಂಖ್ಯೆಯೆ ಅಧಿಕವಾಗಿದೆ. ಆದರೆ ಕೈಗಾರಿಕೋದ್ಯಮಿ ತಮ್ಮ ವ್ಯವಸ್ಥೆ ತಯಾರು ಮಾಡಿದ ವಸ್ತುಗಳನ್ನು ಯಾರು ಬಳಸುತ್ತಿಲ್ಲವೊ ಅವರು ವರ್ತಮಾನದಲ್ಲಿ ಇಲ್ಲ ಎಂದು ಘೋಷಿಸಿದ್ದಾರೆ. ಯಾರು ಪ್ರೆಸ್ಟೀಜ್ ಕುಕ್ಕರನ್ನು ಪ್ರೀತಿಸುತ್ತಾನೋ ಅವನು ಹೆಂಡತಿಯನ್ನು ಪ್ರೀತಿಸುತ್ತಾನೆ ಎಂಬ ಜಾಹೀರಾತಿನಂತೆ. ಉಳಿದೆಲ್ಲ ಜನರಿಗೆ ನಾಗರೀಕರ ಸೌಲಭ್ಯಗಳು ದೊರೆಯದಿರುವುದಕ್ಕೆ ಈ ಉದ್ಯಮಪತಿಯ ವ್ಯಾಪಾರಿ ಬುದ್ಧಿಯೆ ಕಾರಣ. ಕಡಿಮೆ ಬೆಲೆಯ ತಮ್ಮ ಉತ್ಪತ್ತಿಗೆ ದುಬಾರಿ ಬೆಲೆ ಇಟ್ಟು ಮಾರುತ್ತಾರೆ. ಸಹಜವಾಗಿಯೆ ಕಡಿಮೆ ಆದಾಯ ಇರುವವರು ಹೆಚ್ಚಿನ ನಾಗರೀಕ ಸೌಲಭ್ಯಗಳನ್ನು ಪಡೆಯಲು ಆಗುವುದಿಲ್ಲ (ನಿಧಾನವಾಗಿ ಆ ವಸ್ತುಗಳನ್ನು ಅವರು ಪಡೆಯುತ್ತಾರೆ). ಅಂದರೆ ಆಧುನಿಕ ನಾಗರೀಕ ವಸ್ತುಗಳನ್ನು ಕೊಳ್ಳುವ ಶಕ್ತಿಯ ಆಧಾರದ ಮೇಲೆ, ಕಡಿಮೆ ಕೊಳ್ಳುವವನು ಹಿಂದುಳಿದವನು ಮತ್ತು ಹೆಚ್ಚು ಕೊಳ್ಳುವವನು ಮುಂದುವರಿದವನು ಎಂದು ತೀರ್ಮಾನಿಸಲಾಗಿದೆ. ಜ್ಞಾನದ ವಿಷಯದಲ್ಲಿಯೂ ಹೀಗೆಯೆ. ಪಾಶ್ಚಾತ್ಯ ಜ್ಞಾನವನ್ನು ತಿಳಿದುಕೊಂಡವನು ಆಧುನಿಕ ಅಥವಾ ನಾಗರೀಕ. ಸ್ಥಳೀಯ ಜ್ಞಾನಿ

ಹಿಂದುಳಿದವನು ಆಗಿದ್ದಾನೆ. ಈ ಉದ್ಯಮಪತಿಗಳೇ ಹೇಳುವ ಹಿಂದುಳಿದವರನ್ನು ತಯಾರು ಮಾಡಿದವರು ಯಾರು? ಹೀಗೆ ಹಿಂದುಳಿದವರು ಮತ್ತು ಮುಂದುವರಿದವರೆಂಬ ಹೆಸರು ಮತ್ತು ಸ್ಥಿತಿಗೆ ಕಾರಣರಾದವರೇ ಈ ಉದ್ಯಮಪತಿಗಳು. ನಮ್ಮ ಭಾರತದಲ್ಲಿ ಜಾತಿಯನ್ನು ಉದ್ಯಮ ಮಾಡಿಕೊಂಡು ಕೆಲವರು ಮೇಲೆ ಇದ್ದು ಕೆಳಗಿನವರನ್ನು ಶೂದ್ರ ಮತ್ತು ಪಂಚಮ ಎಂದು ಹಿಂದೆ ತಳ್ಳಿದ್ದುದು ಅದೇ.

ವರ್ತಮಾನದ ಜಾನಪದವೆಂದರೆ ಉಳಿಕೆ, ಪಳಯುಳಿಕೆ ಅಥವ ಜೀವಂತ ಪಳಯುಳಿಕೆ ಅಲ್ಲ, ಜಾನಪದ ಜೀವಂತ. ಇಲ್ಲಿ ನಮಗೆ ಬೇಡವಾದ ಉಳಿಕೆ ಎಂಬ ಅಸ್ಪೃಶ್ಯತೆ ಇದೆ. ಮತಮಾನ್ಯ ಎಂಬ ಪಳಯುಳಿಕೆಗಳು ಇವೆ ಮತ್ತು ಜಾತಿ ಎಂಬ ಜೀವಂತ ಪಳಯುಳಿಕೆಯೂ ಇದೆ. ಇದೇ ಸಂದರ್ಭದಲ್ಲಿ ಸ್ನೇಹ, ಸಹೋದರತೆ, ಮತ್ತು ಸಹಬಾಳ್ವೆ ಎಂಬ ಜೀವಂತ ನಡವಳಿಕೆಗಳಿವೆ. ಇವುಗಳು ಯಾವ ಕಾಲದಲ್ಲಿ, ಯಾವ ಸ್ಥಳ / ದೇಶದಲ್ಲಿ ಹುಟ್ಟಿದವು ಎಂದು ಹೇಳಬಹುದೆ? ಅವುಗಳ ಕಾಲ ನಿರ್ಣಯ ಮಾಡಿ ಅವು ನಮ್ಮ ಪಳಯುಳಿಕೆಗಳು ಎಂದು ತೀರ್ಮಾನಿಸಿಬಿಡಬಹುದೆ? ಸಾಮಾನ್ಯ ಜನರು ನಿರಂತರ ಉಳಿಸಿಕೊಂಡು ಮತ್ತು ಬೆಳೆಸಿಕೊಂಡು ಬಾಳುತ್ತಿರುವ ನಡವಳಿಕೆಗಳನ್ನೇ ನಾವು ಜಾನಪದ ಎಂದು ಕರೆಯಬಹುದು. ಇಂಥ ಜಾನಪದ ವರ್ತಮಾನದ್ದೂ ಹೌದು, ಭವಿಷ್ಯದ ಜೀವನ ವಿಧಾನವೂ ಹೌದು. ತಾತ್ಕಾಲೀನವಾಗಿ ಬೇರೆಯಾಗುವ ನಾಗರೀಕ, ಮೇಲುವರ್ಗ, ಮೇಲು ಪಂಥ, ಮೇಲು ಪಂಗಡ, ಅಧಿಕಾರ, ನೌಕರ ಎಂಬಿತ್ಯಾದಿ ಜನರು ಮೂಲತಃ ಸಾಮಾನ್ಯರೇ ಆಗಿದ್ದು ತತ್ಕಾಲದಲ್ಲಿ ಪಡೆದ ಅನುಕೂಲಗಳಿಂದ ಶಿಷ್ಟ, ನಾಗರೀಕ ಅಥವ ಆಧುನಿಕರು ಎನಿಸಿಕೊಂಡಿದ್ದಾರೆ.

ಆದ್ದರಿಂದ ಪ್ರಸ್ತುತ ಜನಪದ ಮತ್ತು ಜಾನಪದವನ್ನು ನಿರ್ವಚಿಸಿಕೊಳ್ಳುವಾಗ ನಿರಂತರವಾಗಿ ಸ್ನೇಹ, ಸೋದರತ್ವ ಮತ್ತು ಸಹಬಾಳ್ವೆ ಮೌಲ್ಯಗಳನ್ನು ಉಳಿಸಿಕೊಂಡು ಮತ್ತು ಅವುಗಳನ್ನು ಬದುಕುತ್ತ ಬರುತ್ತಿರುವ ಜನಸಮೂಹವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಸಮೂಹಕ್ಕೆ ಬೇರೆ ಬೇರೆ ಸಂದರ್ಭ ಮತ್ತು ಕಾಲಗಳಲ್ಲಿ ಎದುರಾಗುವ ಬದಲಿ ವ್ಯವಸ್ಥೆಗಳಾದ ನಾಗರೀಕತೆ, ಆಧುನಿಕತೆ, ವಿದೇಶಿ ಮತ್ತು ಜಾಗತೀಕರಣ ಇತ್ಯಾದಿ ಸಂಸ್ಕೃತಿ ಜೊತೆಗೆ ನಡೆಯುವ ಸಂಘರ್ಷ ಮತ್ತು ಅನುಸಂಧಾನವನ್ನು ಸಹಜವೆಂದು ಹಾಗೂ ಜನಪದಗಳು ಬೆಳೆಯುವ ಮಾರ್ಗ ಇದೆಂದು ಒಪ್ಪಿ ನಡೆಯಬೇಕಾಗುತ್ತದೆ. ಇಂಥ ಸಹಜ ಸ್ಥಿತಿಯಲ್ಲಿ ಜನಪದ ಮತ್ತು ಜಾನಪದ ಏನೆಂದು ತಿಳಿಯೋಣ. (೧) ಒಂದು ನಿರ್ದಿಷ್ಟ ಪ್ರದೇಶದಲ್ಲಿ (೨) ಒಂದು ನಿರ್ದಿಷ್ಟ ಸಂಸ್ಕೃತಿಯನ್ನು ಇಟ್ಟುಕೊಂಡು ಬಾಳುವೆ ಮಾಡುತ್ತ ಬರುತ್ತಿರುವ ಒಂದು ನಿರ್ದಿಷ್ಟ ಜನ ಸಮೂಹವೆ ಜಾನಪದ.

ಒಂದು ನಿರ್ದಿಷ್ಟ ಪ್ರದೇಶವೆಂದರೆ : ಒಂದು ಭೌಗೋಳಿಕ ಪ್ರದೇಶ, ಒಂದು ಭಾಷಿಕ

ಪ್ರದೇಶ, ಒಂದು ಸಾಂಸ್ಕೃತಿಕ ಪ್ರದೇಶ ಅಥವ ಒಂದು ದೇಶ. ಇತ್ತೀಚಿನ ದಿನಗಳಲ್ಲಿ ಜಗತ್ತಿನ ಒಂದು ಖಂಡ, ಉಪಖಂಡ ಅಥವ ಭಾಗವನ್ನು ಒಂದು ಸಮಾನ ಸಂಸ್ಕೃತಿಯ ಪ್ರದೇಶವೆಂದು ಗುರುತಿಸಲಾಗಿದೆ.

ಭೌಗೋಳಿಕ ಪ್ರದೇಶಕ್ಕೆ ಉದಾ : ಬಯಲುನಾಡು, ಮಲೆನಾಡು, ಕರಾವಳಿ ಪ್ರದೇಶ, ಬೆಳವಲನಾಡು ಇತ್ಯಾದಿ. ಭಾಷಿಕ ಪ್ರದೇಶಕ್ಕೆ ಉದಾ: ತಮಿಳು ನಾಡು, ಕನ್ನಡ ನಾಡು, ತುಳು ನಾಡು, ಮಲಯಾಳ ದೇಶ ಇತ್ಯಾದಿ.

ಸಾಂಸ್ಕೃತಿಕ ಪ್ರದೇಶಕ್ಕೆ ಉದಾ : ಆರ್ಯಾವರ್ತ ದ್ರಾವಿಡ ನಾಡು, ದೇಶಕ್ಕೆ : ಭಾರತ, ಶ್ರೀಲಂಕಾ, ಬಾಂಗ್ಲಾದೇಶ ಇತ್ಯಾದಿ.

ಒಂದು ನಿರ್ದಿಷ್ಟ ಸಂಸ್ಕೃತಿ ಎಂದರೆ : ಒಂದು ಸಮಾನ ನಂಬಿಕೆ, ತತ್ವ, ಆರ್ಥಿಕ ಸ್ಥಿತಿ, ರಾಜಕೀಯ ಅಥವ ಸಹಕಾರವೆಂಬ ನಡವಳಿಕೆಗಳನ್ನು ಉಳಿಸಿಕೊಂಡು ಮತ್ತು ಆಚರಿಸಿಕೊಂಡು ಬರುವುದು. ಒಂದು ಸಮೂಹ ಆಚರಿಸಿಕೊಂಡು ಬರುತ್ತಿರುವ ಈ ಸಂಸ್ಕೃತಿ ನೆನ್ನೆ ಮೊನ್ನೆಯದಾಗಿರಕೂಡದು. ಅನೇಕ ಕಾಲಗಳಲ್ಲಿ ಒಂದು ಸಮೂಹದ ಮಧ್ಯೆ ಉಳಿದು, ಪರೀಕ್ಷಿಸಿಕೊಂಡು ಮತ್ತು ಪ್ರಾಯೋಗಿಸಿಕೊಂಡು ಆ ಸಮೂಹಕ್ಕೆ ಅದು ನಮ್ಮ ಅಸಲಿ ಜೀವನತತ್ವ ಎನಿಸಿಕೊಂಡು ಬೆಳೆದು ಬಂದಿರಬೇಕು. ಹೀಗೆ ಬೆಳೆದು ಬಂದ ಸಂಸ್ಕೃತಿಯ ದಾರಿಯನ್ನು ಸಾಂಸ್ಕೃತಿಕ ಇತಿಹಾಸ ಎಂದು ಕರೆಯುತ್ತೇವೆ.

**ನಂಬಿಕೆ ಸಂಸ್ಕೃತಿಗೆ** ಉದಾ : ದ್ವಿಜ ಸಂಸ್ಕೃತಿ, ಮಾರ್ಗ ಸಂಸ್ಕೃತಿ. ಬೇರೆ ಸಮೂಹಕ್ಕೆ ಈ ನಂಬಿಕೆ ಸುಳ್ಳು ಮೋಸ ಅಥವ ವಂಚನೆ ಎನಿಸಬಹುದು. ನಂಬಿದವರಿಗೆ ಅದು ಸ್ವರ್ಗ. ತತ್ವ ಸಂಸ್ಕೃತಿಗೆ ಉದಾ : ವೃತ್ತಿ ಸಂಸ್ಕೃತಿಗಳು (ಕ್ಷತ್ರಿಯ, ವೈಶ್ಯ, ಕೃಷಿಕ, ಸೇವಕ, ಕಾರ್ಮಿಕ ಇತ್ಯಾದಿ) ಧರ್ಮ ಸಂಸ್ಕೃತಿಗಳು (ಕ್ರೈಸ್ತ, ಮುಸಲ್ಮಾನ, ಪಾರ್ಸಿ, ಬೌದ್ಧ ಇತ್ಯಾದಿ)

**ಆರ್ಥಿಕ ಸಂಸ್ಕೃತಿಗೆ** ಉದಾ : ಡಾಲರ್ ಸಂಸ್ಕೃತಿ, ಕೈಗಾರಿಕಾ ಸಂಸ್ಕೃತಿ, ಯೂರೋ ಆರ್ಥಿಕ ವ್ಯವಸ್ಥೆ.

**ರಾಜಕೀಯ ಸಂಸ್ಕೃತಿಗೆ** ಉದಾ : ನ್ಯಾಟೋ, ಅಲಿಪ್ತ, ಯೂರೋ ಇತ್ಯಾದಿ

**ಸಹಕಾರ ಸಂಸ್ಕೃತಿಗೆ** ಉದಾ : ವಿಶ್ವ ಸಂಸ್ಥೆಯ ಉದಯದೊಂದಿಗೆ ಬೇರೆ ಬೇರೆ ರಾಷ್ಟ್ರಗಳು ತಮ್ಮ ಸಾಮಾಜಿಕ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಸಹಕಾರವನ್ನು ವೃದ್ಧಿಸಿಕೊಂಡು ಬದುಕುವುದು ದ್ವಿಪಕ್ಷೀಯ ಸಂಬಂಧ, ಬಹುಪಕ್ಷೀಯ ಸಂಬಂಧ. ಅಭಿವೃದ್ಧಿ ರಾಷ್ಟ್ರಗಳು; ಜಿ.೮. ಅಭಿವೃದ್ಧಿಶೀಲ ರಾಷ್ಟ್ರಗಳು, ಹಿಂದುಳಿದ ರಾಷ್ಟ್ರಗಳು, ಅಣುಜ್ಞಾನ ಶೋಧ ರಾಷ್ಟ್ರಗಳು. ಅಣುಜ್ಞಾನ ಶೋಧವಿಲ್ಲದ ರಾಷ್ಟ್ರಗಳು.

**ಬಾಳುವೆ ಎಂದರೆ :** ಒಂದು ಪ್ರದೇಶ ಹಾಗೂ ಸಂಸ್ಕೃತಿಯ ಚೌಕಟ್ಟಿನಲ್ಲಿ ನಡೆದ-ನಡೆಯುತ್ತಿರುವ ಸಾಮಾಜಿಕ, ಚಾರಿತ್ರಿಕ ಘಟನೆಗಳ ಅನುಭವದ ಮತ್ತು ಅನುಸರಣೆಯ ಮೊತ್ತ. ಪ್ರತಿಯೊಂದು ಜನಪದಕ್ಕೂ ಒಂದು ನಿರ್ದಿಷ್ಟ ಸಂಸ್ಕೃತಿ ಇರುವ ಹಾಗೆ ಆ ಸಂಸ್ಕೃತಿಯನ್ನು ರೂಪಗೊಳಿಸಿದ ಸಾಮಾಜಿಕ ಆರ್ಥಿಕ ಚಟುವಟಿಕೆಗಳ ಇತಿಹಾಸ ಇರುತ್ತದೆ. ಇದು ಆ ಜನಪದವನ್ನು ಇತರ ಜನಪದಗಳಿಗೆ ಹೋಲಿಸಿದಾಗ ವಿಶಿಷ್ಟ ಮತ್ತು ವಿಭಿನ್ನವಾಗಿ ತೋರಿಸುತ್ತದೆ. ಈ ವಿಶಿಷ್ಟತೆಯ ಮೇಲೆ ಆ ಜನಪದ ತನ್ನ ನಿರಂತರತೆ ಮತ್ತು ಅಸ್ತಿತ್ವವನ್ನು ಪ್ರತಿಪಾದಿಸುತ್ತದೆ. ಜನಪದವೊಂದರ ಈ ಅಸ್ತಿತ್ವ ಗುಣಕ್ಕೆ ಅನನ್ಯತೆ (identity) ಎಂದು ಕರೆಯಲಾಗಿದೆ.

ಯಾವುದೇ ಜನಪದ ಒಂದು ತತ್ವದ ಮೇಲೆ ಒಂದಾಗುತ್ತದೆ. ಆ ತತ್ವದ ಆಚರಣೆಯನ್ನು ಸಂಸ್ಕೃತಿಯನ್ನಾಗಿ ಮಾಡಿಕೊಳ್ಳುತ್ತದೆ. (ಆದರೆ ಯಾವುದೇ ಜನಪದ ಮತ್ತೊಂದು ಜನಪದಕ್ಕೆ ವಿರುದ್ಧವಾಗಿ ಹುಟ್ಟಿಕೊಳ್ಳುವುದಿಲ್ಲ. ಹಾಗೆ ಹುಟ್ಟಿಕೊಂಡಿದ್ದರೆ ಆ ಗುಂಪು ಅಥವ ಸಮೂಹವನ್ನು ಕಳ್ಳರ, ಖದೀಮರ ಅಥವ ದರೋಡೆಕೋರರ ಸಮೂಹ ಎಂದು ಕರೆಯಬಹುದು) ಒಂದು ಜನಪದ ತನ್ನನ್ನು ತಾನು ಗಾಢವಾಗಿ ಗೌರವಿಸಿಕೊಳ್ಳುವುದರ ಜೊತೆಗೆ ಇತರ ಜನಪದಗಳನ್ನು ಗೌರವಿಸುತ್ತದೆ. ಇಲ್ಲದಿದ್ದಲ್ಲಿ ಅದರ ಅನನ್ಯತೆ.

ಜನಪದ ಹುಟ್ಟುವುದು ಮತ್ತು ಬದುಕುವುದು ತನಗೆ ಲಭ್ಯವಿರುವ ಆರ್ಥಿಕ ಸಾಮಾಜಿಕ ಸೌಲಭ್ಯಗಳನ್ನು ಹೊಂದಿಸಿಕೊಳ್ಳಲು. ಉತ್ಪತ್ತಿಯೆ ಇದರ ಮುಖ್ಯ ಉದ್ದೇಶ. ಹಂಚಿಕೆ ಎಂಬುದು ಉತ್ಪತ್ತಿಯಲ್ಲಿ ತೊಡಗುವವರ ಶ್ರಮ, ನೈಪುಣ್ಯ ಮತ್ತು ನಿರ್ವಹಣೆಯ ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆ. ಸಾಂಸ್ಥಿಕ ಹಕ್ಕು ಮತ್ತು ಕರ್ತವ್ಯಗಳು ಕೂಡ ಇದೇ ತತ್ವಕ್ಕೆ ಬದ್ದವಾಗಿವೆ. ಆದರೆ ಆನಂತರದ ಐತಿಹಾಸಿಕ ಬೆಳವಣಿಗೆಯಲ್ಲಿ ನಿರ್ವಾಹಕರ ಯಜಮಾನರಾದುದು ಕಂಡು ಬರುತ್ತಿದೆ. ಶ್ರಮ ಮತ್ತು ನೈಪುಣ್ಯಗಳು ಆಕ್ರಮಣಕ್ಕೆ ಒಳಗಾದುದೇ ನಮ್ಮ ಈ ಹೊತ್ತಿನ ಬೃಹತ್ ಬಂಡವಾಳ ವ್ಯವಸ್ಥೆಯ ಅಸ್ತಿತ್ವಕ್ಕೆ ಕಾರಣ ಎನ್ನಬಹುದು. ಈ ಶೋಷಿತ ಅಂಗಗಳಲ್ಲಿ ನೈಸರ್ಗಿಕ ಸಂಪತ್ತು ಮತ್ತು ನೈಪುಣ್ಯಗಳೂ ಸೇರಿವೆ.

ಜನಪದಗಳಲ್ಲಿ ಆಧುನಿಕ ಜನಪದ ಎಂಬ ಸಾಂಸ್ಕೃತಿಕ ಸಮೂಹ ಇದೆಯೆ? ಆಧುನಿಕತೆ ಎಂಬ ಪರಿಕಲ್ಪನೆಯನ್ನು ಎರಡು ರೀತಿಯಲ್ಲಿ ನಿರ್ವಚಿಸಬಹುದು. ಒಂದು ಇಡೀ ಜಗತ್ತು ನೈಸರ್ಗಿಕ ಹಾಗೂ ಸಾಮಾಜಿಕ ಮಾರ್ಪಾಡಿಗೆ ಒಳಪಡುತ್ತಾ ಬರುವಾಗ, ಹತ್ತನೆಯ ಶತಮಾನಕ್ಕೆ ಹೋಲಿಸಿದರೆ ಹನ್ನೊಂದನೆಯ ಶತಮಾನ ನವೀನವಾಗಿರುತ್ತದೆ. ಪ್ರತಿಯೊಂದು ಶತಮಾನದ ಒಂದಲ್ಲ ಒಂದು ಕಡೆಯಿಂದ ತಂತ್ರಜ್ಞಾನ ಶೋಧದ ಕಾರಣದಿಂದ ಅಭಿವೃದ್ಧಿ ಹೊಂದುತ್ತದೆ. ಈ ತಂತ್ರಜ್ಞಾನ ಎಲ್ಲೇ ಹುಟ್ಟಿರಲಿ, ಹೇಗೇ ಹುಟ್ಟಿರಲಿ ಹೆಚ್ಚು ತಡೆ ಇಲ್ಲದೆ

ಜನಸಮೂಹಗಳ ಒಳಗೆ ಬರುತ್ತದೆ. ಈ ಹಿನ್ನೆಲೆಯಲ್ಲಿಯೆ ಒಂದು ಶತಮಾನ ಮತ್ತೊಂದು ಶತಮಾನಕ್ಕಿಂತ ಭಿನ್ನವಾಗಿರುತ್ತದೆ. ಇದನ್ನು ನಾವು ಸಹಜ ಅಭಿವೃದ್ಧಿ ಅಥವ ಸಹಜ ಆಧುನಿಕತೆ ಎಂದು ಕರೆಯುತ್ತೇವೆ. ಆ ಮಟ್ಟಿಗೆ ಜನಪದಗಳು ಆಧುನಿಕವಾಗುತ್ತವೆ.

ಹದಿನೆಂಟನೆಯ ಶತಮಾನದಲ್ಲಿ ಧುತ್ತನೆ ಅವತರಿಸಿದ ಆಧುನಿಕತೆಯ ನೆಲೆಯೆ ಬೇರೆ. ಇದು ಕೈಗಾರಿಕಾ ಉದ್ಯಮ ಆಧಾರಿತ ಆಧುನಿಕತೆ ಅಥವ ಅಭಿವೃದ್ಧಿ. ಸಾಕುಪ್ರಾಣಿಗಳಿಂದ ಹೊಸ ಘಟ್ಟಕ್ಕೆ ಬಂದ ಆದಿಮಾನವ ಕೃಷಿಕ್ರಾಂತಿಯಿಂದ ಬಹುದೊಡ್ಡ ಸಾಧನೆಯನ್ನು ಮಾಡಿದ. ಈ ಸಂದರ್ಭದಲ್ಲಿ ಹಳ್ಳಿಗಳೆಂಬ ಕೃಷಿ ಕೇಂದ್ರಗಳು ಹುಟ್ಟಿಕೊಂಡವು. ಇವುಗಳ ಉತ್ಪಾದನಾ ಉಳಿತಾಯ ಪ್ರಭುತ್ವದ ಹುಟ್ಟಿಗೆ ಕಾರಣವಾಯಿತು. ಕಾರಣವಾಗಿ ಹಳ್ಳಿಗಳಲ್ಲಿ ಪಟೇಲ ಮತ್ತು ಶಾನುಬಾಗರು ನೇಮಕಗೊಂಡರು. ಇವರು ಹಳ್ಳಿಯ ಉತ್ಪಾದನಾ ವ್ಯವಸ್ಥೆಯ ಮೇಲೆ ನಿಯಂತ್ರಣ ಇಟ್ಟುಕೊಂಡಿದ್ದರು. ಹೆಚ್ಚು ಉತ್ಪಾದನೆ ಇವರ ವೈಯಕ್ತಿಕ ಲಾಭ ಮತ್ತು ವರ್ಚಸ್ಸಿಗೆ ಬೆಂಬಲವಾಗುತ್ತಿತ್ತು. ಈ ಕೃಷಿ ಉದ್ಯಮದ ಸಂದರ್ಭದಲ್ಲಿ ಸಮಾಜದ ಬೇರೆ ಬೇರೆ ವರ್ಗ ಸಂಬಂಧಾತ್ಮಕವಾಗಿ ಉದ್ಯೋಗಗಳನ್ನು ಹೊಂದಿದ್ದರು. ಇಡೀ ಸಮಾಜ ಒಂದು ಸಂಪೂರ್ಣ ಆರ್ಥಿಕ ಸಾಮಾಜಿಕ ಸಂರಚನೆಗೆ ಒಳಪಟ್ಟಿತ್ತು; ಎರಡು ಅಪರಾಧಗಳನ್ನು ಹೊರತುಪಡಿಸಿ; ಒಂದು, ವೃತ್ತಿಯನ್ನು ಜಾತಿಯಾಗಿ ಮಾಡಿದ್ದು, ಎರಡು; ಗೌಡಿಕೆ ಮತ್ತು ಶಾನುಬೋಗಿಕೆ ನಿಯಂತ್ರಣ ಮೀರಿ ಬೆಳೆದದ್ದು.

**ಹದಿನೆಂಟನೆಯ ಶತಮಾನದ ಆಧುನಿಕತೆ ಸಂಬಂಧಗಳನ್ನೆ ನಾಶ ಮಾಡಿದ ಅಭಿವೃದ್ಧಿ ಸಿದ್ಧಾಂತ. ಗರಿಷ್ಟ ಲಾಭ ಇದರ ಉದ್ದೇಶ.** ಎಲ್ಲಿ ಸಂಬಂಧ ಸಡಿಲಗೊಳ್ಳುತ್ತವೊ ಅಥವ ಕಡಿತಗೊಳ್ಳುತ್ತವೊ ಅಲ್ಲಿ ಜನಪದಗಳು ಅಸ್ಥಿರವಾಗುತ್ತವೆ. ಸಂಬಂಧ ಎಂಬುದು ಜನಪದಗಳ ಒಳಗಿನ ಉತ್ಪತ್ತಿ ಮತ್ತು ಹಂಚಿಕೆಯ ವ್ಯವಸ್ಥೆಗೆ ಸಂಬಂಧಪಟ್ಟುದು. ಹೊಸ ಆಧುನಿಕತೆ ಹೆಚ್ಚು ಹೆಚ್ಚು ಕೂಲಿಗಳನ್ನು ಮತ್ತು ಬಳಕೆದಾರರನ್ನು ನಿರ್ಮಿಸಿತು. ಇಡೀ ಭೂಮಿ ತನ್ನ ಉದ್ಯಮದ ಸಂಪನ್ಮೂಲ ಸಾಮಗ್ರಿ ಎಂದು ಭಾವಿಸಿತು. ಅದು ನಮಗೆ ನವನವೀನ ಆಧುನಿಕವೆಂಬ ಸಾಮಗ್ರಿಗಳನ್ನು ಕೊಟ್ಟಿತು. ಆದರೆ ಸಾಮೂಹಿಕ ಸಂಘಟನೆಗೆ ಬೇಕಾದ ಹೊಸ ಸಂಬಂಧಗಳನ್ನು ಸೃಷ್ಟಿಸಲಿಲ್ಲ. ಅದು ಕೊಟ್ಟ ಭೌತಿಕ ಸೌಲಭ್ಯಗಳು ನಮ್ಮಲ್ಲಿ ಸಂತಸ ಕೊಟ್ಟಿದೆ ನಿಜ, ಸಾಂಪ್ರದಾಯಿಕ ಶೋಷಣೆಯನ್ನು ಒಡೆದಿವೆ ಎಂಬುದೂ ಸರಿ. ಆದರೆ ಮಾನವ ಸಂಬಂಧಗಳನ್ನೆ ಉಳಿಸಿಲ್ಲವಲ್ಲ ! ಜನಪದಗಳು ಕಳಚಿಕೊಳ್ಳುತ್ತಾ ಹೋದವು. ಜನಪದಗಳು ಕೂಡಲಿಲ್ಲವಾಗಿ ಜಾನಪದ ಹುಟ್ಟುವುದು ಕ್ಷೀಣವಾಗುತ್ತಾ ನಡೆಯಿತು. ಜನಪದಗಳು ಉತ್ಪತ್ತಿ ಸ್ಥಾನ ಮತ್ತು ನಿರ್ವಹಣೆಯಿಂದ ಹೊರದೂಡಲ್ಪಟ್ಟವು.

ಹೀಗೆ ಮಾಡಿ ಜನಪದಗಳು ಪುರಾತನ ಕಾಲದವು, ಹಳ್ಳಿಗಾಡಿನವು, ಹಿಂದುಳಿದವು,

ನಿರುತ್ಪಾದಕವಾದುವು ಎಂದು ಹೇಳಿದರೆ ಏನೆನ್ನಬೇಕು? ಬಹುತೇಕ ಸಾಂಪ್ರದಾಯಿಕ ವೃತ್ತಿ-ಉದ್ಯೋಗಗಳನ್ನು ನಾಶ ಮಾಡಿ ಕೆಲವೇ ಕಾರ್ಖಾನೆ ಉದ್ಯೋಗಗಳನ್ನು ಸೃಷ್ಟಿಸಿ ನಮಗೆ ಆಧುನಿಕತೆ ಮೋಸ ಮಾಡಿದೆ. ಅದರ ಬೆಡಗನ್ನು ನಾವು ತಿಳಿಯದೆ ಹೋಗಿದ್ದೇವೆ. ಭಾರತದಲ್ಲಿ ಸಾಂಪ್ರದಾಯಿಕ ವೃತ್ತಿಗಳು ಕೆಳಜಾತಿಯವರಿಗೆ ಮೀಸಲಾಗಿದ್ದುದು ನಿಜ. ಅದು ಅಪರಾಧ ಕೂಡ. ಜಗತ್ತಿನಾದ್ಯಂತ ಇಂಥ ಪರಿಸ್ಥಿತಿ ಇರಲಿಲ್ಲ. ಅಲ್ಲಿ ಪ್ರತಿ ವೃತ್ತಿ ಮತ್ತೊಂದು ವೃತ್ತಿಗೆ ದಾರಿ ಬಿಟ್ಟುಕೊಡುವ ಸುಗಮ ವ್ಯವಸ್ಥೆ ಇತ್ತು. ಸಹಜವಾದ ವಿಕಾಸಶೀಲ ಜಾಗತಿಕ ಆಧುನಿಕತೆ ಜನಪದಗಳನ್ನು ಮತ್ತು ಜಾನಪದವನ್ನು ಪುನರುಜ್ಜೀವಿಸಬಹುದೇ ಹೊರತು ನಾಶ ಮಾಡುವುದಿಲ್ಲ.

ಯೂರೋ ಕೇಂದ್ರದಲ್ಲಿ ಆಧುನಿಕ ಜನಪದಗಳಿವೆ. ಅವುಗಳ ಉದ್ದೇಶ ಜಗತ್ತಿನ ಇತರ ದೇಶಗಳ ಶೋಷಣೆ. ಅವರ ಜಾನಪದವೆಂದರೆ ಮಾರಾಟದ ತಂತ್ರಗಾರಿಕೆ, ಜಾಹೀರಾತು ಹಾಗೂ ಬಳಸು ಮತ್ತು ಬಿಸಾಡು  ಎಂಬ ಸಂಸ್ಕೃತಿ. ನಮಗೆ ಕೊಳ್ಳುವ ಶಕ್ತಿಯೂ ಇಲ್ಲ ಬಿಸಾಡಲು ವಸ್ತುಗಳು ಮೊದಲೇ ಇಲ್ಲ. ಯೂರೋ ಕೇಂದ್ರದ ಹೊರಗಿನ ಆಧುನಿಕ ಜನಪದಗಳೆಂದರೆ ಯೂರೋ  ತಂತ್ರಜ್ಞಾನದ ಮಾದರಿಗಳು ಮತ್ತು ವಸ್ತುಗಳನ್ನು ಪಡೆದಿರುವ ಮತ್ತು ಪಡೆಯುತ್ತಿರುವ ಜನಸಮೂಹಗಳು. ಇವರು ತಮ್ಮ ಮೂಲ ವೃತ್ತಿಯಲ್ಲಿ ಬದಲಾವಣೆ ಹೊಂದಿದ್ದಾರೆ. ಆದರೆ ಅವರ ನಂಬಿಕೆ, ನಡವಳಿಕೆ ಮತ್ತು ಧರ್ಮದಲ್ಲಿ ಅಲ್ಲ. ಆ ಮೂಲ ನಂಬಿಕೆಯ ಒಳಕ್ಕೆ 'ಆಧುನಿಕ' ತಂತ್ರಜ್ಞಾನ ಸಾಧನಗಳನ್ನು ಸೇರಿಸಿಕೊಳ್ಳುತ್ತಿದ್ದಾರೆ. ನಮ್ಮ ದೇಶದ ಜನ ಅಮೆರಿಕ, ಫ್ರಾನ್ಸ್‌ನಿಂದ ಹೊಸ ಯಂತ್ರಗಳನ್ನು ತಂದಾಗ ವಿಭೂತಿ ಹಚ್ಚಿ ನಾಮ ಹಾಕಿ ಮತ್ತು ದಾರವನ್ನು ಕಟ್ಟಿ ಸ್ಥಾಪಿಸಿಕೊಳ್ಳುತ್ತಿರುವಂತೆ.

'ಆಧುನಿಕ' ದೇಶಗಳ 'ಆಧುನಿಕ ಜನಪದ'ಗಳಲ್ಲಿ ಜಾನಪದ ಹುಟ್ಟುತ್ತಿದೆ. ಅದು ಭಯ, ಆತಂಕ, ಅಪರಾಧ, ಹುಸಿ ಪ್ರತಿಷ್ಠೆ, ಮಹಾಶೋಕಿ ಮತ್ತು ತಂತ್ರಗಾರಿಕೆಗೆ ಸಂಬಂಧ ಪಟ್ಟದ್ದಾಗಿದೆ. ನಮ್ಮಲ್ಲಿ ಆ 'ಆಧುನಿಕತೆ' ಜಾತಿಗಳ ಜೊತೆಗೆ ಸೇರಿ ಹೊಸ ತಮಾಷೆಗಳನ್ನು ಸೃಷ್ಟಿಸುತ್ತಿದೆ. ಉದಾ : ಸಾಫ್ಟ್‌ವೇರ್ ಎಂದರೆ ಜನಿವಾರ ಹಾರ್ಡ್‌ವೇರ್ ಎಂದರೆ ಶಿವದಾರ, ನೋವೇರ್ ಎಂದರೆ ಇವರ ಪರಿವಾರ. ಎಂದರೆ, ಸೇವಕರು, ವಿಶೇಷವಾಗಿ ನಮ್ಮ ಆಧುನಿಕ ಜನಪದ ಎಂದರೆ ನೌಕರ ಹಾಗೂ ವಿದ್ಯಾರ್ಥಿ ವರ್ಗ. ಇವರು ಕಛೇರಿ ಮತ್ತು ಕಾಲೇಜುಗಳಲ್ಲಿ ಹುಟ್ಟಿಸುವ ಜೋಕುಗಳು ಆಧುನಿಕ ಜಾನಪದ. ಸಂಜೆ ಐದೂವರೆ ಕಳೆದರೆ ಮತ್ತೆ ಅದೇ ಜಾತಿ ಕೊಟ್ಟಿಗೆಗೆ ಹೋಗುತ್ತಾರೆ. ಯೂರೋಕೇಂದ್ರಿತ ಈ 'ಆಧುನಿಕತೆ'ಗೆ ಸ್ಥಿರತೆ ಎಂಬುದೇ ಇಲ್ಲ. ಈ ಆಧುನಿಕತೆ ಕಾಲದ ಮತ್ತು ಸಂಬಂಧದ ಆಳತೆಯಲ್ಲಿ ಇಲ್ಲ. ಪ್ರತಿನಿತ್ಯ ಹುಟ್ಟುವ ಹೊಸ ಯಂತ್ರಜ್ಞಾನಕ್ಕೆ ಮತ್ತು  ಅದರ ಶೋಷಣೆಗೆ ಬದ್ಧವಾಗಿದೆ.

'ಜಾಗತಿಕ ಗ್ರಾಮ' ಎಂಬ ಇದೇ ಆಧುನಿಕ ಪ್ರಭುವಿನ ಘೋಷಣೆ ನಮ್ಮ ಕೆಲವರಲ್ಲಿ

ಆನಂದವನ್ನೂ ಮತ್ತೆ ಕೆಲವರಲ್ಲಿ ಆತಂಕವನ್ನೂ ಉಂಟು ಮಾಡಿದೆ. ಇಡೀ ಜಗತ್ತೇ ಒಂದು ಗ್ರಾಮವಾದರೆ ಪಕ್ಕದ ಸಾರಾಯಿ ಅಂಗಡಿಗೆ ಹೋಗಿ ಬಂದಂತೆ ಹಲವು ದೇಶಗಳನ್ನು ಅಡ್ಡಾಡಬಹುದು ಎಂದು ಕೆಲವರು ತಿಳಿದಿದ್ಧಾರೆ. ಆ ಗ್ರಾಮ ಯೂರೋ ಪ್ರಭುಗಳ ಸರಕುಗಳನ್ನು ತುಂಬುವ ಗುಜರಿ ಎಂದು ಅವರು ತಿಳಿಯಬೇಕು. ಶ್ರೀ ದೇವನೂರು ಮಾದೇವ ಒಂದು ಭಾಷಣದಲ್ಲಿ ಹೇಳಿದಂತೆ, ಹಕ್ಕಿಗಳಿರುವ ಜಾಗತೀಕರಣ; (ಬೇಕಾದಲ್ಲಿಗೆ ಹೋಗಿ ಮೀನು ತಿಂದು, ಮೊಟ್ಟೆ ಇಟ್ಟು, ಮರಿಮಾಡಿ ಬೆಳೆಸಿಕೊಂಡು ಮತ್ತೆ ತಮ್ಮ ಊರಿಗೆ ವಾಪಸ್ಸಾಗುವುದು) ಬರುವುದಾದರೆ ಖಂಡಿತ ಬರಲಿ, ಇನ್ನು ಕೆಲವರು ನಮ್ಮ ಗ್ರಾಮದ ಗೌಡನಿಗೆ ಬದಲಾಗಿ ಬುಷ್‌ಗೌಡನ ಜಾಗತಿಕ ಗ್ರಾಮ ನಮ್ಮಲ್ಲಿಗೂ ಬರುವುದಾದರೆ ನಮ್ಮ ತಾಯಿಗೆ ಗಂಡಂದಿರು ಎಷ್ಟಾಗಬಹುದು ಎಂದು ತಲ್ಲಣಗೊಳ್ಳುತ್ತಿದ್ದಾರೆ. ಹೆಚ್ಚು ಹೇಳದೆ ಈ ಜಾಗತಿಕ ಗ್ರಾಮವನ್ನು ನಮ್ಮ ಈ ಹೊತ್ತಿನ ಪ್ಲೇವಿನ್ ಲಾಟರಿಗೆ ಹೋಲಿಸಿ ಕೈ ಬಿಡಬಹುದು. ಇಲ್ಲಿ ಏನು ಹುಟ್ಟಬಹುದು ಎಂಬುದನ್ನು ನೀವೇ ಯೋಚಿಸಿ !

ತಮ್ಮ ಜನಪದಗಳನ್ನು ಸಮರ್ಥಿಸಿಕೊಂಡು ನಮ್ಮ ಜನಪದಗಳನ್ನು ನಿರಾಕರಿಸಿದ 'ನವ ಆಧುನಿಕ' ಪಾಶ್ಚಾತ್ಯ ಚಿಂತನೆಯಿಂದ ಪ್ರಭಾವಿತರಾಗಿರುವ ನಾವು ಇಲ್ಲಿಯವರೆಗೆ 'ಜನಪದ' ಬಹುಮುಖ್ಯವಾಗಿ ಉತ್ಪತ್ತಿ ಸ್ಥಾನ ಎಂಬ ನಿಜವನ್ನು ನಮ್ಮ ಮೆದುಳಿನಿಂದಲೆ ದೂರ ಇಟ್ಟಿದ್ದೇವೆ. ಆ ತಂತ್ರಜ್ಞಾನದ ಓಟದ ಅಳತೆಯ ಮೀಟರ್ ನಮ್ಮ ಮೆದುಳಿನ ಓಟದ ಗತಿಯನ್ನು ಸೊನ್ನೆಯಿಂದ ಮೇಲೇರದಂತೆ ಸೀಸ್ ಮಾಡಿದೆ. ನಮ್ಮ ಸ್ವಂತದೊಂದು ಚಿಂತನೆ ಮಾಡುವುದಾದಲ್ಲಿ ನಾವು ಮತ್ತು ನಮ್ಮ ಜನಪದಗಳು ನಮ್ಮ ದೇಶದ ಸಂದರ್ಭದಲ್ಲಿ ಸಮಕಾಲೀನವಾಗಿದೆ ಎಂದು ತಿಳಿಯಬೇಕು.

ಹೀಗೆ ಚಿಂತನೆ ಮಾಡುವ ಜಾನಪದ ವಿದ್ವಾಂಸರು ಜಾತಿಯ ಅನುಕೂಲವೂ ಇಲ್ಲದೆ ವೃತ್ತಿಯ ನೆಲೆಯೂ ಇಲ್ಲದೆ ಬಳಲುತ್ತಿರುವ ಕೋಟ್ಯಾಂತರ ಮಂದಿ ತಳವರ್ಗದ ದುಡಿಮೆಗಾರರ ಬಗ್ಗೆ  ಏನು ಹೇಳುತ್ತೀರಿ? ನಮಗೆ 'ಆಧುನಿಕತೆ' ಅನುಕೂಲ ಎಂದು ತಿಳಿದಿದ್ದೇವೆ ಎನ್ನಬಹುದು. ಜನಪದ ಪುನರುಜ್ಜೀವನ ಎಂದರೆ ಜಾತಿ ಮತ್ತು ಮೂಢ ನಂಬಿಕೆಗಳ ಪುನರುಜ್ಜೀವನ ಅಲ್ಲ. ನಮ್ಮ ತಳ ನೆಲೆಯಲ್ಲಿ ಇದ್ದ ತಂತ್ರಜ್ಞಾನವನ್ನು ಅಂದರೆ ಜನಪದರ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಹೆಚ್ಚಿನ ಜನರಿಗೆ ಉದ್ಯೋಗ ಮತ್ತು ನೆಲೆ ಒದಗಿಸುವುದು ಎಂದಾಗಿದೆ. ಆಗ ಮೂಲಜಾತಿ ಹಾಗೇ ಉಳಿಯಬಹುದಲ್ಲವೆ? ನಮ್ಮ ದೇಶದಲ್ಲಿ ಈಗ ಹಾಲಿ ವ್ಯವಸ್ಥಿತ ಜಾತಿಗಳು ಬ್ರಾಹ್ಮಣ ಮತ್ತು ವೈಶ್ಯ ಎರಡೆ. ಉಳಿದವು ತಮ್ಮದಲ್ಲದ ಜಾತಿಯನ್ನು ತಮ್ಮ ಮೇಲೆ ಭೂತಾವೇಶದಂತೆ ಆವಾಹನೆ ಮಾಡಿಕೊಂಡಿವೆ.ಈಗಿನ ನಮ್ಮ ಅನುಕೂಲಗಳು ಮತ್ತು ತಂತ್ರಜ್ಞಾನ ಜಾತಿಯ ಮೂಲಕವೇ ಬಟವಾಡೆ ಆಗುತ್ತಿರುವುದರಿಂದ ಜಾತಿಯಾಗುವುದಕ್ಕೆ ಪೈಪೋಟಿ ನಡೆಯುತ್ತಿದೆ. ಅದನ್ನು ತಪ್ಪಿಸುವ

ಕಾರಣಕ್ಕಾಗಿಯೆ ಜಾತಿ ನಿರ್ಮೂಲನೆಯ ಜೊತೆಗೆ ನಮ್ಮ ಜನಪದಗಳ ಮೂಲ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕಿದೆ.

**ಜಾನಪದ ಎಂದರೆ :** ಜನಪದವೊಂದು ಸಾಂಸ್ಕೃತಿಕವಾಗಿ ಉತ್ಪತ್ತಿ ಮಾಡುವ ಉತ್ಪನ್ನವೇ ಜಾನಪದ. ಜನಪದ ಒಂದು ಸಾಂಸ್ಕೃತಿಕ ಗುಂಪು ನಿಜ; ಆದರೆ ಅದು ಉತ್ಪತ್ತಿ ಮಾಡುವುದೆಲ್ಲ ಜಾನಪದವೇ ಆಗಬೇಕೆಂದಿಲ್ಲ. ಬೆಳೆಯುತ್ತಿರುವ ಜನಪದಗಳಲ್ಲಿ ಅಸಾಂಸ್ಕೃತಿಕ ಉತ್ಪಾದನೆಯೂ ಇರುತ್ತದೆ. ಅನೇಕ ಬೇರೆ ಬೇರೆ ಒತ್ತಡಗಳಿಗೆ ಒಳಗಾಗುವ ಜನಪದ ಜನಪ್ರಿಯವಾದುದನ್ನೂ, ಮಾರುಕಟ್ಟೆಯ ಸಾಹಿತ್ಯವನ್ನು ಸೃಷ್ಟಿ ಮಾಡುವುದುಂಟು. ತಾತ್ಕಾಲಿಕವಾಗಿ ಜನರು ಅದನ್ನು ಮೆಚ್ಚಲೂಬಹುದು. ಆದರೆ ಬಹಳ ಕಾಲ ಅಂಥ ಉತ್ಪಾದನೆ ಉಳಿಯುವುದಿಲ್ಲ. ಜನಪದ ಸಾಹಿತ್ಯದ ಹೆಸರಲ್ಲಿ ಬಾರಿ ಗಲೀಜು ಸಾಹಿತ್ಯ ಕ್ಯಾಸೆಟ್‌ಗಳ ರೂಪದಲ್ಲಿ ಬರುತ್ತಿದೆ. ಇಂಥ ಸಾಹಿತ್ಯವನ್ನು ಹಾಡಿ ಜನಪ್ರಿಯರಾಗಿರುವವರು ಉಂಟು. ಆದರೆ ಇದನ್ನು ಗೃಹಿಣಿಯರು ಮನೆ ಬಾಗಿಲಿನಿಂದ ಒಳಕ್ಕೆ ಬಿಡುವುದಿಲ್ಲ. ಈ ಸಾಹಿತ್ಯವನ್ನು ಹೆಚ್ಚಾಗಿ ಎಂಜಾಯ್ ಮಾಡುವವರು ಚಂಗಲು ಗಂಡಸರು.

ಜಾನಪದದ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ತಮ್ಮದೇ ಆದ ನಂಬಿಕೆ, ಆಚರಣೆ, ಸಾಹಿತ್ಯ ಮುಂತಾದುವನ್ನು ಸೃಷ್ಟಿ ಮಾಡಿ ಜನಪದದೊಳಕ್ಕೆ ಬಿಡುತ್ತಾರೆ. ಅವುಗಳನ್ನು ಜನಪದ ಸ್ವೀಕರಿಸಬಹುದು ಇಲ್ಲವೆ ತಿರಸ್ಕರಿಸಬಹುದು. ಒಬ್ಬ ವ್ಯಕ್ತಿಯೆ ಬರೆದ ಒಂದು ಹಾಡು ಜನಪದದೊಳಕ್ಕೆ ಬಂದು ಆ ಸಮುದಾಯದ ಐವತ್ತು ಶತಕ್ಕಿಂತ ಹೆಚ್ಚು ಜನ ಒಪ್ಪಿ ಉಳಿಸಿಕೊಂಡರೆ ಅದು ಜನಪದಗೀತೆ ಆಗುತ್ತದೆ. ಜನಪದ ನಂಬಿಕೆ ಮತ್ತು ಆಚರಣೆಗಳು ಸಮಾಜದ ಹಿರಿಯರಿಂದ ಸೃಷ್ಟಿಯಾಗಿ ಒಟ್ಟು ಜನರಿಗೆ ಒಪ್ಪಿಗೆಯಾಗುವುದುಂಟು. ನಮ್ಮ ಊರ ದೇವತೆ ನನ್ನ ಕನಸಿಗೆ ಬಂದು ಜಾತ್ರಿ ಆಗಬೇಕೆಂದು ಹೇಳಿದ್ದಾಳೆ ಎಂದು ಗಣ್ಯ ಹಿರಿಯ ಅಥವಾ ಊರ ಯಜಮಾನ ಹೇಳಿದರೆ ಅದು ನಡೆಯುತ್ತದೆ.

ಜಾನಪದ ಮತ್ತು ದೇಶಿ ಎಂಬ ಎರಡು ಪರಿಕಲ್ಪನೆಗಳ ಬಗ್ಗೆ ನಮ್ಮ ಕೆಲವು ಜಾನಪದ ತಜ್ಞರು ಮಾತನಾಡುತ್ತಿದ್ದಾರೆ. ನಮ್ಮ ನವೋದಯ ಸಾಹಿತಿಗಳಲ್ಲಿ ದೇಶ, ದೇಶೀಯತೆ ಮತ್ತು ದೇಸಿ ಎಂಬ ಪರಿಕಲ್ಪನೆಗಳು ಬಳಕೆಯಾಗಿವೆ. ಇವರಲ್ಲಿ ಭಾಷಾದೇಸಿ, ಸ್ವದೇಶಿ ಮತ್ತು ಸ್ವತಂತ್ರದೇಸಿಗಳೆಂಬ ಭಿನ್ನ ನೆಲೆಯ ಪರಿಕಲ್ಪನೆಗೆ ಸೇರಿದವರಿದ್ದಾರೆ. ಬಿ.ಎಂ.ಶ್ರೀ., ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದೇವುಡು ನರಸಿಂಹಶಾಸ್ತ್ರಿ ಈ ಮುಂತಾದವರು ಭಾಷಾ ದೇಸಿ ಬಗ್ಗೆ ಮಾತನಾಡುತ್ತ ಸಂಸ್ಕೃತಿ ದೇಸಿ ಕಡೆಗೆ ಚಲಿಸುತ್ತಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅಂಥವರು ಮಾತನಾಡುವ ದೇಸಿ ಭಾಷಾ ಸಾಹಿತ್ಯಕ್ಕಿಂತ ಆಚೆಗಿನ ಗ್ರಾಮ ಸ್ವರಾಜ್ಯಕ್ಕೆ ಸಂಬಂಧಿಸಿದುದಾಗಿದೆ. ಈ ಎಲ್ಲ ದೇಸಿ ಅಭಿವೃದ್ಧಿ ಚಿಂತನೆ ಭಾರತದ ಸನಾತನ ಸಂಸ್ಕೃತಿಯಿಂದ ಆಚೆಗೆ ಬರುವುದಿಲ್ಲ. ಹಾಲಿ

ಭಾರತದಲ್ಲಿರುವ ಧರ್ಮ, ಜಾತಿ, ಪಂಥಗಳಿಗೆ ಸಂಬಂಧಿಸಿದ ಸಂಸ್ಕೃತಿಯಲ್ಲಿ ಇರುವ ಮೂಲ ತತ್ವಗಳೆ ನಮ್ಮ ಅಭಿವೃದ್ದಿಗೆ ಮೂಲ ನೆಲೆಗಳು ಎಂದು ಇವರು ನಂಬಿಕೊಂಡಂತೆ ಇದೆ. ಈಗ ದೇಸಿ ಮತ್ತು ದೇಶೀಯತೆಯ ಬಗ್ಗೆ ಮಾತನಾಡುವ ಹಲವರು ದೇಶೀಯತೆಯ ಬೇರು ತಾವು ನೆಲೆ ನಿಂತಿರುವ ಧರ್ಮ, ಜಾತಿ ಅಥವ ಪಂಗಡದೊಳಗೆ ಇದೆ ಎಂದು ತಿಳಿದಂತಿದೆ. ಆದ್ದರಿಂದ ಇವರು ಜಾಗತೀಕರಣಕ್ಕೆ ಪ್ರತಿರೋಧವಾಗಿ ದೇಸಿಯನ್ನು ಗುರಾಣಿಯಂತೆ ಬಳಸಿಕೊಳ್ಳಲು ಬಯಸಿದಂತಿದೆ. ಆದರೆ ಇವರು ಬಳಸಲೇಬೇಕಾದ ಕತ್ತಿಗಳು ಜಾಗತಿಕ ಪ್ರಭುಗಳ ಕೈಯಲ್ಲೇ ಇವೆ.

ಈ ಧೋರಣೆಯಿಂದಾಗಿ ಕೆಳವರ್ಗದ ಜನಗಳು ದೇಸೀಯತೆಯ ಬಗ್ಗೆ ಭಯ ಮತ್ತು ಅನುಮಾನವನ್ನು ಉಳ್ಳವರಾಗಿದ್ದಾರೆ. ಮತ್ತೆ ಆ ಮೂಲಕ ಎಲ್ಲಿ ಸನಾತನತೆಯ ಪ್ರಾಥಮಿಕ ಪ್ರಭುಗಳಾದ ಪುರೋಹಿತ, ಶ್ಯಾನುಬೋಗ ಮತ್ತು ಪಟೇಲರುಗಳು ತಮ್ಮ ಜೀವನದ ಮೇಲೆ ಎಗರಿ ಬರುತ್ತಾರೊ ಎಂದು ಆತಂಕಗೊಂಡಿದ್ದಾರೆ. ಆದ ಕಾರಣ ಈ ಸನಾತನಿಗಳ ದೇಸಿಗಿಂತ ವಸ್ತುಗಳ ರೂಪದಲ್ಲಿ ಬರುತ್ತಿರುವ ಜಾಗತೀಕರಣವೆ ವಾಸಿ ಎನ್ನುತ್ತಿದ್ದಾರೆ. ಅಸ್ಪೃಶ್ಯತೆಯಲ್ಲಿ ನರಳಿದವರು ನಮಗೆ ಯಾವ ಕಾಲಕ್ಕೂ ಈ ದೇಶ ಧರ್ಮವನ್ನೂ, ದೇವರನ್ನೂ ಮತ್ತು ಪವಿತ್ರತೆಯನ್ನು ಕೊಡುವುದು ಸಾಧ್ಯವೇ ಇಲ್ಲ. ಆದ್ದರಿಂದ ಜಾಗತಿಕ ಪ್ರಭುವಿನ ಮೂಲಕ ಜಾತಿ, ಧರ್ಮ ಮತ್ತು ತಾರತಮ್ಯದ ಸ್ಪರ್ಶ ಇಲ್ಲದಿರುವ ವಸ್ತುಗಳೇ ಬರಲಿ ಎನ್ನುವವರೂ ಇದ್ದಾರೆ.

ನಾನೂ ಕೂಡ ೧೯೮೦ಕ್ಕೆ ಮೊದಲಿನಿಂದಲೂ ದೇಶೀಯತೆಯ ಬಗ್ಗೆ ಮಾತನಾಡುತ್ತಾ ಬಂದಿದ್ದೇನೆ. ಮಧುರೈನಲ್ಲಿ ನಡೆದ ಅಖಿಲ ಭಾರತ ಜಾನಪದ ವಿಚಾರ ಸಂಕಿರಣದಲ್ಲಿ 'ಹೆಣ್ಣು ಮತ್ತು ಬಾಂಬು' ಹಾಗೂ ಜನಪದ ಗಂಗೋತ್ರಿ ಪತ್ರಿಕೆಯಲ್ಲಿ ಬರೆದ, 'ಸಮಾಜವಾದಿ ದೃಷ್ಟಿಯಲ್ಲಿ ಜಾನಪದ' ಎಂಬ ಲೇಖನಗಳಲ್ಲಿ ನನ್ನ ದೇಶಿಯ ಪರಿಕಲ್ಪನೆಯ ದೃಷ್ಟಿಕೋನವನ್ನು ಹೇಳಿದ್ದೇನೆ. ಆಮೇಲಿನ ಜಾನಪದವನ್ನು ಕುರಿತ ನನ್ನ ಬಹುತೇಕ ಲೇಖನಗಳು ದೇಶೀಯತೆಯ ನೆಲೆಯ ಮೇಲೆಯೆ ನಿಂತಿವೆ. ನಾನು ದೇಶೀಯತೆ ಬಗ್ಗೆ ಮಾತನಾಡುವಾಗ ನಮ್ಮ ದೇಶದ ಎಲ್ಲ ಬಗೆಯ ಸನಾತನ ಪ್ರಭುತ್ವ ಮಾದರಿಗಳನ್ನು ತಿರಸ್ಕರಿಸಿದ್ದೇನೆ. ಪ್ರಭುತ್ವ ಅಸ್ತಿತ್ವದ ಹೊರಗಿನ ಎಲ್ಲ ಸ್ವತಂತ್ರ, ಸುಸ್ಥಿರ ಮತ್ತು ಉತ್ಪಾದಕ ಜ್ಞಾನ ಮಾದರಿಗಳನ್ನು ಸ್ವೀಕರಿಸಬೇಕು ಎನ್ನುತ್ತೇನೆ. ಪ್ರತಿಯೊಂದು ಜಾತಿ, ಧರ್ಮ ಮತ್ತು ಪಂಗಡದ ತಳದಲ್ಲಿ ಇರುವುದು ಜನಪದ ಸಂಸ್ಕೃತಿ ಮತ್ತು ಅದರ ಉತ್ಪನ್ನವಾದ ಜಾನಪದ. ಅಡಿಗೆ, ಉಡುಪು, ವೈದ್ಯ, ತಂತ್ರಜ್ಞಾನವೆಂಬ ಶುದ್ಧ ಜ್ಞಾನಗಳು ಧರ್ಮ ಮತ್ತು ಆಚರಣೆಗೆ ಬಳಕೆಯಾಗಬಹುದು. ಆದರೆ ಸ್ವತಃ ಅಡಿಗೆ, ಉಡುಪು, ವೈದ್ಯ, ತಂತ್ರಜ್ಞಾನವೇ ಜಾತಿಯೋ ಅಥವಾ ಒಂದು ಧರ್ಮವೋ ಆಗಿರುವುದಿಲ್ಲ. ಕೆಲವು ದೇಶಿಈ, ಜ್ಞಾನ ಪದ್ಧತಿಗಳು ಜಾತಿಗೆ, ಜಾತಿಯ ಭಾಷೆಗೆ ಅಂಟಿಕೊಂಡಿವೆ. ಅವನ್ನು ಯಾವಾಗ

ಬೇಕೆಂದರೆ ಆಗ ಜಾತಿಯಿಂದ ಬಿಡಿಸಿ ಹೊರಗೆ ತರಬಹುದಾದಷ್ಟು ಸ್ವತಂತ್ರವಾಗಿವೆ. ಉದಾಹರಣೆಗೆ ಆಯುರ್ವೇದ. ಈಗ ಅದು ಸಂಸ್ಕೃತ ಸಂಬಂಧಿ ಜ್ಞಾನದ ಜೊತೆಗೆ 'ಕೂಡಿಕೆ' ಮಾಡಿಸಿಕೊಂಡಿದೆ. ಆದ್ದರಿಂದಲೇ ಅದು ಸವೆಯುವ ಹಾದಿ ಹಿಡಿದಿದೆ. ಬಹುತೇಕ ಈ ಪದ್ಧತಿ ನಮ್ಮ ಜನಪದರು ಬಳಸುವ ವೈದ್ಯ ಪದ್ಧತಿಯೇ ಆಗಿದೆ. ಜನರ ಭಾಷೆಯ ಈ ಔಷಧ ವಿವರಣೆಯನ್ನು ಸಂಸ್ಕೃತದಲ್ಲಿ ದಾಖಲಿಸಿರುವುದೇ ಇದರ ವಿಶೇಷ. ಒಂದು ಜ್ಞಾನ ಪದ್ಧತಿ ಕೆಲವರ ಸಂಗ್ರಹ ಮಾತ್ರ ಆದರೆ ಅದು ಕ್ರಿಯಾಶೀಲ ಆಗುವುದಿಲ್ಲ ಎನ್ನುವುದಕ್ಕೆ ಆರ್ಯುವೇದ ಜ್ಞಾನವೇ ಸಾಕ್ಷಿ.

ನಮ್ಮ ದೇಶೀ ಜ್ಞಾನ ಮೊದಲಿನಿಂದಲೂ ಕೈವಶವಾಗಿದ್ದುದು ತಳ, ಕೆಳ ಹಾಗೂ ವ್ಯವಸಾಯದಲ್ಲಿ ತೊಡಗಿದ್ದ ಜನರಲ್ಲಿ. ಆದರೆ ಕೆಲ ಸ್ಥಳೀಯರು ಅದರ ಒಡೆಯರಾಗಿದ್ದರು. ಬ್ರಿಟಿಷರು ಬಂದ ಮೇಲೆ ಈ ಸ್ಥಳೀಯ ಒಡೆಯರನ್ನು ಕಿತ್ತುಹಾಕಿ ಅಥವ ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು ತಳನೆಲೆಯಲ್ಲಿ ಇದ್ದ ನಮ್ಮ ಜ್ಞಾನ-ತಂತ್ರಜ್ಞಾನ ಪದ್ದತಿಗಳ ಕತ್ತು ಹಿಚುಕಿಬಿಟ್ಟರು. ಅವರ ತಂತ್ರಜ್ಞಾನದ ವಸ್ತುಗಳಿಗೆ ನಮ್ಮ ದೇಶವನ್ನು ಮಾರುಕಟ್ಟೆ ಮಾಡಿಕೊಳ್ಳಲು ಈ ಕೆಲಸ ಮಾಡಿದರು. ಬ್ರಿಟಿಷರು ಅವರು ಆಳುತ್ತಿದ್ದ ದೇಶಗಳಲ್ಲಿ ಈ ಕೆಲಸ ಮಾಡಿದರೆ ಈಗಿನ ಜಾಗತಿಕ ಪ್ರಭುಗಳು ಇದೇ ಕೆಲಸವನ್ನು ಜಗತ್ತಿನ ಪ್ರಗತಿ ಹೊಂದುತ್ತಿರುವ ಮತ್ತು ಬಡ ದೇಶಗಳಲ್ಲಿ ಜಾಗತೀಕರಣದ ಹೆಸರಿನಲ್ಲಿ ಮಾಡ ಹೊರಟಿದ್ದಾರೆ. ಪ್ರಜ್ಞಾವಂತ ಜನ ಜಾಗತೀಕರಣವನ್ನು ವಿರೋಧಿಸುತ್ತಿದ್ದಾರೆ.

ನನ್ನ ದೃಷ್ಟಿಯ ದೇಶಿ ಎಂದರೆ, ಜಾತ್ಯಾತೀತವಾದ ನಮ್ಮ ಸಾಮಾಜಿಕ ಮತ್ತು ನೈಸರ್ಗಿಕ ಪಾರಂಪರಿಕ ಜ್ಞಾನ ಪದ್ದತಿಗಳನ್ನು ಸಮಕಾಲೀನ ಜಾಗತಿಕ ಅಭಿವೃದ್ಧಿ ಮಾದರಿಗಳನ್ನಾಗಿ ರೂಪಿಸುವುದು. ಆ ಮೂಲಕ ನಮ್ಮ ಅಭಿವೃದ್ದಿಯಲ್ಲಿ ಬಹು ಜನರು ದುಡಿಯುವ ಮತ್ತು ಉದ್ಯೋಗಿಗಳಾಗುವ ಅವಕಾಶಗಳನ್ನು ಕಲ್ಪಿಸುವುದು. ಈ ಕಾರಣಕ್ಕೆ ಜಾಗತಿಕ ಪ್ರಭುಗಳು ರೂಪಿಸಿರುವ ತಂತ್ರಜ್ಞಾನವನ್ನು ತಿರಸ್ಕರಿಸಬೇಕಿಲ್ಲ. ಆ ಜ್ಞಾನಕ್ಕೆ ನಮ್ಮ ದೇಶಿ ಜ್ಞಾನವನ್ನು ಪರ್ಯಾಯವಾಗಿ ಬೆಳೆಸಬೇಕು. ಇಲ್ಲವೆ ಸಮಸಂಸ್ಕೃತಿಯನ್ನಾಗಿ ರೂಪಿಸಬೇಕು. ನಮ್ಮ ಅಭಿವೃದ್ಧಿಗೆ ಹೊರಗಡೆಯ ಜ್ಞಾನದ ಬೆಳಕು ಬೀಳುತ್ತಿರಬೇಕು. ಆದರೆ ಆ ಬೆಳಕು ಜ್ವಾಲೆಯಾಗಿ ನಮ್ಮ ದೃಷ್ಟಿಯನ್ನು ಮಸಕುಗೊಳಿಸಬಾರದು. ಈಗಿನ ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ ನಮ್ಮ ಕಣ್ಣು ಮಸುಕಾಗಿವೆ, ನಮ್ಮ ಬುದ್ದಿ ಮರವೆಯಿಂದ ನಲುಗಿದೆ.

ಯಾಕೆ ಹೀಗಾಯಿತು? ಬ್ರಿಟಿಷರ ಆಗಮನದಿಂದ ತಮ್ಮ ಮೊದಲಿನ ಮಾನ್ಯತೆ ಕಳೆದು ಕೊಂಡಿದ್ದವರಿಗೆ ಬ್ರಿಟಿಷರನ್ನು ಬಿಡಿಸುವುದರಿಂದ ಹೊಸ ಸ್ಥಾನಮಾನ ಪಡೆಯುವ ಹುನ್ನಾರವಿತ್ತು. ಇತರ ಬಹುಸಂಖ್ಯಾತರು ನಮ್ಮ ಜಾತಿ ವ್ಯವಸ್ಥೆಯಿಂದ ಸತ್ತು ಬದುಕಿದ್ದರು.

ಬ್ರಿಟಿಷರ ಆಗಮನ ತಕ್ಕಮಟ್ಟಿಗಾದರೂ ದೇಶೀಯ ಶೋಷಕರಿಂದ ಇವರಿಗೆ ಬಿಡುಗಡೆ ಕೊಟ್ಟಿತು. ಬ್ರಿಟಿಷರ ಹೊಸ ತಂತ್ರಜ್ಞಾನ-ಸ್ಥಾನಮಾನ ಜಾತ್ಯಾತೀತವಾಗಿ ಎಲ್ಲರಿಗೂ ಹಂಚಿಕೆಯಾಗತೊಡಗಿದ್ದು ಇಲ್ಲಿಯ ಸಾಮಾನ್ಯ ಜನರಿಗೆ ಸ್ವರ್ಗವೇ ಎಟುಕಿದಂತಾಯಿತು. ಅಂದರೆ ನಮ್ಮವರೆ ಆದ ಬೇರೆ ಬೇರೆ ಜನರ ಬೇರೆ ಬೇರೆ ಇಂಥ ಅಪೇಕ್ಷೆಗಳಿಂದಾಗಿ ಬ್ರಿಟಿಷರು ಈ ದೇಶದಲ್ಲಿ ಶತಮಾನಗಳ ಕಾಲ ಉಳಿದಿದ್ದರು.

ಅದು ಬಿಡಿ, ಸ್ವಾತಂತ್ರ್ಯ ಬಂದ ಮೇಲೆ ಹಲವರು ಹಲವು ಬಗೆಯ ಹಕ್ಕುಗಳನ್ನು ಅನುಕೂಲಗಳನ್ನೂ ಪಡೆದರು. ಈಗ ಜಾಗತೀಕರಣ ಬಂದು ಸರ್ಕಾರಿ ಉದ್ಯೋಗಗಳನ್ನು ಕಳಚಿ ಹಾಕುತ್ತಿದೆ. ಸ್ವತಂತ್ರ ಪೈಪೋಟಿ ಬದುಕಿಗೆ ಆಹ್ವಾನ ನೀಡಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ. ನಿಮ್ಮ ರಕ್ಷಣೆ ಎಂದರೆ ನಿಮ್ಮ ಸಾಮರ್ಥ್ಯದ ಪ್ರಯೋಗ ಮತ್ತು ಅದರಿಂದ ಬರಬಹುದಾದ ಪ್ರತಿಫಲ ಎನ್ನಲಾಗುತ್ತಿದೆ. ಮೇಲುನೋಟಕ್ಕೆ ಇದು ಸರಿಯಾದ ತತ್ವ ಎನಿಸುತ್ತದೆ. ಇದು ಯಾವಾಗ ಸರಿ ಎಂದರೆ ಎಲ್ಲರೂ ಸಾಮಾಜಿಕ ಮತ್ತು ಆರ್ಥಿಕವಾಗಿ ಸಮಾಧಾನಕರವಾದ ಒಂದು ಸ್ಥಿತಿಯಲ್ಲಿ ಇದ್ದಾಗ. ತನ್ನ ದುಡಿಮೆಯನ್ನು ತೊಡಗಿಸಿಕೊಳ್ಳುವ ಮೂಲ ಸೌಕರ್ಯಗಳೆ ಇಲ್ಲದಿದ್ದಾಗ ಅವನು ಏನು ಮಾಡಬೇಕು. ಇದರಿಂದಾಗಿ ಜಾಗತೀಕರಣವೆಂಬುದು ಬಹುಜನರನ್ನು ಬೀದಿಯಲ್ಲಿ ನಿಲ್ಲಿಸಿ ಕೆಲವರನ್ನು ಮಹಡಿಯೊಳಗೆ ತೂಗುತ್ತದೆ.

ಆದ್ದರಿಂದಲೆ ನಾವೀಗ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮತ್ತು ಕುವೆಂಪು ಅವರನ್ನು ನಮ್ಮ ಹತ್ತಿರಕ್ಕೆ ತಂದುಕೊಳ್ಳಬೇಕಿದೆ. ನಮ್ಮ ದೇಸಿ ಚಿಂತನೆಯ ವಿವಿಧ ಆಯಾಮಗಳು ಈ ಚಿಂತಕರ ಅಭಿವ್ಯಕ್ತಿಯಲ್ಲಿ ಇವೆ. ಅವರವರು ಇರುವಲ್ಲಿಯೇ ಉದ್ಯೋಗ ಗೌರವ ಸೃಷ್ಟಿಸಿದ ಬಸವಣ್ಣ, ಭಾರತದ ಪುನರ್‌ಸೃಷ್ಟಿ ಸಾಧ್ಯತೆ ಇಲ್ಲಿನ ಎಲ್ಲ ತಳ-ಕೆಳ ವರ್ಗಗಳ ಭಾಗವಹಿಸುವಿಕೆ ಮಾತ್ರದಿಂದ ಸಾಧ್ಯ ಎಂದ ಲೋಹಿಯಾ, ಏನು ಇಲ್ಲದವರ ಕೈಗೆ ದುಡಿಯುವ ಸಲಕರಣೆ ಕೊಟ್ಟ ಅಂಬೇಡ್ಕರ್ ಮತ್ತು ಪ್ರತಿಯೊಂದು ಜನಸಮೂಹದೊಳಗಿಂದ ಸಾಂಸ್ಕೃತಿಕ ವ್ಯಕ್ತಿತ್ವದ ನಿರ್ಮಾಣದಿಂದ ಆ ಜನವರ್ಗದ ಆರ್ಥಿಕ - ಸಾಂಸ್ಕೃತಿಕ ಸಮಾನ ಅಭಿವೃದ್ಧಿ ಸಾಧ್ಯ ಎಂದ ಕುವೆಂಪು ನಮ್ಮೊಳಗೆ ಬರಬೇಕು.

ಇಷ್ಟೆಲ್ಲ ಕೇಳಿದಾಗ ನೀವು ಓದಿದ್ದ, ಕೇಳಿದ್ದ ಮತ್ತು ಭಾಗವಹಿಸಿದ್ದ ಜಾನಪದ ಪರಿಕಲ್ಪನೆ ಎಲ್ಲೊ ಹಾರಿ ಹೋಯಿತಲ್ಲ ಎನಿಸಿಬಿಡಬಹುದು. ಕೂತುಂಡು ಯೋಚಿಸುವವರ ಸ್ಥಿತಿಯೇ ಹೀಗೆ. ದುಡಿಮೆ ಮತ್ತು ಅಭಿವೃದ್ಧಿಯ ಜೊತೆಗೆ ಯೋಚಿಸುವವನಿಗೆ ಆಧುನಿಕವೆಂಬ ಯೂರೋಪಿನ ಜ್ಞಾನ ಕೆಲವರ ಅಭಿವೃದ್ಧಿ ಮಾಡುತ್ತದೆ, ಜಾನಪದ ಜ್ಞಾನ ಹಲವರ ಅಭಿವೃದ್ಧಿಯಾಗಿದೆ ಎಂಬುದು ಗೊತ್ತಾಗುತ್ತದೆ. ಇದು ಜಾನಪದ.

'ಜಾನಪದ ಗ್ರಹಿಕೆ; ಪರಿಕಲ್ಪನೆ' ಎಂಬ ಈ ಪುಸ್ತಕಕ್ಕೆ ಇಷ್ಟೊಂದು ಮಾತು ಬರೆದಿರುವುದು ಅಗತ್ಯವೆಂದೆ ತಿಳಿದುಕೊಂಡಿದ್ದೇನೆ. ಜನಪದ- ಜಾನಪದ ಅಧ್ಯಯನದ ಆರಂಭದ ಕಾಲದಲ್ಲಿ ಮಾಡಿದ ತಪ್ಪನ್ನು ಮರೆವೆಯನ್ನು ನಾವು ತಿದ್ದಿಕೊಳ್ಳಲೇಬೇಕಾಗಿದೆ. ನಮ್ಮನ್ನು ನಾವೇ ನಿರಾಕರಿಸಿಕೊಳ್ಳುವ ತತ್ವದಿಂದ ಹೊರಗೆ ನಿಂತು ಯೋಚಿಸುವುದಿದೆ. ಆದಕ್ಕೆಂದೆ ಇಷ್ಟೆಲ್ಲ ಪುರಾಣ ಹೇಳಿದ್ದೇನೆ. ಬೇಡವೆಂದರೂ ಬೇಕಾದುದಲ್ಲವೆ ಪುರಾಣ!

ಮತ್ತೊಂದು ಮುಖ್ಯ ಉದ್ದೇಶ ಉಂಟು. ನಮ್ಮ ಅನೇಕ ಹೊಸ ತಲೆಮಾರಿನ ಜನ ಜಾನಪದವನ್ನು ಓದುತ್ತಿದ್ದಾರೆ. ಅವರಿಗೆ ತಮ್ಮ ಕಡೆಯ ವಿದ್ವಾಂಸರು ಹೇಳಿದ ಜಾನಪದ ಕುರಿತ ನಿರ್ವಚನಗಳು ಸಿಗುತ್ತಿವೆ. ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಜಾನಪದ ಕುರಿತು ಅಧ್ಯಯನ ಮಾಡಿದ, ಆ ಕುರಿತು ಬರೆದ ಗಣ್ಯರಿದ್ದಾರೆ. ಇವರೆಲ್ಲ ಏನು ಹೇಳಿದ್ದಾರೆ ಎಂಬುದು ಕರ್ನಾಟಕದ ಯಾವ ಭಾಗದಲ್ಲಿ ಕೂತು ಓದಿದವರಿಗೂ ಗೊತ್ತಾಗಬೇಕಿದೆ. ಒಟ್ಟು ಜಾನಪದ ಕರ್ನಾಟಕ ನಮ್ಮ ಮುಂದೆ ನಿಲ್ಲುವಂತೆ ಯೋಜಿಸಲಾಗಿದೆ. ಕರ್ನಾಟಕದ ಜಾನಪದವನ್ನು ಆರಂಭ ಮಾಡಿದ ಹಿರಿಯರ ನಿರ್ವಚನಗಳನ್ನು. ಈ ಕ್ಷೇತ್ರದಲ್ಲಿ ನಿರಂತರ ಕೆಲಸ ಮಾಡುತ್ತಿರುವ ಜಾನಪದ ತಜ್ಞರ ಜಾನಪದ ಕುರಿತ ಚಿಂತನೆಯನ್ನು ಜಾನಪದ ಗ್ರಹಿಕೆ; ಪರಿಕಲ್ಪನೆ ಎಂಬ ಬೇರೊಂದು ಪುಸ್ತದಲ್ಲಿ ದಾಖಲಿಸಲಾಗಿದೆ. ಜನಪದ ಕಲಾವಿದರು ತಮ್ಮದೇ ಜೀವನ ಸಾಮಗ್ರಿಯ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ಅವರಿಗೆ ಮೂರು ಪ್ರಶ್ನೆಗಳನ್ನು ಕಳಿಸಿ ಉತ್ತರವನ್ನು ತರಿಸಿಕೊಂಡು ಈ ಕೃತಿಯಲ್ಲಿ ಜೋಡಿಸಲಾಗಿದೆ.

ಇದೊಂದು ಚಾರಿತ್ರಿಕ ಮಹತ್ವದ ದಾಖಲೆ ಎಂದುಕೊಂಡಿದ್ದೇನೆ. ನಾವೆಲ್ಲ ಜಾನಪದದ ಬಗ್ಗೆ ಏನು ಮಾತನಾಡುತ್ತಿದ್ದೇವೆ ಎಂಬುದು ನಮ್ಮೆದುರು ನಿಂತರೆ ನಮ್ಮ ಮುಂದಿನ ದಾರಿಯ ಬೆಳಕು ಕಾಣಬಹುದು ಅಂದುಕೊಂಡಿದ್ದೇನೆ. ಈ ಕೃತಿಗೆ ತಮ್ಮ ಅಭಿಪ್ರಾಯಗಳನ್ನು ಕಳಿಸಿಕೊಟ್ಟ ನಾಡಿನ ಎಲ್ಲ ಕಲಾ ಚಿಂತಕರಿಗೂ ಮತ್ತು ಈ ಕೃತಿ ಹೊರಬರಲು ಕಾರಣರಾದ ಎಲ್ಲರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಪ್ರೊ. ಹಿ.ಶಿ. ರಾಮಚಂದ್ರೇಗೌಡ
೨೫-೧೧-೨೦೦೩ ಅಧ್ಯಕ್ಷರು
ಕನ್ನಡ ಭವನ, ಬೆಂಗಳೂರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಜನಪದ ಕಲಾವಿದರುಗಳಿಗೆ ಕೇಳಿದ ಪ್ರಶ್ನೆಗಳು :

೧. ಜಾನಪದ ವಿದ್ವಾಂಸರೆಂಬುವವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಕೆಲಸದ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

೨. ಜಾನಪದ ಅಕಾಡೆಮಿ ಕಲಾವಿದರಿಗಾಗಿ ಏನೇನು ಮಾಡಬೇಕು ?

೩. ಈ ಜಾನಪದ ಕಲೆಯೆನ್ನುವುದು ಏನು ? ಇದರ ಗುಣ ಸ್ವಭಾವ ಏನು ?

## ಜಲ್ಲೆ ಸಿದ್ದಮ್ಮ, ಜನಪದ ವೈದ್ಯೆ

ಸದರಿ ವಿಷಯದ ಬಗ್ಗೆ ತಾವು ನನಗೆ ಪತ್ರದ ಮೂಲಕ ಕೆಲವು ಅನಿಸಿಕೆಗಳನ್ನು ಕೇಳಿದ್ದೀರಿ. ನಾನು ಅನಕ್ಷರಸ್ಥೆ, ನನ್ನ ಜಾನಪದ ಕಲೆಯ ಬಗ್ಗೆ ತಾವು ಅಭಿನಂದಿಸಿರುವುದು ತುಂಬಾ ಸಂತೋಷದ ವಿಷಯ. ಅಲ್ಲದೆ, ನನ್ನ ಜಾನಪದ ಕಲೆಯ ಅನುಭವವನ್ನು ನೀವು ಪುಸ್ತಕದ ರೂಪದಲ್ಲಿ ಪ್ರಕಟಿಸುತ್ತೇನೆ ಎಂದು ಹೇಳಿದ್ದೀರಿ. ಇದೂ ಸಹ ಸಂತೋಷದ ವಿಷಯವಾಗಿದೆ. ನನ್ನಲ್ಲಿರುವ ಎಲ್ಲಾ ಮಾಹಿತಿಯನ್ನು ತಮಗೆ ನೀಡಬೇಕೆಂದು ಆಸೆ. ಆದರೆ, ನನ್ನ ಅನುಭವದ ಜಾನಪದ ಕಲೆಯನ್ನು ಕ್ರಮಬದ್ಧವಾಗಿ ಬರೆಯುವಂತಹ ಜಾನಪದ ಸಂಶೋಧಕರ ಕೊರತೆಯಿರುವುದರಿಂದ ನನ್ನ ಅನುಭವವನ್ನು ಪ್ರಕಟಿಸಲಾಗುತ್ತಿಲ್ಲ.

ತಮ್ಮ ಪತ್ರದಲ್ಲಿ ಕೇಳಿರುವ ಪ್ರಶ್ನೆಗಳಿಗೆ ನನಗೆ ತಿಳಿದ ಮಟ್ಟಿಗೆ ಈ ಕೆಳಕಂಡ ರೀತಿಯಲ್ಲಿ ಉತ್ತರಿಸಲು ಪ್ರಯತ್ನಿಸಿದ್ದೇನೆ.

೧. ೧. ಜಾನಪದ ವಿದ್ವಾಂಸರು ಜಾನಪದ ಕ್ಷೇತ್ರದಲ್ಲಿ ಮಾಡುತ್ತಿರುವ ಕೆಲಸ ಕಾರ್ಯಗಳೆಲ್ಲ ಪ್ರಶಂಸನೀಯ.

೨. ಜಾನಪದ ವಿದ್ವಾಂಸರು ಸೋಲಿಗ ಸಂಸ್ಕೃತಿಯ ಬಗ್ಗೆ (ಕಲೆಯ ಬಗ್ಗೆ) ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಇದರಿಂದ ಸೋಲಿಗ ಸಂಸ್ಕೃತಿಯ ಪರಿಚಯ ನಾಡಿನ ಜನರಿಗೆ ತಿಳಿಯುವಂತೆ ಮಾಡಿದ್ದಾರೆ. ಇದೂ ಸಹ ಸಂತೋಷದ ವಿಷಯ.

೩. ಜಾನಪದ ವಿದ್ವಾಂಸರು ಇನ್ನೂ ಸಹ ಹೆಚ್ಚಿನ ಆಸಕ್ತಿ ವಹಿಸಿ, ಸೋಲಿಗ ಜನರಲ್ಲಿ ಅಡಗಿರುವ ಜಾನಪದ ಕಲೆಗಳಾದ ಹಾಡು, ಕುಣಿತ, ನಾಟಕ ಮೊದಲಾದ ಕ್ಷೇತ್ರಗಳ ಬಗ್ಗೆ ಹೊಸ ಹೊಸ ಅಧ್ಯಯನ ನಡೆಸಬೇಕು.

೪. ಇದುವರೆಗೂ ಸಾಕಷ್ಟು ಗ್ರಂಥಗಳು ಜಾನಪದ ಕ್ಷೇತ್ರದಲ್ಲಿ ಬಿಡುಗಡೆಯಾಗಿವೆ. ಆದರೆ, ನಮ್ಮ ಸೋಲಿಗರ ಜಾನಪದ ಕಲೆಯ ಬಗ್ಗೆ ಸರಿಯಾದ ಗ್ರಂಥಗಳು

ಪ್ರಕಟವಾಗಿಲ್ಲ. ತಮ್ಮಂತಹ ಜಾನಪದ ವಿದ್ವಾಂಸರು ಕಾಳಜಿವಹಿಸಿ ನಮ್ಮ ಜನರ ಸಂಸ್ಕೃತಿಯ ಬಗ್ಗೆ ಸಂಶೋಧನೆ ನಡೆಸಿ ಇನ್ನೂ ಹೆಚ್ಚು ನಮ್ಮ ಸಂಸ್ಕೃತಿಯನ್ನು ಪ್ರಚಾರಗೊಳಿಸಲು ಆಸಕ್ತಿ ವಹಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

೨. ೧. ಜಾನಪದ ಅಕಾಡೆಮಿ ಕಲಾವಿದರಿಗಾಗಿ ಆರ್ಥಿಕ ಸಹಾಯವನ್ನು ಮಾಡಬೇಕು. ಏಕೆಂದರೆ, ನಮ್ಮಂತಹ ಬಡ ಕಲಾವಿದರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದೇವೆ. ನಮ್ಮ ಕಲೆಯನ್ನು ಬೇರೆಕಡೆ ಹೋಗಿ ತೋರಿಸಲು ಸಹ ನಮಗೆ ತುಂಬಾ ಕಷ್ಟವಾಗಿದೆ. ಪ್ರಯಾಣ ಭತ್ಯೆಯನ್ನು ಭರಿಸಲೂ ಸಹ ನಮಗೆ ಆಗುವುದಿಲ್ಲ. ಇಂತಹ ಕಾಡಿನಲ್ಲಿ ಜೀವನ ಸಾಗಿಸುವುದೇ ಕಷ್ಟ. ಆದುದರಿಂದ ನಮಗೆ ಸರ್ಕಾರದ ವತಿಯಿಂದ ಅಥವಾ ಜಾನಪದ ಅಕಾಡೆಮಿಯ ವತಿಯಿಂದ ಆರ್ಥಿಕ ಸಹಾಯವನ್ನು ಮಾಡಿದರೆ, ಜಾನಪದ ಕಲಾವಿದರನ್ನು ಮುಂದೆ ತರಲು ಅನುಕೂಲವಾಗುತ್ತದೆ.

೨. ಪ್ರತೀ ಹಳ್ಳಿಯಲ್ಲಿರುವ ಕಲಾವಿದರನ್ನು ಗುರುತಿಸುವ ಕಾರ್ಯ ಇನ್ನೂ ಹೆಚ್ಚು ಹೆಚ್ಚು ಆಗಬೇಕು. ಆಗ ಜಾನಪದ ಕಲೆಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿದಂತಾಗುತ್ತದೆ.

೩. ಜಾನಪದ ಕಲಾವಿದರಿಗೆ ಸಂಬಂಧಿಸಿದ ಜಾನಪದ ವಸ್ತುಗಳನ್ನು ಸರ್ಕಾರದ ವತಿಯಿಂದ ಅಥವಾ ತಮ್ಮ ಅಕಾಡೆಮಿಯ ವತಿಯಿಂದ ನೀಡಬೇಕು.

೩. ೧. ಜಾನಪದ ಕಲೆ ಎಂದರೆ, ಆನುವಂಶೀಯವಾಗಿ ಬೆಳವಣಿಗೆಯನ್ನು ಹೊಂದಿರುವಂತಹ ಕಲೆ. ಹಳ್ಳಿಯ ಅನಕ್ಷರಸ್ಥ ಜನರ ಬಾಯಿಂದ ಬಾಯಿಗೆ ಬೆಳವಣಿಗೆಯನ್ನು ಹೊಂದಿರುವಂತಹ ಕಲೆ. ಜಾನಪದ ಕಲೆಯ ವ್ಯಾಪ್ತಿ ಬಹಳ ವಿಸ್ತಾರವಾದದ್ದು. ಇದಕ್ಕೆ ಮೇರೆಯೇ ಇಲ್ಲ. ಇಂತಹ ಕಲೆಯನ್ನು ಉಳಿಸಿ ಬೆಳೆಸುವಂತಹ ಕಾರ್ಯ ನಮ್ಮ ಯುವ ಜನರಲ್ಲಿ ಆಗಬೇಕು. ಹೆಚ್ಚು ಸಂಶೋಧನೆಗಳು ಆಗಬೇಕು.

❑

## ಸುಕ್ರಿ ಬೊಮ್ಮಗೌಡ, 'ಜಾನಪದ ಶ್ರೀ' ಪುರಸ್ಕೃತ ಬುಡಕಟ್ಟು ಕಲಾವಿದೆ

ನೀವು ಕಳುಹಿಸಿದ ಪತ್ರವು ಬಂದು ತಲುಪಿತು. ನೀವು ಅಪೇಕ್ಷಿಸಿದಂತೆ ನಿಮ್ಮ ಮೂರು ಪ್ರಶ್ನೆಗಳ ಅನಿಸಿಕೆಯನ್ನು ನನಗೆ ತಿಳಿದ ಮಟ್ಟಿಗೆ ನಿಮ್ಮಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

೧. ಜಾನಪದ ವಿದ್ವಾಂಸರಾದವರು ಕ್ಷೇತ್ರದ ಬಗ್ಗೆ ಅತೀ ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ಪ್ರತಿಯೊಂದು ಕ್ಷೇತ್ರದಲ್ಲಿ ಪರಿಣಿತರಾದ ಕಲಾವಿದರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸಿ ಕಾರ್ಯಕ್ರಮವನ್ನು ರೂಪಿಸಲು ಅನುವು ಮಾಡಿಕೊಡಬೇಕು. ಜಾನಪದ ವಿದ್ವಾಂಸರಾದವರು ಆ ಕ್ಷೇತ್ರಕ್ಕೆ ಒಳ್ಳೆಯ ಕೆಲಸವನ್ನು ಮಾಡಿಕೊಡುತ್ತಾರೆ. ಪ್ರತಿಯೊಂದು ಕಾರ್ಯವು ಅಲ್ಲಿನ ಜನರ ಸಹಕಾರದಿಂದ, ಯುವಕ ಮಂಡಳ, ಟ್ರಸ್ಟ್ ಮುಂತಾದ ಅನೇಕ ಸಹಕಾರಿ ಸಂಘದ ನೆರವಿನಿಂದ ಕಲಾವಿದರನ್ನು ಗುರುತಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಅವರನ್ನು ಒಬ್ಬ ಒಳ್ಳೆಯ ನಾಗರೀಕರ ಜೊತೆಗೆ ಕಲಾವಿದ ಎನ್ನುವ ಪಟ್ಟವನ್ನು ಪ್ರಜ್ಞಾವಂತರ ಮಟ್ಟಕ್ಕೆ ತರುವ ಕಾರ್ಯವನ್ನು ಕಡ್ಡಾಯವಾಗಿ ಮಾಡಲೇಬೇಕು.

ಜಾನಪದ ವಿದ್ವಾಂಸರಾದವರು ತನ್ನ ವೈಯಕ್ತಿಕ ಕಾರ್ಯವನ್ನು ಮಾಡದೆ ಕಲಾವಿದರ ಸಮಸ್ಯೆ, ನಿರಾಸಕ್ತಿ, ಆಗುಹೋಗುಗಳ ಬಗ್ಗೆ ಸ್ಪಂದಿಸಿ ಅವರನ್ನು ಉತ್ತಮ ಕಲಾವಿದರನ್ನಾಗಿ ಮಾಡುವ ಜವಾಬ್ದಾರಿ ಪ್ರತಿಯೊಬ್ಬ ಜಾನಪದ ವಿದ್ವಾಂಸರ ಆದ್ಯ ಕರ್ತವ್ಯವಾಗಿರುತ್ತದೆ.

೨. ಜಾನಪದ ಅಕಾಡೆಮಿ ಕಲಾವಿದರಾಗಿ ಜನರ ಮಧ್ಯೆ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಬೇಕು. ಅಕಾಡೆಮಿ ಕಲಾವಿದರು ಹಳ್ಳಿ ಹಳ್ಳಿಗೂ ಸುತ್ತಿ ಅವರಲ್ಲಿ ಕಲಾವಿದರನ್ನು ಗುರುತಿಸಿ ಅವರಿಗೆ ಸರಿಯಾದ ಮಾಹಿತಿಯನ್ನು ನೀಡಿ ಅವರನ್ನು ಒಳ್ಳೆಯ ಕಲಾವಿದರನ್ನಾಗಿ ಪರಿವರ್ತಿಸಿ ಅವರಿಗೆ ಸರಕಾರದಿಂದ ಸಿಗುವ ಧನ-ಸಹಾಯ, ಮಾಸಾಶನ ಮುಂತಾದ ಸೌಲಭ್ಯವನ್ನು ನೀಡಲು ಪ್ರಯತ್ನಿಸಬೇಕು.

ನಾಗರಿಕರ ಸಲುವಾಗಿ ಒಳ್ಳೆಯ ಕಾರ್ಯಕ್ರಮವನ್ನು ರೂಪಿಸಿ ಸಾರ್ವಜನಿಕರ ಮುಂದೆ ಅವರನ್ನು ಕಲಾವಿದರ ಪಟ್ಟಿಯಲ್ಲಿ ಸೇರ್ಪಡಿಸಿ ಅವರಿಂದ ಕಾರ್ಯಕ್ರಮವನ್ನು ರೂಪಿಸಬೇಕು. ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸಿ ಅವರ ಕುಟುಂಬಕ್ಕೆ ಆರ್ಥಿಕ ನೆರವನ್ನು ನೀಡಬೇಕು. ಕಲಾವಿದರಿಗೆ ಯಾವ ಕುಂದು-ಕೊರತೆಯನ್ನು ನೀಡದೆ ಅವರಿಗೆ ಅದರ ಮುಖಾಂತರ ಜೀವನಕ್ಕೆ ಒಂದು ನಾಂದಿಯಾಗಿ ಅದರ ಪ್ರಯೋಜನ ಜೀವನಕ್ಕೆ ಭದ್ರ-ಬುನಾದಿಯಾಗಿರಬೇಕು. ಜಾನಪದ ಕಲಾವಿದರಾಗಿ ಉಳಿದ ಕಲಾವಿದರ ಸಮಸ್ಯೆಯನ್ನು ಬಗೆಹರಿಸಿದಲ್ಲಿ ಕಲಾವಿದರಿಗೆ ಒಳ್ಳೆಯ ಮಾರ್ಗದಶನವಾಗುತ್ತದೆ.

೩. ಈ ಜಾನಪದ ಇದು ಜನಪದ ಕಲೆ, ಜನರು ಹಾಡಿದ ಪದವೇ ಜನಪದ. ಕಲೆಯಲ್ಲಿ ಪರಿಣತಿಯನ್ನು ಪಡೆದ ಕಲಾವಿದರನ್ನು ಗುರುತಿಸಿ ಅವರಿಗೆ ಕಲೆಯ ಸಂಪೂರ್ಣ ಮಾಹಿತಿಯನ್ನು ನೀಡಿ ಕಲೆಗೆ ಪ್ರೋತ್ಸಾಹವನ್ನು ನೀಡುವುದು. ಈ ಜಾನಪದ ಜನರ ಸಹಕಾರ, ಬೆಂಬಲದಿಂದ ಜನಪದ ಕಲೆಯಾಗಿ ಮಾರ್ಪಟ್ಟು ಜನರಿಗೆ ಮಾದರಿಯಾಗಿ ಅವರ ಕುಂದು-ಕೊರತೆಯನ್ನು ಹೋಗಲಾಡಿಸುವುದು. ಜನರಿಗಾಗಿ ಮಾರ್ಪಟ್ಟ ಈ ಜನಪದ ಕಲೆಯನ್ನು ಪ್ರತಿಯೊಬ್ಬ ನಾಗರಿಕರಿಗಾಗಿ ಸಹಾಯವನ್ನು ನೀಡುವುದು. ಅವರಲ್ಲಿರುವ ಒಳ್ಳೆಯ ಪ್ರತಿಭೆಯನ್ನು ಎತ್ತಿ ಹಿಡಿದು ಅವರಿಗೆ ಅದರ ಪ್ರಯೋಜನವನ್ನು ಪಡೆವ ರೀತಿಯಲ್ಲಿ ಸಹಾಯವನ್ನು ಮಾಡುವುದು. ಸಾರ್ವಜನಿಕರ ಸಮ್ಮುಖದಲ್ಲಿ ಕಲಾವಿದರ ಪ್ರಶಂಸೆಯನ್ನು ಎತ್ತಿ ಹಿಡಿದು ಅವರಿಗೆ ಒಳ್ಳೆಯ ಗೌರವ ಭಾವನೆ ಮೂಡುವ ರೀತಿಯಲ್ಲಿ ಸಹಾಯಹಸ್ತವನ್ನು ಮಾಡುವುದು. ಈ ರೀತಿಯಾಗಿ ಕಲಾವಿದರನ್ನು ಗುರುತಿಸಿ ಅವರವರ ಯೋಗ್ಯತೆಯನ್ನು ಗುರುತಿಸುವುದು. ಜಾನಪದ ಕ್ಷೇತ್ರದಲ್ಲಿ ಜಾನಪದ ಕಲೆಯು ಒಂದು ಪ್ರಮುಖ ಅಂಗ.

## ಹಿರಿಯಡಕ ಗೋಪಾಲರಾವ್

'ಜಾನಪದ ಶ್ರೀ' ಪುರಸ್ಕೃತ ಹಿರಿಯ ಯಕ್ಷಗಾನ ಕಲಾವಿದರು

---

ಬ್ರಿಟಿಷರ ಕಾಲದಲ್ಲಿ ಸರಕಾರ ಯಾವ ಕಲೆಗಳಿಗೂ ಸಹಕಾರ ನೀಡುತ್ತಿರಲಿಲ್ಲ. ಆ ಕಾಲದಲ್ಲಿ ಮೈಸೂರು ಅರಮನೆಯ ಅರಸರು ಕಲಾವಿದರಿಗೆ ಚಿನ್ನದ ಪದಕ ನೀಡಿ ಶಾಲು ಹೊದಿಸಿ ಗೌರವಿಸುವ ಪದ್ಧತಿ ಇತ್ತು.

ಸುಮಾರು ಈ ಶತಮಾನದ ಆದಿಯಲ್ಲಿ, ಹೊರದೇಶದಿಂದ ಬಂದ ಮಿಶನರಿಗಳು ಕೋಟಿ ಚೆನ್ನಯ ಪಾಡ್ದನಗಳನ್ನು ಸಂಗ್ರಹಿಸಿ ಬಾಷೆಲ್ ಮಿಶನ್ ಮುದ್ರಣಾಲಯದಲ್ಲಿ ಮುದ್ರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಸ್ವಾತಂತ್ರ್ಯ ಸಿಕ್ಕಿದ ಮೇಲೆ ನಮ್ಮ ಕರ್ನಾಟಕದಲ್ಲಿ ಇರುವ ಜಾನಪದ ವಿದ್ವಾಂಸರು ಕಲಾವಿದರನ್ನು ಗುರುತಿಸಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಪ್ರಶಸ್ತಿ ಪತ್ರವನ್ನು ನೀಡಿ ಹಣವನ್ನು ಕೊಟ್ಟು ಗೌರವಿಸತೊಡಗಿದರು. ಅಕಾಡೆಮಿಯು ಕೆಲವು ಸಂಸ್ಥೆಗಳೊಂದಿಗೆ ಬೆರೆತು ಕಮ್ಮಟಗಳನ್ನು ಮಾಡಿ ಹಳೆಯ ಹಾಡುಗಳನು ದಾಖಲಾತಿ ಮಾಡಿ ಸಂಗ್ರಹಿಸಿತು. ಇಂತಹ ಕೆಲಸ ಎಂ.ಜಿ.ಎಂ. ಕಾಲೇಜಿನ ಆರ್.ಆರ್.ಸಿ. ಸಂಸ್ಥೆ ದಿ.ಕು.ಶಿ. ಹರಿದಾಸ ಭಟ್ಟರ ಕಾಲದಿಂದಲೂ ಮಾಡುತ್ತಾ ಬಂದಿದೆ. ಈಗಲೂ ಹೆರೆಂಜೆ ಕೃಷ್ಣಭಟ್ಟರು ಈ ಕೆಲಸವನ್ನು ಮುಂದುವರಿಸುತ್ತಾ ಇದ್ದಾರೆ. ಇಲ್ಲಿ ಜಾನಪದ ಭಂಡಾರವೇ ದಾಖಲಾತಿಯಾಗಿ ಇದೆ. ಡಾ|| ಶಿವರಾಮ ಕಾರಂತರು ಸುಮಾರು ೧೯೫೮ರ ಹಾಗೆ ಯಕ್ಷಗಾನ ಬಯಲಾಟ ಪುಸ್ತಕ ಬರೆದುದರಿಂದ ಸ್ವೀಡನ್ ಸರಕಾರ ಶಿವರಾಮ ಕಾರಂತರಿಗೆ ಡಾಕ್ಟರೇಟ್ ಪದವಿ ಕೊಟ್ಟು ಗೌರವಿಸಿತು. ಆಮೇಲೆ ೧೯೬೮ರಲ್ಲಿ ಪ್ರೊಫೆಸರ್ ಪೀಟರ್ ಜೆ. ಕ್ಲಾಸ್ ಅಮೆರಿಕದಿಂದ ನಮ್ಮ ಜಿಲ್ಲೆಗೆ ಬಂದು ಮಾನವಶಾಸ್ತ್ರಕ್ಕೆ ಸಂಬಂಧಪಟ್ಟ ಜಾನಪದ ಆರಾಧನ ಪದ್ಧತಿ ಸಂಗ್ರಹಿಸಿ ಪ್ರಬಂಧ ಬರೆದು ಅಮೆರಿಕದ ಡ್ಯೂಕ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ ಡಾಕ್ಟರೇಟ್ ಪದವಿ ಪಡೆದರು. ಇನ್ನೊಬ್ಬ ಮಹಿಳೆ ಮಾರ್ಥಾಆಷ್ಟನ್ ಅಮೆರಿಕದಿಂದ ೧೯೭೦ ರಲ್ಲಿ ಬಂದು ಡಾ|| ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಕರಾವಳಿಯ ಯಕ್ಷಗಾನ ಸಂಶೋಧನೆ ನಡೆಸಿ ಮಿಚಿಗನ್ ವಿಶ್ವವಿದ್ಯಾಲಯಕ್ಕೆ ಪ್ರಬಂಧ ಒಪ್ಪಿಸಿ ಡಾಕ್ಟರೇಟ್

ಪದವಿ ಗಳಿಸಿದಳು. ೧೯೭೭ರಲ್ಲಿ ನನ್ನನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗಿ ಅಮೆರಿಕದ ವಿಶ್ವವಿದ್ಯಾಲಯ ಕನ್ನಡ ಸಂಘ ನ್ಯೂಯಾರ್ಕ್, ಅಟ್ಲಾಂಟ, ಜಾರ್ಜಿಯ ಮೊದಲಾದ ಹದಿನಾಲ್ಕು ಕಡೆ ಪ್ರಾತ್ಯಕ್ಷಿಕೆ ನೀಡಿ ಪ್ರಚಾರ ಮಾಡಿದಳು. ಇದೇ ವಿದೇಶಕ್ಕೆ ಗುರುತಿಸಿಕೊಟ್ಟ ಮೊತ್ತ ಮೊದಲ ಯಕ್ಷಗಾನ ಪ್ರಾತ್ಯಕ್ಷಿಕೆ. ಹೀಗೆ ಯಕ್ಷಗಾನ ಕಲೆಗೆ ಪುರಸ್ಕಾರ ನೀಡಿದ ದೆಹಲಿಯ ಕಮಲಾದೇವಿ ಚಟ್ಟೋಪಾಧ್ಯಾಯ, ಸುಭದ್ರಾ ಜೋಶಿ, ಅಲ್ಕಾಜಿ, ಸುರೇಶ ಅವಸ್ತೆ, ಮೋಹನ್ ಖೇರ್, ಮತ್ತು ಕರ್ನಾಟಕದ ಜಾನಪದ ವಿದ್ವಾಂಸರು, ನಾಗೇಗೌಡ, ಕರೀಂಖಾನ್, ಜೀಶಂಪ, ಲಕ್ಕಪ್ಪಗೌಡ, ಕಾಳೇಗೌಡ ನಾಗವಾರ, ಬೋರಲಿಂಗಯ್ಯ, ಬಸವರಾಜ ಮಲಸೆಟ್ಟಿ, ಈಗಿನ ಅಧ್ಯಕ್ಷರಾದ ರಾಮಚಂದ್ರೇಗೌಡರು ಇವರೆಲ್ಲಾ ನಮ್ಮ ಜಾನಪದ ಕಲೆಯಾದ ಯಕ್ಷಗಾನ ಕಲೆಯ ಬೆಳಕನ್ನು ಪರಿಚಯಿಸಿದ ವಿದ್ವಾಂಸರು.

ನಮ್ಮ ಕರ್ನಾಟಕ ರಾಜ್ಯದಲ್ಲಿ ಹಳ್ಳಿಗಳಲ್ಲಿ ಕರಾವಳಿಯಲ್ಲಿ ಅನೇಕ ರೀತಿಯ ಜಾನಪದ ಕಲೆಗಳು ಅಡಗಿಕೊಂಡಿವೆ. ಇದನ್ನ ಅಕಾಡೆಮಿಯು ಜಿಲ್ಲೆಯಲ್ಲಿ ಆರಿಸಿಕೊಂಡ ಸದಸ್ಯರಿಂದ ಹುಡುಕಿಸಿ ಕ್ಷೇತ್ರಕಾರ್ಯಗಳನ್ನು ಮಾಡಿದಾಗ ಇನ್ನಷ್ಟು ಸಂಗ್ರಹಿಸಬಹುದು.

ಇದೇ ೨೦೦೩. ನೇ ಮಾರ್ಚ್ ೭, ೮, ೯ ರಂದು ಉಡುಪಿಯಲ್ಲಿ ನಡೆದ ಜಾನಪದ ಗಾಳಿವಾದ್ಯ ಮತ್ತು ಚರ್ಮವಾದ್ಯಗಳ ಮೇಳ ಚೆನ್ನಾಗಿ ದಾಖಲಾತಿಯಾದದ್ದು ಬಹಳ ದೊಡ್ಡ ಸಂಗ್ರಹ ಆಯಿತು. ಆದರೆ ಇನ್ನೂ ಕೆಲವು ವಾದ್ಯಗಳು ಮರೆಯಲ್ಲಿ ಇರಬಹುದು. ಕಾರಣ ಆರಾಧನಾ ಪದ್ಧತಿಯಿಂದ ಹೊರಗೆ ಬಂದು ಪ್ರದರ್ಶನ, ಸಾಹಿತ್ಯ ಬಹಿರಂಗಗೊಳಿಸಲು ಹಿಂದೆ ಸರಿಯುವುದು ಇದೆ. ಉದಾ. ನಾಗಮಂಡಲದ ವೈದ್ಯರು ಮಾನವಜೀವಿಯ ಆರಾಧನ ಪದ್ಧತಿಯಲ್ಲಿ ಬಂದಂತಹ ರೂಢಿಯ ನಡವಳಿಕೆ ಪ್ರಕೃತಿಯ ಪೂಜೆ, ದೇವರ ನಂಬಿಕೆಯ ಮೂಲಕ ಮೌಖಿಕವಾಗಿ ಬಂದ ಆಚರಣೆಗಳು, ಹಬ್ಬ ಹರಿದಿನಗಳಲ್ಲಿ ಋತುಮಾನಗಳಿಗೆ ಹೊಂದಿಕೊಂಡು ಆಚರಿಸುವಂತಹ, ಆರೋಗ್ಯಕ್ಕೆ ಸಂಬಂಧಿಸಿದಂತಹ ಆಹಾರ. ಏಕಾದಶಿ ಉಪವಾಸ, ಶಾಖವ್ರತ ದಧಿವ್ರತ ಕಾಲದಲ್ಲಿ ವರ್ಜಿಸುವ ಆಹಾರ ವ್ಯವಹಾರಗಳು ಇಂತಹ ಪದ್ಧತಿ ಪ್ರಾದೇಶಿಕವಾಗಿದೆ ಅನ್ನಬಹುದು.

ಹಾಗೆಯೇ ನೃತ್ಯ ಪ್ರಕಾರಗಳು, ಹಾಡುಗಳು, ಪ್ರಾದೇಶಿಕ ಭಾಷೆಯಿಂದ, ರೂಢಿಯಿಂದ ಬೇರೆ ಬೇರೆ ರೀತಿಯಿಂದ ಬದಲಾಗಲು ಕಾರಣವಿರಬಹುದು. ಜಾತಿ ಮತಗಳಿಗೆ ಅನುಸರಿಸಿ ಇರುವಂತಹ ಜಾನಪದವು ಬಹಳ ವಿಸ್ತಾರವಾದುದು. ಹಲವು ವಿಷಯಗಳನ್ನು ಒಳಗೊಂಡಿರುವಂತಹದು. ಇಂತಹ ಎಲೆ ಮರೆಯ ಕಾಯಿಯಂತೆ ಉಳಕೊಂಡ ಅನೇಕ ಕಲೆ ಆಚರಣೆಗಳ ಪರಿಚಯ, ಪ್ರೋತ್ಸಾಹ ಮತ್ತು ಅಧ್ಯಯನ ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿ.

❐

**ಎಂ. ಆರ್. ಬಸಪ್ಪ,** 'ಜಾನಪದ ಶ್ರೀ' ಪುರಸ್ಕೃತ ವೀರಗಾಸೆ ಕಲಾವಿದರು,

೧. ಜಾನಪದ ಎಂಬುವುದು ಇದು ಹಿಂದಿನಿಂದ ಬಂದ ಒಂದು ಸಂಸ್ಥೆಯಾಗಿ ಬೆಳೆದು ಬಂದಿರುವುದು. ಈಗ ಇದು ಆಧುನಿಕ ಪ್ರಪಂಚದಲ್ಲಿ ಟಿ.ವಿ. ಮಾಧ್ಯಮಗಳು ಬಂದ ಮೇಲೆ ಈ ಕಲೆಗೆ ಪ್ರೋತ್ಸಾಹ ಆಸಕ್ತಿ ಕುಂದುತ್ತಾ ಬಂದಿತು. ಆದ್ದರಿಂದ ಈ ಕಲೆಯನ್ನು ಉಳಿಸಲು ಬೆಳೆಸಲು ಕಲಾವಿದರನ್ನು ಗುರುತಿಸಲು ಮತ್ತು ಮಾಹಿತಿಯನ್ನು ತಿಳಿಸಲು ಜಾನಪದ ವಿದ್ವಾಂಸರು ಬೇಕು. ಇದಕ್ಕೆ ಉದಾಹರಣೆ ಒಬ್ಬ ಹಳ್ಳಿಯ ಸಂಗಾತಿ ಬೆಳಗಾಗಿ ನಾನೆದ್ದು ಯಾರ ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆಯುವ ಭೂಮಿತಾಯಿ ಎಂದು ಹಾಡುತ್ತಾಳೆ. ಇದಕ್ಕೆ ಸಹಾಯವನ್ನು ಮಾಡಿದರೆ ಅದು ಪ್ರಬುದ್ಧಮಾನಕ್ಕೆ ಬೆಳಕಿಗೆ ಬರುತ್ತದೆ. ಅಲ್ಲದಿದ್ದರೆ ಅದು ಹಿಂದೆ ಸರಿಯುತ್ತದೆ. ಆದ ಕಾರಣ ಇಂತಹ ವಿದ್ವಾಂಸರು ಇದ್ದರೆ ಅವರು ಗುರುತಿಸಿ ಇಂತಹ ಕಲೆಗೆ ಪ್ರೋತ್ಸಾಹವನ್ನು ನೀಡುತ್ತಾರೆ. ಅದರಿಂದ ಜಾನಪದ ವಿದ್ವಾಂಸರಿದ್ದರೆ ಕಲೆಯು ಉಳಿಯಲು ಬೆಳೆಯಲು ಸಹಾಯವಾಗುತ್ತದೆ ಮತ್ತು ಮೂಲೆಗುಂಪಾಗಿರುವ ಕಲಾವಿದರು ಬೆಳಕಿಗೆ ಬಂದು ತನ್ನ ಬದುಕನ್ನು ಬಂಗಾರ ಮಾಡಿಕೊಳ್ಳುತ್ತಾರೆ. ಆದ್ದರಿಂದ ಇಂತಹ ಎಲ್ಲಾ ಅಪೂರ್ವ ಕೆಲಸಗಳಿಗೆ ಜಾನಪದ ವಿದ್ವಾಂಸರ ಸಹಕಾರ ಸಲಹೆ ಪೂರ್ಣವಾಗಿ ಬೇಕಾಗಿರುತ್ತದೆ. ಆದ್ದರಿಂದ ಜಾನಪದ ವಿದ್ವಾಂಸರಿಂದ ಕಲಾವಿದರಿಗೆ ಸಹಾಯವಾಗಿ ಒಳ್ಳೆಯ ಅಭಿಪ್ರಾಯ ನಮಗೆ ದೊರೆಯುತ್ತದೆ. ಆದ್ದರಿಂದ ಇಂತಹ ವಿದ್ವಾಂಸರ ಸೇವೆಗಳು ಒಳ್ಳೆಯ ಅಭಿಪ್ರಾಯ ಮೂಡಿಸುತ್ತವೆ.

೨. ಈಗಂತು ಜಾನಪದ ಕಲೆ ಬಹಳ ಹಿಂದೆ ಸರಿಯುತ್ತಿದೆ. ಅದನ್ನು ಉಳಿಸಲು ಬೆಳೆಸಲು ಕಲಾವಿದನ ಅಗತ್ಯ ಬೇಕೇ ಬೇಕು. ಆದರೆ ನಾನೊಬ್ಬ ಕಲಾವಿದ. ನಾನು ಹಳ್ಳಿ ಹಳ್ಳಿಗೆ ಹೋಗಿ ಮೂಲೆಗುಂಪಾಗಿರುವ ಕಲಾವಿದನ ಬದುಕಿಗೆ ಸಹಕಾರವಾದರೆ ಹಳ್ಳಿಗನ ಕಲೆ ಬಂಗಾರವಾಗುತ್ತದೆ. ಕಲಾವಿದನು ಮಾಡುವುದು ಏನು? ಹಳ್ಳಿಗೆ ಹೋಗಬೇಕು.

ಕಲಾವಿದ ಕಲೆಯಲ್ಲಿ ಹಿಂದೆ ಬಿದ್ದಿರುತ್ತಾನೆ. ಅವನಿಗೆ ಎಚ್ಚರಿಕೆ ನೀಡಿ ನಿನ್ನ ಕಲೆಯನ್ನು ಮುಂದುವರಿಸು, ನಿನ್ನ ಕಲೆಗೆ ಪ್ರೋತ್ಸಾಹ ಸಿಕ್ಕುತ್ತದೆ ಹೀಗೆ ಹೇಳಿ ಅವನಿಗೆ ಪ್ರೋತ್ಸಾಹ ಕೊಡುವುದೇ ಕಲಾವಿದನ ಬದುಕು ಮತ್ತು ಅವನಿಗೆ ತಿಳುವಳಿಕೆ ಹೇಳಿ ಕಲೆಯನ್ನು ಸಾಧನೆ ಮಾಡಲು ಮಾರ್ಪಾಡು ಮಾಡಬೇಕು. ಮತ್ತು ಕುವೆಂಪು ಅವರು ತಿಳಿಸಿದಂತೆ ಎಲ್ಲಾದರೂ ಇರು, ಎಂತಾದರು ಇರು ನೀನು ಎಂದೆಂದಿಗೂ ಕನ್ನಡಿಗನಾಗಿರು ಎಂದು ತಿಳಿಸಿದಂತೆ ಒಬ್ಬ ಕಲಾವಿದ ತನ್ನ ಬರುವ ಕಲೆಯನ್ನು ಸಾಧನೆ ಮಾಡಿದರೆ ಕಲಾವಿದನ ಬದುಕು ಸಹ ಸ್ವರ್ಗವಾಗುತ್ತದೆ. ಆದ್ದರಿಂದ ಒಬ್ಬ ಕಲಾವಿದ ಮಲಗಿದ್ದ ಕಲಾವಿದನನ್ನು ಎಚ್ಚರಿಸಿ ಅವನ ಕಲೆಗೆ ಪ್ರೋತ್ಸಾಹ ನೀಡಿ ಅವನನ್ನು ಪ್ರದರ್ಶನವನ್ನು ನೀಡುವಂತೆ ಮಾಡಿ ಅವನ ಬದುಕನ್ನು ಸಾರ್ಥಕಗೊಳಿಸುವುದೆ ಒಬ್ಬ ಕಲಾವಿದನ ಸೇವೆ, ಇದು ಕಲಾವಿದನ ಸಾರ್ಥಕ ಸೇವೆ.

೩. ಜಾನಪದ ಕಲೆ ಎಂಬುದು ಹಳ್ಳಿಗಾಡಿನ ಬದುಕು, ಈ ಕಲೆಯನ್ನು ಉಸಿರಾಡುವಂತೆ ಮಾಡುವುದೇ ಕಲಾವಿದನ ಕೆಲಸ. ಒಬ್ಬ ಕಲಾವಿದನಾದವನಿಗೆ ಈ ಕಲೆಯನ್ನು ಸ್ವಭಾವನ್ನು ಗಮನ ಹರಿಸಿ ಉಳಿಸಿ ಬೆಳೆಸುವುದೇ ಕಲಾವಿದನ ಕರ್ತವ್ಯ. ಕಲೆಗೆ ರೂಪ ರೇಖೆಯನ್ನು ಬರಿಸಿದಿದರೆ ಅದು ಕಲೆ ಎನ್ನಿಸುತ್ತದೆ. ಯಾವುದೇ ಕಲೆಯಾಗಿರಬಹುದು. ಜಾನಪದ ಹಾಡು. ಜಾನಪದ ನೃತ್ಯ, ಕೋಲುಮೇಳ, ಹಳ್ಳಿಯ ಹಾಡು, ಸೋಬಾನೆ ಪದ, ವೀರಗಾಸೆ, ಡೊಳ್ಳು ಕುಣಿತ ಇಂತಹ ಅನೇಕ ಕಲೆಗಳು ಗ್ರಾಮಾಂತರದಲ್ಲಿ ಇದ್ದು, ಇಂತಹ ನಶಿಸಿ ಹೋಗುವ ಕಲೆಗಳಿಗೆ ಒತ್ತು ನೀಡಿ ಈ ಕಲೆಗಳನ್ನು ಬೆಳಕಿಗೆ ತಂದರೆ ಇದು ಕಲೆ ಎನಿಸುತ್ತದೆ. ಇದಕ್ಕೆ ಉದಾಹರಣೆ ಒಬ್ಬ ಕಲಾವಿದ ಗಣಪತಿ ಮಾಡುವನು. ಅವನು ಮಣ್ಣನ್ನು ತಂದು, ಮಣ್ಣನ್ನು ಹದ ಮಾಡಿ ಗಣಪತಿ ವಿಗ್ರಹವನ್ನು ಮಾಡಲು ಪ್ರಾರಂಭ ಮಾಡುತ್ತಾನೆ. ಅದನ್ನು ಮಾಡಿದ ಮೇಲೆ ಅದಕ್ಕೆ ಬಣ್ಣವನ್ನು ಮಾಡಲು ಪ್ರಾರಂಭ ಮಾಡುತ್ತಾನೆ. ಅದೆಲ್ಲಾ ಮುಗಿದ ಮೇಲೆ ಅದು ಗಣಪತಿ ಎನ್ನಿಸುತ್ತೆ, ಇಂತಹ ಯಾವ ಕಲೆಯೇ ಆಗಿರಲಿ ಒಬ್ಬ ಕಲಾವಿದ ಇಂತಹ ಕಲೆಗೆ ರೂಪರೇಖೆಯನ್ನು ಕೊಟ್ಟರೆ ಅದನ್ನು ಕಲೆ ಎನ್ನುತ್ತಾರೆ. ಇದು ಕಲೆಯಾಗಿ ಉಳಿಯುತ್ತದೆ. ಒಬ್ಬ ಕಲಾವಿದನಾದವನಿಗೆ ಈ ಕಲೆಯ ಸಂಸ್ಕೃತಿಯನ್ನು ಬೆಳೆಸುತ್ತಾ ಬಂದರೆ ಕಲೆಯ ದೃಷ್ಟಿಯಿಂದ ನಾಲ್ಕು ಜನರಲ್ಲಿ ವಿಶ್ವಾಸ, ನಾಲ್ಕು ಜನರ ದೃಷ್ಟಿ ಈ ಕಲಾವಿದನ ಮೇಲೆ ಬೀಳುತ್ತದೆ. ಆದ್ದರಿಂದ ಕಲಾವಿದನಿಗೂ ಸಹಾ ಒಳ್ಳೆಯ ಗುಣ ಸ್ವಭಾವ ಬರುತ್ತದೆ. ಈ ಗುಣ ಸ್ವಭಾವ ಕಲಾವಿದನನ್ನು ಕೆಟ್ಟದಾರಿಗೆ ಬಿಡುವುದಿಲ್ಲ, ಇದು ಕಲೆಯ ಗುಣ ಸ್ವಭಾವ.

**ಮಾರೆಪ್ಪ ಮಾರೆಪ್ಪ ದಾಸರ,** ತತ್ವಪದ ಕಲಾವಿದರು

೧. ಜಾನಪದ ವಿದ್ವಾಂಸ ಹೆಚ್ಚಿನವರು ನಮ್ಮ ನಿರೀಕ್ಷೆ ಮಟ್ಟಕ್ಕೆ ಕೆಲಸ ಮಾಡುವುದಿಲ್ಲ. ಕೆಲ ವಿದ್ವಾಂಸರು ಎನಿಸಿಕೊಂಡಿರುವವರು ಕೇವಲ ಸ್ವಾರ್ಥ ಸಾಧನೆಗಾಗಿ ಕ್ಷೇತ್ರವನ್ನು ಬಳಸಿಕೊಂಡಿದ್ದಾರೆ. ಮೂಲ ಕಲೆ, ಕಲಾವಿದರ ಮಾಹಿತಿ ಸಂಗ್ರಹಿಸಿ ಪಿಹೆಚ್.ಡಿ. ಪಡೆದಿದ್ದಾರೆ. ನಮ್ಮಗಳ ಸಾಹಿತ್ಯವನ್ನು ಪುಸ್ತಕ ಕ್ಯಾಸೆಟ್‌ಗಳನ್ನು ಮಾಡಿ ಹೆಸರು ಗಳಿಸಿ ಲಾಭ ಮಾಡಿಕೊಂಡಿದ್ದಾರೆ. ಕೊಬ್ಬರಿ ತಾವು ತಿಂದು ನಮ್ಮ ಕೈಗೆ ಚಿಪ್ಪೆ ಕೊಟ್ಟಿರುವವರು ನಾಡಿನೊಳಗೆ ಇದ್ದಾರೆ. ಇಂತಹ ಮಧ್ಯವರ್ತಿಗಳ, ಒಂದರ್ಥದಲ್ಲಿ ದಲ್ಲಾಳಿಗಳ ಕಾಟವೇ ಜಾಸ್ತಿ ಇದೆ. ಇದು ತಪ್ಪಬೇಕು. ನೇರವಾಗಿ ಅರ್ಹ ಕಲೆ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಅಕಾಡೆಮಿ ಮಾಡುವುದು ಅತಿ ಜರೂರಾಗಿ ಕೆಲಸವಾಗಿದೆ.

೨. ಕಲಾವಿದರ ಆರ್ಥಿಕ ಪರಿಸ್ಥಿತಿ ಸುಧಾರಣೆಗಾಗಿ ಅಕಾಡೆಮಿಯ ಸದಸ್ಯರೆ ಕೂಡಿ ಚರ್ಚಿಸುವ ತೀರ್ಮಾನಗಳಿಗೆ ನಮ್ಮ ಒಪ್ಪಿಗೆ ಇದೆ.

೩. ಜನಪದ ಎಂಬುದು ಜನರಿಗಾಗಿ ಬೆಳೆದು ಬಂದ ಅಪ್ರಕಟಿತ ಸಾಹಿತ್ಯ ಕಲೆ ಇದಾಗಿದೆ. ಜನಪದದಲ್ಲಿ ನವರಸಗಳೆಲ್ಲಾ ಇವೆ. ಇತರೆ ಸಾಹಿತ್ಯ ಪ್ರಕಾರ ಜನಪದ ಮೂಲದಿಂದಲೇ ಹುಟ್ಟಿಕೊಂಡಿದೆ. ಅದೇ ಜನವಾಣಿ ಬೇರು, ಕವಿವಾಣಿ ಹೂ ಅಲ್ಲವೇ.

ಇತ್ತೀಚಿಗೆ ಉತ್ತರ ಕರ್ನಾಟದ ಭಾಗದಲ್ಲಿ ಜನಪದ ಗೀತೆಗಳ ಹೆಸರಿನಿಂದ ಬರುತ್ತಿರುವ ಅಶ್ಲೀಲ ಕ್ಯಾಸೆಟ್‌ಗಳ ಹಾವಳಿ ತಪ್ಪಿಸಲು ದಯವಿಟ್ಟು ಕಾಯ್ದೆ ರೂಪಿಸಲು ಸಲಹೆ ಮಾಡಿರಿ. ಮೂಲ ಕಲೆ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಿ ಉಳಿಸಿ-ಬೆಳೆಸಿ.

## ನೆಲ್ಲೀಗೆರೆ ತಿಮ್ಮಪ್ಪಾಚಾರ್ಯ

### ಮೂಡಲಪಾಯ ಯಕ್ಷಗಾನ ಭಾಗವತರು ಹಾಗೂ ಸೂತ್ರದ ಗೊಂಬೆಯಾಟ ಕಲಾವಿದರು

ತಾವು ಕೈಗೊಂಡಿರುವ ಕಲಾವಿದರ ಅನುಭವಗಳನ್ನು ಪುಸ್ತಕದಲ್ಲಿ ದಾಖಲಿಸುವ ಸಂಕಲ್ಪ ಸ್ತುತ್ಯಾರ್ಹವಾದುದಾಗಿದೆ. ಕಳೆದ ಫೆಬ್ರವರಿ ೧೧, ೨೦೦೩ರಲ್ಲಿ ಚನ್ನರಾಯಪಟ್ಟಣದಲ್ಲಿ ತಮ್ಮ ಅಕಾಡೆಮಿಯ ವತಿಯಿಂದ ಏರ್ಪಡಿಸಿದ್ದ ಕರಿಭಂಟನ ಕಾಳಗ ಎಂಬ ಯಕ್ಷಗಾನವನ್ನು ತಮ್ಮ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಆ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಂಡ ವಿಷಯ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಕಲಾವಿದರನ್ನು ಗುರುತಿಸಿ ಅವರಲ್ಲಿರುವ ಸಾಹಿತ್ಯದ ಅನುಭವಗಳನ್ನು, ರಾಗಗಳ ಪರಿಚಯದ ಅನುಭವ ಹಾಗೂ ಮೂಡಲಪಾಯ, ತೆಂಕತಿಟ್ಟು, ಬಡಗತಿಟ್ಟು, ದಕ್ಷಿಣಾದಿ ಘಟ್ಟ ತಗ್ಗು, ಇಂತಿ ಅನೇಕ ಅನುಭವಗಳನ್ನು ಮುದ್ರಣ ಮಾಡಿ ಮುಂದಿನವರಿಗೆ ಅನುಕೂಲ ಮಾಡಿಕೊಡಿರೆಂದು ತಮ್ಮಲ್ಲಿ ನಿವೇದಿಸಲಾಯಿತು. ಮುಖವೀಣೆ ವಾದ್ಯ ನುಡಿಸುವವರಿಲ್ಲದೆ ತುಂಬಾ ವ್ಯಥೆಪಡುವಂತಹ ಸನ್ನಿವೇಶ ನಮ್ಮದಾಗಿದೆ. ಇರುವಂತಹ ಒಬ್ಬರು ಅಥವಾ ಇಬ್ಬರಲ್ಲಿ ಅನುಭವ ಹಾಗೂ ರಾಗಗಳ ಬಗ್ಗೆ ಪರಿಚಯವಿಲ್ಲದೆ ಆ ಕಲೆಗಾರಿಕೆ ಮರೆಯಾಗುವ ಸನ್ನಿವೇಶವಿದೆ. ತಾವು ಇಂತಹ ಕಲಾವಿದರನ್ನು ಗುರುತಿಸಿ ಅವರ ಅನುಭವಗಳನ್ನು ಪುಸ್ತಕದ ರೂಪದಲ್ಲಿ ಹೊರತರುವ ಸಂಕಲ್ಪ ಕಲಾವಿದರಿಗೆ ಹಾಗೂ ಕಲಾ ಲೋಕಕ್ಕೆ ಕಲಾಪ್ರಿಯರಿಗೆ ದಾರಿದೀಪವಾಗಲಿದೆ.

ತಮ್ಮ ಪತ್ರದಲ್ಲಿ ಮೂರು ಪ್ರಶ್ನೆಗಳನ್ನು ಕೇಳಿದ್ದು ಅವುಗಳ ಬಗ್ಗೆ ನನ್ನ ಅನಿಸಿಕೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

೧. ಜಾನಪದ ವಿದ್ವಾಂಸರು, ಆ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಸೇವೆ ಜನಾಂದೋಲನ ರೂಪವನ್ನು ಪಡೆಯಬೇಕಾಗಿದೆ. ಜಾನಪದದಿಂದ ನಮ್ಮ ನಾಡು ನುಡಿ, ಸಂಸ್ಕೃತಿಯ ಅಂಶಗಳು ಪ್ರಜ್ವಲಿಸಬೇಕಿದೆ. ವ್ಯಕ್ತಿ ಸಂಘರ್ಷದ ಹಾದಿಯನ್ನು ತುಳಿಯುತ್ತಿರುವ ಇಂದಿನ ಸನ್ನಿವೇಶದಲ್ಲಿ ಜಾನಪದ ಪ್ರತಿಯೊಬ್ಬರ ಮನೆ ಮನಗಳಲ್ಲಿ ಭದ್ರವಾಗಿ ನೆಲೆಯೂರಬೇಕಿದೆ. ನಮ್ಮ ವಿದ್ವಾಂಸರು ಸ್ವಾರ್ಥವನ್ನು ಮರೆತು ನಮ್ಮ ಪರಂಪರೆಯನ್ನು

ಎತ್ತಿ ಹಿಡಿಯುವಂತಹ ಕಾರ್ಯಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಜಾನಪದ ಇಂದಿನ ಸಮೂಹ ಮಾಧ್ಯಮಗಳ ಹಾವಳಿ ಅಥವಾ ಹಿಡುಗಿಗೆ ಸಿಕ್ಕಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದನ್ನು ವಿದ್ವಾಂಸರು ಚಿಂತಿಸಿ ಜಾನಪದ ಕಲೆಯ ಉಳಿವಿಗಾಗಿ ಹೋರಾಟವನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ಜಾನಪದ ವಿದ್ವಾಂಸರಿಗೆ ಕೇವಲ ತಮ್ಮ ಕ್ಷೇತ್ರವಷ್ಟೆ ಅಲ್ಲದೆ ಎಲ್ಲಾ ಕ್ಷೇತ್ರಗಳಲ್ಲೂ ಸ್ವದೇಶ, ವಿದೇಶಗಳಲ್ಲೂ ಕಲಾವಂತಿಕೆಯನ್ನು ಪ್ರಜ್ವಲಿಸಬೇಕಾಗುತ್ತದೆ. 'ಪರೋಪಕಾರಾರ್ಥಂ ಇದಂ ಶರೀರಂ' ಎಂಬಂತೆ ತನ್ನಲ್ಲಿರುವ ವಿದ್ಯೆಯನ್ನು ಪರರಿಗೆ ದಾನ ಮಾಡಿ, ಪರರಿಂದ ಜ್ಞಾನವನ್ನು ಸಂಪಾದಿಸಿ, ಮೂಲ ಗುರುವಿಗೆ ಕೀರ್ತಿ ಕಿರೀಟವಿತ್ತಂತೆ ವಿದ್ವಾಂಸರು ಶ್ರಮಿಸಿದರೆ, ಅವರ ಶ್ರಮ ಸಾರ್ಥಕವಾಗುವುದರಲ್ಲಿ ಸಂದೇಹವಿರುವುದಿಲ್ಲ.

೨. ಜಾನಪದ ಅಕಾಡೆಮಿ ಮೊದಲು ಕಲಾವಿದರನ್ನು ಗುರ್ತಿಸಿ, ಅವರಲ್ಲಿರುವ ಕಲಾವಂತಿಕೆಯನ್ನು ಪ್ರಶಂಸಿಸಿ, ಅವರ ಕಲಾ ಪೋಷಣೆಗೆ ಸೂಕ್ತ ಸನ್ನಿವೇಶಗಳನ್ನು ಸೃಷ್ಟಿಸುವುದು. ಮಾಹಿತಿ ತಂತ್ರಜ್ಞಾನದ ಉಚ್ಛ್ರಾಯ ಸ್ಥಿತಿಯಲ್ಲಿ ಜಾನಪದ ಕಲಾವಿದರು ಮೂಲೆಗುಂಪಾಗಿದ್ದು, ಮಾಹಿತಿ ತಂತ್ರಜ್ಞಾನವನ್ನು ಜಾನಪದ ಕ್ಷೇತ್ರಕ್ಕೂ ವಿಸ್ತರಿಸಬೇಕಿದೆ. ಜಾನಪದ ಕಲಾವಿದರಲ್ಲಿ ಪ್ರೋತ್ಸಾಹದಾಯಕವಾದ, ಪುರಸ್ಕಾರ, ಪ್ರಶಸ್ತಿ, ರಂಗಮಂದಿರ ನಿರ್ಮಾಣ, ಗ್ರಾಮೀಣ ಪರಿಸರದಲ್ಲಿ ಸಾಕಷ್ಟು ಪ್ರೋತ್ಸಾಹದಾಯಕ ಯೋಜನೆಗಳನ್ನು ತಾಲ್ಲೂಕು ಮಟ್ಟದಲ್ಲಿ 'ಜಾನಪದ ಅಕಾಡೆಮಿ'ಯ ಸ್ಥಾಪನೆ. ಈ ಮೂಲಕವಾಗಿ ಕಲಾವಿದರಲ್ಲಿ ಉಪಕರಣಗಳು, ಆರ್ಥಿಕ ಸಹಾಯ ಮಾಡಿದರೆ ಕಲಾವಿದರು ಹಾಗೂ ಸಮಾಜದ ಜವಾಬ್ದಾರಿ ಹೆಚ್ಚಾಗುತ್ತದೆ.

೩. ಜಾನಪದ ಕಲೆ ಎನ್ನುವುದು ಜನರಿಂದ, ಜನರಿಗೆ, ಮಾತು ಮಾತಿನಿಂದ, ಒಬ್ಬರಿಂದ ಮತ್ತೊಬ್ಬರಿಗೆ ಹರಿದು ಬರುವ ಕಲೆಯಾಗಿದೆ. ಬಾಯಿಂದ ಬಾಯಿಗೆ, ಕೇಳುವುದರ ಮೂಲಕ ತಲೆತಲಾಂತರಗಳಿಂದ ಸಾಗಿ ಬಂದಿರುವುದಾಗಿದೆ. ಜನಪದ ಕಲೆ ವ್ಯಾಖ್ಯಾನದಿಂದ ಒದಗಿ ಬರುವ ಶಬ್ದ ಅದಕ್ಕೆ ತಕ್ಕಂತಹ ಹಾಡುಗಾರಿಕೆ, ಹಸ್ತದಿಂದ ಉದ್ಭವಿಸುವ ಅನೇಕ ತರಹದ ಕುಶಲ ಕಲೆಗಳು, ಹಸ್ತಗಾರಿಕೆಯಿಂದ ಮಾಡುವ ಬಣ್ಣಬಣ್ಣದ ಉಡುಪು, ಆಭರಣಗಳು ಮೂಲತಃ ಮಾನವರಿಂದ ಮೂಡಿಬಂದ ಅನೇಕ ತರ ಲೋಹ, ಕಾಷ್ಟ, ಬಿದಿರು, ಕಾಗದಗಳಿಂದ ರಚಿಸಿ ಜೀವ ತುಂಬಿ ತಕ್ಕ ಚೈತನ್ಯ ಕೊಟ್ಟು ಚಮತ್ಕಾರದಿಂದ ಅಭಿನಯಿಸುವ ದೃಕ್ ಶ್ರವಣದಿಂದ ನೋಡಿ ಆನಂದಿಸುವ ಗುಣಗಳನ್ನುಳ್ಳ ಹರಿಕಥೆ, ಸಿನಿಮಾ, ಯಕ್ಷಗಾನ, ನಾಟಕ ಇವೆಲ್ಲವೂ ಜನಪದ ಮೂಲದಿಂದ ಬಂದವುಗಳು. ಇಂದಿನ ದೃಶ್ಯ ಮಾಧ್ಯಮಕ್ಕೆ ತಾಯಿಬೇರಾಗಿ ಜನಪದ ಅಡಿಗಲ್ಲಾಗಿ ನಿಂತಿರುವುದು ಜನಜನಿತವಾಗಿದೆ.

## ಶ್ರೀಮತಿ ಬಂಗಾರಮ್ಮ, ತತ್ವಪದ ಹಾಡುಗಾರ್ತಿ

೧. ಕರ್ನಾಟಕ ಜಾನಪದದ ತೌರು. ಜಾನಪದ ವಿದ್ವಾಂಸರೆಂಬುವರು ಮಾಡಿರುವ ಕೆಲಸಕ್ಕಿಂತ ಮಾಡಬೇಕಾದ ಕೆಲಸ ಬಹಳ ಇದೆ ಎಂದು ನನ್ನ ಅಭಿಪ್ರಾಯವಾಗಿದೆ.

ಇಂದಿನ ಜಾನಪದ ವಿದ್ವಾಂಸರೆಂಬುವರು ಜಾನಪದ ಕ್ಷೇತ್ರದಲಿ ಇನ್ನೂ ಹೆಚ್ಚು ತಾದಾತ್ಮ್ಯದಿಂದ ಮಾಡಬೇಕಾಗಿದೆ. ಯಾಕೆಂದರೆ ಒಂದು ಪದವಿ ಪಡೆದು ಸಾಧ್ಯವಾದರೆ ಒಂದು ಸಂಶೋಧನೆ ನಡೆಸಿ ಒಂದು ಉದ್ಯೋಗ ದೊರಕುವಂತಾದರೆ ಸಾಕು ಎಂದು ಭಾವಿಸುವವರೇ ಹೆಚ್ಚು. ವಿದ್ವಾಂಸರೆಂಬುವವರು ಸದಾ ಸಂಶೋಧಕರಾಗಬೇಕು. ಕರ್ನಾಟಕದಲ್ಲಿ ಇಂಥವರ ಪಡೆ ಹೆಚ್ಚಬೇಕು.

ಹಿರಿಯ ತಲೆಮಾರಿನ ವಿದ್ವಾಂಸರ ಕರ್ತವ್ಯ ನಿಷ್ಠೆಯ ಮೇಲ್ಪಂಕ್ತಿಯನ್ನು ಅನುಸರಿಸಿ ಇಂದಿನ ಹೊಸ ತಲೆಮಾರಿನ ವಿದ್ವಾಂಸರು ಜಾನಪದ ಕ್ಷೇತ್ರದಲ್ಲಿ ಕೆಲಸಮಾಡುವುದು ಹೆಚ್ಚು ಅಪೇಕ್ಷಣೀಯ. ಜಾನಪದದಲ್ಲಿ ತಲಸ್ಪರ್ಶಿಯಾದ ಕೆಲಸ ಮಾಡಿದಾಗಲೇ ಆತನನ್ನು ವಿದ್ವಾಂಸನೆಂದು ಕರೆಯಬೇಕು. ಜಾನಪದದಿಂದ ಮಾಹಿತಿ ಸಂಗ್ರಹಿಸಿ ಒಂದು ಸಂಗ್ರಹ ಪುಸ್ತಕ ಪ್ರಕಟಿಸಿದಾಕ್ಷಣ ಒಂದು ಚಿಕ್ಕ ಗಂಭೀರವಲ್ಲದ ಸಂಶೋಧನೆ ಮಾಡಿದಾಕ್ಷಣ ಆತನು ವಿದ್ವಾಂಸನಾಗಲಾರ. ಇಂತಹ ವಿದ್ವಾಂಸರೆಂಬುವವರಿಂದ ಜಾನಪದಕ್ಕೆ ಯಾವ ಪ್ರಯೋಜನವಾಗಲಾರದು.

ಕರ್ನಾಟಕದ ಜಾನಪದ ವಿದ್ವಾಂಸರು ಜನಪದರ ಹತ್ತಿರ ಬರಬೇಕು. ಸಂಗ್ರಹಕಾರ್ಯದಲ್ಲಿ ನೀತಿ ಸಂಹಿತೆಯನ್ನು ಪಾಲಿಸಬೇಕು. ಕಲಾವಿದರನ್ನು ಬಳಸಿಕೊಂಡಾದ ಮೇಲೆ ಬಾಳೆಲೆಯ ಹಾಸ್ಕುಂಡು ಬೀಸಿ ಒಗೆದ ಹಾಗೆ ಮಾಡದೆ ಕಲಾವಿದರಿಂದ ಜಾನಪದ ಎಂಬ ಧೋರಣೆ ತಳೆಯಬೇಕು. ಇಲ್ಲಿಯ ಭಾವದ ಸಾರಾಂಶವಿಷ್ಟೆ, ಇನ್ನೂ ಆಗಬೇಕಾದ ಕಾರ್ಯ ಅಗಾಧವಾಗಿದೆ. ಅದನ್ನು ವಿದ್ವಾಂಸರು ಇನ್ನೂ ಹೆಚ್ಚು ಶ್ರಮವಹಿಸಿ ಮಾಡಬೇಕೆಂಬುದೇ ಆಗಿದೆ.

೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಾನಪದ ಕಲಾವಿದರಿಗಾಗಿ ಮಾಡಬೇಕಾದ ಕೆಲಸದ ಬಗ್ಗೆ ಹೇಳುವುದಾದರೆ ಮೊದಲು ಅಕಾಡೆಮಿಯ ಇತಿಮಿತಿ ಬಗ್ಗೆ ಹೇಳಬೇಕಾಗುತ್ತದೆ.

ಜಾನಪದ ಜಗತ್ತು - ಕಲಾವಿದರ ಬಳಗ ಅತಿ ದೊಡ್ಡ ಅವಿಭಕ್ತ ಕುಟುಂಬ. ಈ ಕುಟುಂಬವನ್ನು ನಿಭಾಯಿಸುವಷ್ಟು ಅಕಾಡೆಮಿ ಆರ್ಥಿಕವಾಗಿ ಸದೃಢವಾಗಬೇಕು. ಇಲ್ಲವಾದರೆ 'ಮಹಾಪಿತೃಗಳ' ಋಣ ತೀರಿಸುವುದೆಂತು. ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಸಾಲುತ್ತದೆಯೆ ?

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸರ್ಕಾರದ ಅನುದಾನದ ಜೊತೆಗೆ ಸ್ವಪ್ರಯತ್ನದಿಂದ ಸಂಪನ್ಮೂಲ ಕ್ರೋಢೀಕರಣ ಮಾಡಿಕೊಂಡು ಮೊದಲು ಆರ್ಥಿಕವಾಗಿ ಸದೃಢವಾಗಬೇಕು. ಆಗ ಮಾತ್ರ ಕಲಾವಿದರಿಗಾಗಿ ಇನ್ನೂ ಹೆಚ್ಚಿನ ಸಹಕಾರ - ಸೌಲಭ್ಯಗಳ ಮೂಲಕ ವಿಶೇಷ ಯೋಜನೆ ತಯಾರಿಸಲು ಸಾಧ್ಯವಾಗುತ್ತದೆ.

ಇಲ್ಲಿ ಆರ್ಥಿಕ ಸಬಲತೆಯೇ ಪ್ರಮುಖವೆಂದು ಭಾವಿಸಬಾರದು. ಜಾನಪದ ಉಳಿದಿರುವುದು ಕಲಾವಿದನಲ್ಲಿ. ಕಲಾವಿದನೂ ಒಬ್ಬ ಮನುಷ್ಯ - ಅವನೂ ಬಾಳಿಬದುಕಬೇಕು. ಅವನಿಗೆ ಕನಿಷ್ಠ ಜೀವನ ಸೌಲಭ್ಯಗಳಾದರೂ ದೊರಕಬೇಕು. ಪ್ರತಿ ತಾಲ್ಲೂಕಿನಲ್ಲಿ ಅಕಾಡೆಮಿ ಕಛೇರಿ ತೆರೆದು ಗ್ರಾಮಮಟ್ಟದ ಕಲಾವಿದರ ಸಂಪೂರ್ಣ ಮಾಹಿತಿ ಪಡೆಯಬೇಕು. ರಾಷ್ಟ್ರೀಯ ಹಬ್ಬಗಳಲ್ಲಿ, ನಾಡಹಬ್ಬಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಕಡ್ಡಾಯವಾಗಿ ಕಲಾವಿದರನ್ನು ಆಹ್ವಾನಿಸಿ ಕಲೆಗೆ ಪ್ರೋತ್ಸಾಹ ಸಿಗುವಂತಾಗಬೇಕು. ನಾಡು - ನುಡಿ ಸಂಸ್ಕೃತಿ ಸೊಗಡು ಅಡಗಿರುವುದೇ ಜಾನಪದದಲ್ಲಿ, ಹಾಗಾಗಿ ಕಲಾವಿದ ಉಳಿದರೆ ಜಾನಪದ ಉಳಿಯುತ್ತದೆ. ಜಾನಪದ ಗೆಲ್ಲಿ - ಬಾಳ್ಗಿ.

೩.ಅ) ಈ ಜಾನಪದ ಎನ್ನುವುದು ಏನು ಇದರ ಗುಣಸ್ವಭಾವ ಏನು ಎಂಬ ಈ ಗಹನವಾದ ಪ್ರಶ್ನೆಗೆ ಕರ್ನಾಟಕದ ದಾವಣಗೆರೆ ಜಿಲ್ಲೆಯ ಬಂಗಾರಕ್ಕನ ಗುಡ್ಡದ ತತ್ವಪದ ಕಲಾವಿದೆಯಾದ ನಾನು ನನ್ನ ಉತ್ತರವನ್ನು ಸಂಕ್ಷಿಪ್ತವಾಗಿ ಇಲ್ಲಿ ದಾಖಲಿಸುತ್ತೇನೆ.

ಜಾನಪದ ಏನು ಎಂಬ ಪ್ರಶ್ನೆಗೆ ಜಾನಪದವಲ್ಲದ್ದು ಏನು ? ಎಂಬ ಪ್ರಶ್ನಾರೂಪದ ಉತ್ತರವೇ ಸಮಂಜಸವೆಂದು ತೋರುತ್ತದೆ. ಪ್ರಪಂಚದ ನಾನಾ ಭಾಗದ ವಿದ್ವಾಂಸರು ಈ ಪ್ರಶ್ನೆಗೆ ಉತ್ತರಿಸಿದ್ದಾರೆ.

ಬದುಕಿನ ವಿರಾಟ ಸ್ವರೂಪದಲ್ಲಿ ಅಡಕವಾಗಿರುವ ಕಲಾತ್ಮಕತೆ ಪೀಳಿಗೆಯಿಂದ ಪೀಳಿಗೆಗೆ ನಿತ್ಯನಿರಂತರವಾಗಿ ಹರಿದು ಬರುತ್ತಿರುವ, ಬತ್ತದ ಜೀವ ಕಲೆಯ ಮೂಲಸೆಲೆಯೇ ಜಾನಪದ ಎಂಬುದು ನನ್ನ ಅನಿಸಿಕೆಯಾಗಿದೆ.

ಹೊಸದು - ಹಳೆಯದು ಎಂಬ ಅಭಿಪ್ರಾಯ ಸೂಕ್ತವಲ್ಲ, ಇದೊಂದು ಹೊಸಚಿಗುರು ಆದರೆ ಹಳೆಬೇರು. ಬೇರಿಗೆ ಬದುಕಿನ ಜೀವಸತ್ವ ಇರುವವರೆಗೂ ಇದು ಬದುಕಿರುತ್ತದೆ.

ಗುಣ ಸ್ವಭಾವ - ಪರಂಪರೆಯ ಪ್ರಜ್ಞೆ ಇರುವ ಕಣ್ಣು ಮತ್ತು ಹೃದಯಕ್ಕೆ ಇದರ ಗುಣ ಸ್ವಭಾವಗಳು ಅರ್ಥವಾಗುತ್ತವೆ. ಈ ಪರಂಪರಾನುಗತ ಪ್ರಜ್ಞೆಯೇ ಜಾನಪದ ಸಂಸ್ಕೃತಿಯನ್ನು ರೂಪಿಸಿದೆ. ಈ ಸಂಸ್ಕೃತಿ ಮಾತು ಮತ್ತು ಕೃತಿಯಲ್ಲಿ ಅಭಿವ್ಯಕ್ತವಾದಾಗ ಅದರ ಗುಣ ಸ್ವಭಾವಗಳು ಗೋಚರಿಸುತ್ತವೆ.

ಜಾನಪದದ ಗುಣ - ಸ್ವಭಾವ ಅದು ಬತ್ತದ ಸೆಲೆ ಗುಪ್ತಗಾಮಿನಿ, ಹೆಸರಿಲ್ಲದ ಹೆಸರೊಲ್ಲದ ಕಾನನದ ಮಲ್ಲಿಗೆ, ಹಿತ್ತಲ ಗಿಡ. ಸ್ವಭಾವವೋ ಅನಂತರೂಪಾಂತರ ವಿಲಾಸ ಹೊಸಯುಕ್ತಿ, ಹಳೆತತ್ವ, ಜಡತ್ವವಲ್ಲ, ಜಂಗಮತ್ವ, ಹೆಜ್ಜೆ ಗುರುತುಗಳನ್ನು ದಾಖಲಿಸುತ್ತಾ ಮುನ್ನಡೆಯುವ ಜಂಗಮ ಈ ಜಾನಪದ ಜಂಗಮ, ಪಳೆಯುಳಿಕೆಗಳಿಂದ ಎದ್ದು ಬರುವ ಫೀನಿಕ್ಸ್ ಇದರ ಸ್ವಭಾವ.

ಆ) ಜಾನಪದ ಬೀಜವಾದರೆ ಆ ಬೀಜದೊಳಗೆ ಅಡಗಿರುವ ವೃಕ್ಷದ ಚಿತ್ತಾರವೇ ಜನಪದ ಕಲೆ. ಇದು ಜನಪದರ (ಕಲಾವಿದರ) ಅಂತರಾಳದಿಂದ ಸಹಜವಾಗಿ, ಸುಲಭವಾಗಿ ಹೊರಹೊಮ್ಮುವ ಕಲಾತ್ಮಕ ಅಭಿವ್ಯಕ್ತಿ. ಅನುಕರಣೆ ಮೂಲ ಪ್ರವೃತ್ತಿಯಾದರೂ ಆ ಕಲೆಯನ್ನು ಅಭಿವ್ಯಕ್ತಗೊಳಿಸುವ 'ಮೂಲ ಕಲಾವಿದ' ಕಲಾವಿದನ ಒಳಗಿರಬೇಕು. ಕಲಾವಿದನೊಳಗೊಬ್ಬ ಕಲಾವಿದ. ಅವನಿಲ್ಲದೆ ಬರಿ ಅನುಕರಣೆಯಿಂದ ಬರುವ ಕಲೆ ಏಕತಾನತೆಯನ್ನು ಹೊಂದುತ್ತದೆ. ಅದರಲ್ಲಿ ಸೃಜನಶೀಲತೆ, ಸ್ವೋಪಜ್ಞತೆಯಿರುವುದಿಲ್ಲ ಒಂದರ್ಥದಲ್ಲಿ ಅದು ದೈವದತ್ತವಾದದ್ದು ಎಂಬ ಮಾತನ್ನು ಒಪ್ಪುತ್ತೀರೋ ಇಲ್ಲವೋ ಅದು ಚರ್ಚೆಯ ವಿಷಯವಾಗಿರಬಹುದು. ಇನ್ನು ಪ್ರಭಾವ ಪ್ರೇರಣೆ ಇರಲೇಬೇಕು. ಜೊತೆಗೆ ತರಬೇತಿಯೂ ಅಗತ್ಯ. ಇದರ ವೈವಿಧ್ಯತೆಗೆ ಕಾರಣ ಸಾಂಸ್ಕೃತಿಕ ಪರಂಪರೆ ಭೌಗೋಳಿಕ ಹಿನ್ನೆಲೆ, ವಾಯುಗುಣ. ಕರ್ನಾಟಕ ಜನಪದಕಲೆಯ ತೌರು.

ನೂಲಿನಂತೆ ಸೀರೆ ತಾಯಿಯಂತೆ ಮಗಳು - ಎಂಬ ಮಾತು ಇದರ ಗುಣ - ಸ್ವಭಾವವನ್ನು ಬಣ್ಣಿಸುತ್ತದೆ. ಅದನ್ನು ಆಸ್ವಾದಿಸುವ ಮುಕ್ತ ಮನಸ್ಸು ಮತ್ತು ನಿರ್ಮಲ ಹೃದಯಕ್ಕೆ ಅದರ ಗುಣ ಸ್ವಭಾವಗಳು ಗೋಚರಿಸುತ್ತವೆ.

## ಬಿ.ಹೆಚ್. ಪುಟ್ಟಶ್ಯಾಮಾಚಾರ್ಯ

'ರಾಷ್ಟ್ರಪ್ರಶಸ್ತಿ' ಪುರಸ್ಕೃತ ಸೂತ್ರದ ಗೊಂಬೆ ಕಲಾವಿದರು

೧. ಜನಪದ ವಿದ್ವಾಂಸರು ಈ ಕ್ಷೇತ್ರಕ್ಕೆ ಸಾಕಷ್ಟು ಮಾಡಿದ್ದಾರೆ. ಆದರೂ ಇದು ಸಾಲದು. ಸತತ ಶ್ರಮವಹಿಸಿ ಸದಾ ಸಮಾಜದ ಏಳ್ಗೆಗೆ, ನೈತಿಕ ಬೆಳವಣಿಗೆಗೆ, ಪರಿವರ್ತನೆಗೆ ಜನಪದ ಸಾಹಿತ್ಯ ಸಹಕಾರಿ, ದಾರಿದೀಪ. ಆದ್ದರಿಂದ ಈ ಜನಪದ ಕ್ಷೇತ್ರಕ್ಕೆ ಶ್ರಮಿಸಲೇಬೇಕು. ವಿಷಯ ಬರೆಯಬೇಕೆಂದರೆ ಬೇಕಾದಷ್ಟಿದೆ. ಇಂದು ಸಮಾಜದಲ್ಲಿ ಮೌಲ್ಯಗಳು ಕಳಚಿಹೋಗುತ್ತಿವೆ. ವಿಷಯಗಳನ್ನು ಸಾಂಗವಾಗಿ ಹೇಳುತ್ತಾ ಇದರ ಜೊತೆಗೆ ವಿಚಾರವನ್ನು ಮಾಡುತ್ತಾ ಕುಂದು ಕೊರತೆಗಳನ್ನು ವಿಮರ್ಶೆ ಮಾಡಿ ಅವುಗಳ ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿರುವುದು ಪ್ರಮುಖ ಸಂಗತಿ.

ಮಾನವ ಸಂಪನ್ಮೂಲಗಳ (ಕಲಾವಿದರ) ಸಭೆ, ವಿಷಯದ ಚರ್ಚೆ, ಕಾರ್ಯಾಗಾರಗಳು, ಸಮುದಾಯದ ಸಂಪನ್ಮೂಲಗಳು, ವೈಯಕ್ತಿಕ ಪ್ರತಿಭೆ ಇವುಗಳು ನಿರಂತರವಾಗಿ ನಡೆಯುತ್ತಿರಬೇಕು. ಯಾರದೋ ಕಾಲಕ್ಕೊಮ್ಮೆ ನಡೆದು ಒಂದು ಕಡೆ ನಿಂತರೆ ಅದು ನಿಂತ ನೀರಾಗುತ್ತದೆ. ಇದು ಸದಾ ಚಲನೆಯಲ್ಲಿದ್ದರೆ ಮಾತ್ರ ಜೀವಂತವಾಗಿರುತ್ತದೆ ಇಲ್ಲದಿದ್ದರೆ ಇದು ನಿರ್ಜೀವಿಯಾಗುತ್ತದೆ.

ಜಾನಪದ ವಿದ್ವಾಂಸರು, ಪರಿಣಿತರು, ಕಲಾವಿದರು, ಹಿರಿಯರು ಎಲ್ಲರೂ ಲಿಂಗ ತಾರತಮ್ಯವಿಲ್ಲದೆ ಒಂದೆಡೆ ಸೇರಿ ಒಂದು ಕ್ರಿಯಾಯೋಜನೆಯನ್ನು ಹಾಗೂ ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು. ಈ ಕ್ರಿಯಾಯೋಜನೆಯಾದ ಮೇಲೆ ಜಾನಪದ ಕ್ಷೇತ್ರದ ಎಲ್ಲಾ ಪ್ರಕಾರಗಳು ಜಾನಪದ ಗಾದೆಗಳು, ಗೀತೆಗಳು, ಒಗಟುಗಳು, ಯಕ್ಷಗಾನ ಚರ್ಚಿಸಿ, ಉಳಿಸಿ ಬೆಳೆಸಲು ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು.

೨. ಜಾನಪದ ಅಕಾಡೆಮಿಯು ಕಲಾವಿದರಿಗಾಗಿ ಮಾಡಬೇಕಾದ ಕಾರ್ಯಗಳು ಒಂದಲ್ಲ,

ಹತ್ತಾರು ಇವೆ. ಈ ಕಲೆಯು ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವುದರಿಂದ ಹಳ್ಳಿಯ ಪರಿಸರದಲ್ಲಿ ಇದರ ಬೆಳವಣಿಗೆಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಬೇಕು. ಹಳ್ಳಿಯ ಪರಿಸರದ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಪ್ರಾಥಮಿಕ ಹಂತದಿಂದಲೇ ಒಂದು ವಿಭಾಗವನ್ನು ತೆರೆದು ಜನಪದ ಕಲಿಕೆಗೆ ಪ್ರೋತ್ಸಾಹ, ವಿದ್ಯಾರ್ಥಿ ವೇತನಗಳನ್ನು ನೀಡಬೇಕು.

ಗ್ರಾಮೀಣ ಪರಿಸರದಲ್ಲಿರುವ ಪ್ರತಿಭೆಯುಳ್ಳ ಪರಿಣತರನ್ನು, ಹಿರಿಯ ಕಲಾವಿದರನ್ನು ಗುರುತಿಸಿ ಬೋಧಕರನ್ನಾಗಿ ನೇಮಿಸಬೇಕು.

ಜಾನಪದ ಸಾಹಿತ್ಯವು ಮಣ್ಣಿನ ನಂಟಿನಲ್ಲಿ ಬೆಳೆದು ಬಂದಿದೆ. ಅಲ್ಲಿನ ಕಷ್ಟಕಾರ್ಪಣ್ಯಗಳು ಅಸಂಖ್ಯಾತ ನೈಜ ಅನುಭವಗಳು, ಆಚಾರವಿಚಾರಗಳು, ಸಂಪ್ರದಾಯಗಳು, ಭಾಷೆಗಳು ಎಲ್ಲವೂ ಈ ಪರಿಸರದಲ್ಲಿಯೇ ನಡೆಯುವುದರಿಂದ ಪಟ್ಟಣ, ನಗರಪ್ರದೇಶಗಳಲ್ಲಿ ಶಾಲೆಗಳನ್ನು ತೆರೆಯುವುದರಿಂದ ಏನೇನೂ ಪ್ರಯೋಜನವಿರುವುದಿಲ್ಲ.

೩. ಜಾನಪದ ಕಲೆಯೆನ್ನುವುದು ಅಮೂಲ್ಯ ಸಂಪತ್ತು. 'ಇದು ಅಪ್ಪಟ ಅಪರಂಜಿ' ಇದರಲ್ಲಿ ಯಾವ ಒಡವೆಗಳನ್ನು ಬೇಕಾದರೂ ಮಾಡಿಕೊಳ್ಳಬಹುದು. ಈ ಸಾಹಿತ್ಯದ ಗುಣ ಸ್ವಭಾವಗಳು ಶಿಷ್ಟ (ಶಿಕ್ಷಕರ) ಸಾಹಿತ್ಯಕ್ಕಿಂತ ಭಿನ್ನವಾದದ್ದು. ಜನಸಾಮಾನ್ಯರ ಕೈಗಳಿಗೆ ಎಟುಕುವಂತಹುದು. ಇದರಲ್ಲಿ ಯಾವ ಥಳುಕು ಇಲ್ಲ. ಇದರ ಸೊಗಡು ಇರುವುದೇ ಹಳ್ಳಿಗರಲ್ಲಿ. ಜೀವನದ ಅನುಭವಗಳಿಂದ ಸಿಡಿದು ಬಂದ ಗಾದೆಗಳನ್ನು ನಾನಾ ಬಗೆಯಲ್ಲಿ ಮನುಷ್ಯರ ನಡೆನುಡಿಗಳನ್ನು ತಿದ್ದುತ್ತಾ ಗಾದೆ ವೇದಕ್ಕೆ ಸಮಾನ ಹಿನ್ನೆಲೆಯಲ್ಲಿ ಗಾದೆಗಳ ಮಹತ್ವವನ್ನು ತಿಳಿಯಬಹುದು. ಗಾದೆಯ ಮಾತು ಎಂದಿಗೂ ಸುಳ್ಳಾಗದು. ಎಂತಲೇ ಗಾದೆಗಳನ್ನು ಉಲ್ಲೇಖಿಸಿ ನ್ಯಾಯಾಲಯಗಳಲ್ಲಿ ತೀರ್ಪು ನೀಡುವ ಪರಿಪಾಠ ಕೆಲವು ಸಾಂಸ್ಕೃತಿಕಗಳಲ್ಲಿ ಇರುವುದನ್ನು ಕಾಣಬಹುದು. ಜಾನಪದ ಸಾಹಿತ್ಯವು ಗ್ರಾಮೀಣ ಅಭಿವೃದ್ಧಿಯ ಸರ್ವತೋಮುಖ ಬೆಳವಣಿಗೆಗೆ ಸಹಾಯವಾಗಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

**ಶ್ರೀ ಪುಟ್ಟಮಲ್ಲೇಗೌಡ,** 'ರಾಜ್ಯ ಪ್ರಶಸ್ತಿ' ಪುರಸ್ಕೃತ ಗೊರವರ ಕುಣಿತದ ಕಲಾವಿದರು

---

೧. ಜೀ. ಶಂ. ಪರಮಶಿವಯ್ಯ, ತಿಪ್ಪಯ್ಯನವರು, ಚೆನ್ನಬಸಪ್ಪರಂಥವರು ನಿಜವಾದ ಜನಪದ ಕಲಾವಿದರನ್ನು ಹುಡುಕಿ, ಅವರಿಗೆ ವೇದಿಕೆ ನಿರ್ಮಿಸುವುದರ ಜೊತೆಗ ಅವರ ಪ್ರತಿಭಾ ಪ್ರದರ್ಶನವನ್ನು ರಾಜ್ಯಮಟ್ಟ-ರಾಷ್ಟ್ರ ಮಟ್ಟದಲ್ಲಿ ಮೆರೆಸುವಂತೆ ಮಾಡುತ್ತಿದ್ದರು. ಅಂತಹ ವಿದ್ವಾಂಸರು ಕಲಾವಿದರ ಬಗ್ಗೆ ತೋರುತ್ತಿದ್ದ ಆಸಕ್ತಿ, ಪ್ರೋತ್ಸಾಹ, ಇತ್ತೀಚಿನ ಜಾನಪದ ವಿದ್ವಾಂಸರಲ್ಲಿ ಕಡಿಮೆ ಆಗಿದೆ ಅನ್ನಿಸುತ್ತದೆ.

ನಶಿಸುತ್ತಿರುವ ಜಾನಪದ ಕಲೆಗಳನ್ನು ಉಳಿಸಿ - ಬೆಳೆಸಲು ಜಾನಪದ ವಿದ್ವಾಂಸರು, ಅಕಾಡೆಮಿ ಅಧ್ಯಕ್ಷರು, ಸರ್ಕಾರದ ಜೊತೆ ಚರ್ಚಿಸಿ ಅವರಿಗೆ ಹಣಕಾಸಿನ ಸಹಾಯ ಮಾಡಬೇಕು. ಯಾಕೆಂದರೆ ಇತ್ತೀಚಿನ ಎಲ್ಲಾ ವೃತ್ತಿಪರ ಜಾನಪದ ಕಲಾವಿದರು ಆ ಕಲೆಯನ್ನೇ ತಮ್ಮ ಬದುಕನ್ನಾಗಿಸಿಕೊಂಡಿದ್ದಾರೆ. ಬಡತನದ ಬೇಗೆಯಲ್ಲಿ ಬದುಕುತ್ತಿರುವ ಜಾನಪದ ಕಲಾವಿದರ ಬಗ್ಗೆ ಜಾನಪದ ವಿದ್ವಾಂಸರು ಇನ್ನೂ ಹೆಚ್ಚಿನ ಕೆಲಸ ಮಾಡಬೇಕಾಗಿದೆ ಎಂಬುದು ನನ್ನ ಅನಿಸಿಕೆ.

೨. ಜಾನಪದ ಅಕಾಡೆಮಿಯವರು, ಜಾನಪದ ಕಲಾವಿದರಿಗೆ ಡ್ರೆಸ್ ಮತ್ತು ಸಂಗೀತ ಉಪಕರಣಗಳ ಖರೀದಿಗೆ ಹಣ ಸಹಾಯ ಮಾಡಬೇಕು.

★ ಜಾನಪದ ಕಲಾವಿದರಿಗೆ ಉಚಿತ ಬಸ್ ಪಾಸ್ ಕೊಡಿಸಿಕೊಡಬೇಕು.

★ ಸಾಮಾನ್ಯವಾಗಿ ಎಲ್ಲಾ ಜಾನಪದ ಕಲಾವಿದರು ಬಡವರೇ. ಆದುದರಿಂದ ಮಾಸಾಶನ ನೀಡುವಾಗ ಅವರ ವಯಸ್ಸನ್ನು ಈಗಿರುವ ೬೦ ವರ್ಷದ ಬದಲಾಗಿ ೫೦ ವರ್ಷಕ್ಕೆ ಇಳಿಸಬೇಕು. ಯಾಕೆಂದರೆ ಮನುಷ್ಯನ ಆಯುಷ್ಯ ಇತ್ತೀಚೆಗೆ ಬಹಳ ಕಡಿಮೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು.

★ ಆಯಾಯ ಜಿಲ್ಲಾ ಕೇಂದ್ರಗಳಲ್ಲಿರುವ ಸಹಾಯಕ ನಿರ್ದೇಶಕರು, ಕನ್ನಡ ಮತ್ತು

ಸಂಸ್ಕೃತಿ ಇಲಾಖೆ ಇವರು ಆ ಭಾಗದ ಜಾನಪದ ಕಲಾವಿದರ ಮಾಹಿತಿಗಳ ಸಂಗ್ರಹಣೆ ಮಾಡಬೇಕು. ಕಲಾವಿದರ ಮಾಹಿತಿ ಕೇಂದ್ರವನ್ನು ಅಲ್ಲಿ ಸ್ಥಾಪಿಸಬೇಕು.

ಬಡ ಜಾನಪದ ಕಲಾವಿದರ ಬದುಕಿಗೆ ಅನುಕೂಲವಾಗಲು ಲೋನ್ ವ್ಯವಸ್ಥೆ ಮಾಡಿಕೊಡಬೇಕು. ಯಾಕೆಂದರೆ ಈ ವೃತ್ತಿಯನ್ನೇ ಅವಲಂಬಿಸಿ ಬದುಕುತ್ತಿರುವ ಕಲಾವಿದರ ಬದುಕು ತುಂಬಾ ಕಷ್ಟದಾಯಕ. ಈ ಕುರಿತು ಚಿಂತನೆ ನಡೆಸಿ.

೩. ತಲತಲಾಂತರದಿಂದ ಬಂದಿರುವ ಕಲೆ ಈ ಜಾನಪದ. ಜನರ ಬಾಯಿಂದ ಬಾಯಿಗೆ - ಸ್ಮೃತಿಯಿಂದ ಸ್ಮೃತಿಗೆ ಬಂದಿರುವ ಈ ಕಲೆಯು ಹಳೆಯ ಕಾಲದ ಬದುಕನ್ನು ಪ್ರತಿಬಿಂಬಿಸುತ್ತದೆ. ಅದರ ಆಚಾರ - ವಿಚಾರ - ಉಡುಗೆ - ತೊಡುಗೆ - ಬದುಕು ವಿಶಿಷ್ಟವಾಗಿದ್ದು, ಜನಸಾಸಾಮಾನ್ಯರನ್ನು ಆಕರ್ಷಿಸುತ್ತದೆ. ಉದಾಹರಣೆಗೆ : ತಾರಕಾಸುರನ ಹಾವಳಿಯಿಂದ ತಪ್ಪಿಸಿಕೊಳ್ಳಲು ಅಲ್ಲಿನ ಜನರು ಶಿವನಲ್ಲಿಗೆ ಹೋಗಿ ಮೊರೆ ಇಡಲು, ಶಿವನು ಗೊರವನ ವೇಷ ಧರಿಸಿ ತಾರಕಾಸುರನನ್ನು ಸಂಹಾರ ಮಾಡುತ್ತಾನೆ. ಅದರ ದ್ಯೋತಕವಾಗಿ ಆ ವೇಷವನ್ನು ಗೊರವರು ಧರಿಸಿ ತಮ್ಮದೇ ಶೈಲಿಯನ್ನು ಅನುಸರಿಸಿ ಕುಣಿಯುತ್ತಾರೆ. ಇದು ಪರಂಪರೆಯ ಕಲೆ. ಈ ಕಲೆ ಈಗ ವೃತ್ತಿಯಾಗಿದೆ. ಹೊಟ್ಟೆ ಹೊರೆಯುವ ಕಲೆಯಾಗಿದೆ.

## ಎ. ಎನ್. ಚನ್ನಬಸವಯ್ಯ

'ರಾಜ್ಯ ಪ್ರಶಸ್ತಿ' ಪುರಸ್ಕೃತ ಮೂಡಲಪಾಯ ಯಕ್ಷಗಾನ ಭಾಗವತರು

ಜಾನಪದ ವಿದ್ವಾಂಸರು ಜನಪದದ ಬಗ್ಗೆ ಗಮನ ಹರಿಸದಿದ್ದರೆ ಜಾನಪದ ಕಣ್ಮರೆಯಾಗುತ್ತಿತ್ತು. ಜಾನಪದ ಅಧ್ಯಯನ ಮಾಡದಿದ್ದರೆ ಪುಸ್ತಕಗಳು, ಸಂಶೋಧನೆಗಳು ಮತ್ತು ಜಾನಪದವನ್ನು ಕರೆಸಿ ವಿಶ್ಲೇಷಣೆ ಮಾಡುವುದು, ಜಾನಪದ ವಸ್ತು ಸಂಗ್ರಹಿಸುವುದು ಜಾನಪದದ ಮನಸೆಳೆದು ಅವರಲ್ಲಿ ಕಲೆಗೆ ವಸ್ತು ಸೌಲಭ್ಯ ಒದಗಿಸುವುದು, ಸರ್ಕಾರಕ್ಕೆ ಬರೆದು ಸಹಕರಿಸಿರುತ್ತಾರೆ. ಹಳ್ಳಿಗೆ ಸಂಚಾಲಕರನ್ನು ಕಳುಹಿಸಿ ಅನಂತರ ತಾವೇ ಪರಿಚಯಿಸಿಕೊಂಡು ಅವರಿಗೆ ಅಲ್ಪಸ್ವಲ್ಪ ಧನ ಸಹಾಯವನ್ನು ಸಹ ಮಾಡಿದ್ದಾರೆ. ಇದು ನಮ್ಮ ನಾಡಿನ ಹಿರಿಮೆಗೆ ಪಾತ್ರವಾಗಿದೆ. ಜಾನಪದದ ಉಳಿವಿಗೆ ಪಾತ್ರವಾಗಿದೆ. ಇನ್ನೂ ಮಾಡುವ ಕೆಲಸವು ಇದೆ.ಪಾಠ ಪ್ರವಚನಗಳಲ್ಲಿ ಹೆಚ್ಚು ಬರಬೇಕಾಗಿದೆ. ಪಠ್ಯ ಪುಸ್ತಕದಲ್ಲಿ ಜಾನಪದ ಕಡ್ಡಾಯವಾಗಬೇಕು. ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಕಲಿಸಬೇಕು. ಸಂಗೀತ ಜಾನಪದ ಕ್ಲಾಸ್ ತೆರೆಯಬೇಕು. ಸಂಗೀತವು ಕೂಡ ಜಾನಪದದಿಂದ ಹರಿದು ಬಂದಿದೆ.ಶಾಸ್ತ್ರೀಯಕ್ಕೆ ಅಳವಟ್ಟು ಹಾಡುಗಳು ಜನಪದ ಹಾಡಾದರೂ ಸ್ವರ ವಿನ್ಯಾಸ ಹೊಂದಿದ ಕಾರಣ ಶಾಸ್ತ್ರೀಯದಂತೆ ಕಾಣುತ್ತಿದೆ. ಜಾನಪದ ತನ್ನ ಕ್ರಿಯಾಶೀಲತೆಯನ್ನು ಉಳಿಸಿಕೊಂಡಿದ್ದರೂ ಸ್ವರವಿನ್ಯಾಸಕ್ಕೆ ಅಳವಿಟ್ಟರೆ ಉಳಿಯಲು ಕಾರಣವಾಗಿ ಸ್ಥಿರತೆಗೆ ಪಾತ್ರವಾಗಿದೆ. ಆಳವಾದ ಜಾನಪದ ಕಲಾವಿದರು ಇರುವಾಗಲೇ ಈ ಕಾರ್ಯ ಸಾಧಿಸಬೇಕಾಗಿದೆ.ಅಂತೆಯೇ ಯಕ್ಷಗಾನವು ಕೂಡಾ. ಈ ಹಾಡುಗಳು ಕೂಡ ತಲೆಮಾರಿನವರಲ್ಲಿಯೇ ಇರುವುದರಿಂದ ಇದನ್ನು ಕೂಡಾ ಸ್ವರ ವಿನ್ಯಾಸ ಮಾಡಬೇಕಾಗಿದೆ. ಸ್ಥಿರತೆಗೆ ಪಾತ್ರವಾಗಿದೆ. ಜಾನಪದ ಮಹೋತ್ಸವ ಅಲ್ಲಲ್ಲಿ ನಡೆಸಬೇಕಾಗಿದೆ. ರಾಗ ತಾಳವಿಲ್ಲದೆ ಯಾವ ಜಾನಪದ ಹಾಡುಗಳು ಜನ್ಮವೆತ್ತಿಲ್ಲ. ಮಿಶ್ರರಾಗ, ಶುದ್ಧರಾಗ, ಸಂಗೀತದಿಂದ ಕೂಡಿರುತ್ತದೆ. ತಾಳವು ಕೂಡ ಮಿಶ್ರಚಾಪ ಹೀಗೆ ಎಲ್ಲಾ ಶೈಲಿಯ ಹಾಡಿನಲ್ಲಿ ರಾಗವು ಸೇರಿದೆ. ತಾಳವು ಕೂಡ ಹಾಗೆಯೇ. ನಮ್ಮ ನಡಿಗೆಯು ಕೂಡ, ಏಕತಾಳವೆಂದು ಭಾವಿಸಿದೆ. ರೈಲು ಬಸ್ಸು ಶಬ್ದವು 'ಕೂಡ ರಾಗತಾಳದಿಂದಲೇ ಸೇರಿರುತ್ತವೆ. ಇದು ನನ್ನ ಅಭಿಪ್ರಾಯ.

**ಜಾನಪದ ಅಕಾಡೆಮಿಯ ಜವಾಬ್ದಾರಿ :** ಜಾನಪದ ಅಕಾಡಮಿಯ ಜವಾಬ್ದಾರಿ ನಿರ್ದಿಷ್ಟ ಜಾನಪದರೆಂದು ಗುರ್ತಿಸುವುದು. ಸರ್ಕಾರದ ಅನುದಾನವನ್ನು ದೊರಕಿಸಿಕೊಡುವ ಪಾತ್ರ ಹೆಚ್ಚಿನದು. ಮಾಶಾಸನಕ್ಕೆ ತಕ್ಕ ಗುರ್ತುಗಳನ್ನು ಕಲ್ಪಿಸುವುದು. ಜಾನಪದರು ಎಲ್ಲರು ಅವರ ಶಕ್ತಿಗೆ ಅನುಸಾರವಾಗಿ ಸಹಕಾರ ನೀಡುವ ಬಗ್ಗೆ ಅನುವು ಮಾಡಿಕೊಡುವುದು. ಅಲ್ಲಲ್ಲಿ ನಾಡಿಗೆ ಅನುಗುಣವಾಗಿ ಗೌರವಿಸುವುದು. ಜಾನಪದದ ಉತ್ಸವವನ್ನು ನಡೆಸಿ ಅಲ್ಲಲ್ಲಿ ಕಲಾವಿದರನ್ನು ಬೆಳೆಸಿ ಅವರಿಗೆ ಕೊರತೆ ಇರುವ ಜಾಗವನ್ನು ತುಂಬುವುದು. ಪತ್ರಿಕೆಯಲ್ಲಿ ಹೆಚ್ಚು ಪ್ರಸಾರ ಮಾಡಿಸುವುದು. ಹೊರಗಿನ ಕಲಾವಿದರು ಇಲ್ಲಿಯ ಕಲಾವಿದರು ಇಲ್ಲಿಂದ ಅಲ್ಲಿಗೆ ಬೇಕಾದ ಅಂಶವು ಇವು ಕೂಡ ಇಲ್ಲಿಂದ ಬೇರೆ ಕಡೆಗೆ ನಮ್ಮ ಕಲೆ ನಾಡಿನ ಕಲೆಯ ಬಗ್ಗೆ ಕಲ್ಪನೆಯನ್ನು ಮೂಡಿಸಿ ಅಲ್ಲಿಂದ ಇಲ್ಲಿಗೆ ಕರೆಸಿ ಅವರನ್ನು ಬೆರೆಸಿ ನ್ಯೂನತೆಯನ್ನು ಕಂಡುಕೊಳ್ಳುವಂತೆ ಮಾಡುವುದು. ಎಲ್ಲಾ ಮಾಧ್ಯಮಗಳಲ್ಲಿ ಕಡ್ಡಾಯವಾಗಿ ಜಾನಪದ ಮತ್ತು ಯಕ್ಷಗಾನಗಳನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದು. ಅಲ್ಲಲ್ಲಿಯ ಗ್ರಾಮೀಣ ಕಲೆಗಳಿಗೆ ಅನುಗುಣವಾಗಿ ಚಾರಿತ್ರ್ಯವನ್ನು ಬರೆಸಲು ಅನುಕೂಲ ಕಲ್ಪಿಸಿಕೊಡುವುದು. ಜನಪದರು ಅವಿದ್ಯಾವಂತರು, ಅವರು ಶ್ರಮಪಟ್ಟು ಹಾಡುವರು. ಅನಾರೋಗ್ಯಕ್ಕೆ ಒಳಗಾಗಿ ದುಸ್ಥಿತಿಯಲ್ಲಿದ್ದಾರೆ. ಅವರ ಆರೋಗ್ಯಕ್ಕೆ ಅನುವು ಮಾಡಿಕೊಡುವುದು. ಹೆಚ್ಚು ಪ್ರಸಾರಕ್ಕೆ ದಾರಿ ಮಾಡಿಕೊಡುವುದು. ಪಾಠ ಪ್ರಾವಚನಗಳಲ್ಲಿ ಪ್ರೋಗ್ರಾಮ್‌ಗೆ ಅವಕಾಶ ಕಲ್ಪಿಸುವುದು. ಕಲೆ ಸ್ಥಳೀಯವಾಗಿ ಉಳಿಸಲು ಧನ ಸಹಾಯ ನೀಡಿ ಪ್ರೋತ್ಸಾಹಿಸುವುದು. ಸ್ತ್ರೀಯರಲ್ಲಿಯು ಜನಪದ ಬೆಳೆಯಲು ದಾರಿಮಾಡಿ ಕೊಡುವುದು. ವಿದೇಶದಲ್ಲಿ ಇರುವ ಕನ್ನಡಿಗರಿಗೂ ನಾಡಿನ ಕಲೆ ಮುಟ್ಟಲು ಸಹಕರಿಸುವುದು. ತಳಮಟ್ಟದ ಜನರಲ್ಲಿ ಹೆಚ್ಚು ಜಾನಪದ ಕಾಣುತ್ತಿದೆ. ಅವರನ್ನು ಮೇಲೆತ್ತಿ ಸಹಕರಿಸುವುದು. ಟಿ.ವಿ.ಮಾಧ್ಯಮದಲ್ಲಿಯೂ ಹೆಚ್ಚು ಪ್ರಸಾರವಾಗಬೇಕಿದೆ. ಕಾರಣ ಕೇಳಿಕೆ ಇಲ್ಲದೆ ಅಪೇಕ್ಷತೆ ಹುಟ್ಟಲಾರದು . ಒಂದು ವಸ್ತು ಕಣ್ಣೆದುರು ಸುಳಿದಾಗ ಅದರ ಅಪೇಕ್ಷೆ ನಮಗೆ ಹುಟ್ಟುತ್ತದೆ.

ಜಾನಪದ ಮತ್ತು ಅದರ ಸ್ವರೂಪ. ವ್ಯಕ್ತಿತ್ವ ತನ್ನ ಸ್ವಭಾವ, ಜನ ಮತ್ತು ಪದ ಜಾನಪದ ನಾನಾ ಸ್ವರೂಪದ ಗುಣಲಕ್ಷಣಗಳು. ಜಾನಪದರು ನಿಸ್ವಾರ್ಥಿಗಳು ಯಾವುದೇ ಒತ್ತಡಕ್ಕೆ ಫಲಾಪೇಕ್ಷೆಗೆ ಕಲಿತವರಲ್ಲ. ತನ್ನ ಸುತ್ತಲಿನ ವಾತಾವರಣಕ್ಕೆ ಅನುಗುಣವಾಗಿ ಬೆಳೆದು ಬಂದ ದಾರಿಯಾಗಿದೆ. ಜಾನಪದ ಕಾವ್ಯದಿಂದ ಬೆಳೆದು ಬಂದ ಕಲೆ. ಜನರಿಂದ ಜನಕ್ಕೆ ಮುಟ್ಟಿ ಜನಪ್ರಿಯತೆಗೆ ಪಾತ್ರವಾಗಿದೆ.ಯಾವುದೇ ಒಂದು ಜನಪದ ಹಾಡಿದರೂ ದೈವ ಆರಾಧನೆಯೇ ಕಾಣುತ್ತಿದೆ. ಕೆಲವು ಒಂದು ಜಾನಪದಗಳು ತನ್ನ ಕಣ್ಣಮುಂದೆಯೇ ಕಾಣುವ ವಸ್ತುವಿನ ವಾತ್ಸಲ್ಯ ಪ್ರೀತಿಗೆ ಪಾತ್ರವಾಗಿದೆ. ವ್ಯಕ್ತಿತ್ವ ಮತ್ತು ಭಾವಕ್ಕೆ ಅನುಗುಣವಾಗಿ ಬೆಳೆದು ಬಂದಿದ್ದು, ಸೌಂದರ್ಯ ಸಂತೋಷಕ್ಕೆ ಅನುಗುಣವಾಗಿ ಸತ್ಯ ಶುದ್ಧ ಕಾಯಕಕ್ಕೆ ಕೊಂಡೊಯ್ದು ತನ್ನಲ್ಲಿಯೇ

ಇರುವ ಸ್ವಸ್ವರೂಪವನ್ನು ಸಕಲೇಂದ್ರಿಯುಗಳ ಸಿದ್ದಿಗೆ ಪಾತ್ರವಾಗಿದೆ. 'ತಂದನೋತಾನ ತಾನಾಂದನೋ ತಾನ', ಈ ಜಗತ್ತಿಗೆ ಈ ದೇಹವನ್ನು ತಂದವನೇ ತಾನು ಎಂದು ಹೇಳುತ್ತಿದೆ. ಅಳುವ ಕಂದನ ತುಟಿಯು ಹವಳದ ಕುಡಿಹಂಗ, ಪ್ರೀತಿ ವಾತ್ಸಲ್ಯಕ್ಕೆ ಮಮಕಾರಕ್ಕೆ ಎಡೆಮಾಡಿಕೊಟ್ಟದೆ. ಒಂಬತ್ತು ತೂತಿನ ತುಂಬಿದ ಗಡಿಗವ್ವ ಈ ಘಟ್ಟವನ್ನೆ 'ಹೋಲಿಸಿ ಹೇಳಲಾಗಿದೆ. ಆರು ಮೂರು ಒಂಬತ್ತು, ಅರಿಷಡ್ವರ್ಗಗಳನ್ನು ನಿಗ್ರಹಿಸುವಂತೆ ಹೇಳಿದೆ. ಎಲ್ಲಿಹನೆಲ್ಲಿಹನೆ ಶಿವಭಕ್ತರ ಹೃದಯದಲ್ಲಿ ಎಂದು ತೋರುತ್ತದೆ. ಬಿದಿರಮ್ಮ ತಾಯಿ ಕೇಳೆ ನೀನಾರಿಗೆ ಅಲ್ಲದವಳೆ ಒಂದು ವಸ್ತುವನ್ನು ಪ್ರಯೋಗ ಮತ್ತು ವರ್ಣನೆ' ಓಂ ಎಂದು ಕುಟ್ಟುವೆನು ಸೋಹಂ ಎಂದು ಬೀಸುವೆನು. ತನ್ನ ಬದುಕಿನಲ್ಲಿಯೇ ಶಿವನನ್ನು ಕಾಣುವ ಗುಣ ಹೀಗೆ ಲಕ್ಷಾಂತರ ಜಾನಪದ ಹಾಡುಗಳನ್ನು ಸಂಗ್ರಹಿಸಿರುವುದು ತಜ್ಞರ ಅಭಿಪ್ರಾಯವಾಗಿದೆ ಮತ್ತು ಅಕಾಡೆಮಿಯ ದಿಟ್ಟ ಹೆಜ್ಜೆಯಾಗಿದೆ. ಅಕಾಡೆಮಿಯು ಕೇಂದ್ರದತ್ತ ಗಮನ ಸೆಳೆಯುವಂತೆ ಮಾಡಬೇಕಾಗಿದೆ. ಆಂಗ್ಲ ಭಾಷೆಗೂ ತರ್ಜುಮೆ ಮಾಡುವುದು ಹಿಂದಿಯಲ್ಲು ತರ್ಜುಮೆ ಮಾಡುವುದು; ಕೇಂದ್ರಕ್ಕೆ ಜಾನಪದರನ್ನು ಕಳುಹಿಸುವುದು ಅಕಾಡೆಮಿಯ ಹೆಚ್ಚಿನ ಕೆಲಸವೆಂದು ಭಾವಿಸುತ್ತೇನೆ. ಯಕ್ಷಗಾನ, ಯಕ್ಷದಿಂದ ಧರೆಗಿಳಿದು ಬಂದ ಶೈಲಿ, ವಾತ್ಸಲ್ಯದಿಂದ ಒಂದೊಂದು ಕಡೆ ಒಂದೊಂದು ರೂಪ ಕಂಡು ಬರುತ್ತಿದೆ. ತೆಂಕತಿಟ್ಟು, ಬಡಗತಿಟ್ಟು, ಮೂಡಲಪಾಯ, ಭಾವನಾತ್ಮಕವಾಗಿ ಮಾಡಿರುವ ಕೆಲಸವಾಗಿದೆ. ನಮ್ಮ ಮೂಡಲಪಾಯಕ್ಕೆ ಹೆಚ್ಚು ಅಭಿನಯ ಕಂಡು ಬರುವುದಿಲ್ಲ. ಕಾರಣ ತಜ್ಞ ಭಾಗವತರು ಕಡಿಮೆ. ಹಾಡಿಗೆ ಮತ್ತು ಕುಣಿತಕ್ಕೆ ಹೆಚ್ಚು ಮಹತ್ವ ಕಾಣುತ್ತದೆ. ಅಭಿನಯ ಮತ್ತು ನರ್ತನ ಇವು ಅವಶ್ಯ. ಸಂಭಾಷಣೆ ಸಂಸ್ಕೃತ ಮಿಶ್ರವಾಗಿದೆ. ಸ್ವರ ವಿನ್ಯಾಸವಾದರೆ ಶಾಸ್ತ್ರೀಯಕ್ಕೆ ಅಳವಟ್ಟರೆ ಅಭಿನಯವು ತಾನಾಗಿಯೇ ಬರುತ್ತದೆ. ಮೂಲ ಶೈಲಿಯಲ್ಲಿ ಶಾಸ್ತ್ರೀಯ ಇದೆ. ಪ್ರತಿಯೊಂದು ಹಾಡುಕೂಡ ರಾಗದಿಂದಲೇ ಉಚ್ಚಾರಣೆ ಆಗುತ್ತದೆ. ಈ ರಾಗಗಳು ಪಕ್ವತೆಗನುಗುಣವಾಗಿ ಅಂಗನ್ಯಾಸ ಕರನ್ಯಾಸ ಮುಖಭಾವಗಳು ಚಲಿಸಿದಾಗ ಸುಂದರ ಕಲೆಯಾಗಲು ಸಾಧ್ಯ. ಸಿನಿಮಾ ಮಾಧ್ಯಮದಂತೆ ವರಮಾನವು ಕೂಡ ಮಾಧ್ಯಮದಂತೆ ಅವಶ್ಯವಾಗಿದೆ. ನಾಡಿನ ಕೀರ್ತಿಪಾತ್ರರಾದ ಈ ಜಾನಪದರಿಗೆ ಹಣದ ಅಡಚಣೆ. ವೇಷಭೂಷಣ ಕೊಳ್ಳಲು ಕಷ್ಟವಾಗಿದೆ. ಆದ್ದರಿಂದ ಮೂಡಲಪಾಯ ಹಿಂದುಳಿದಿದೆ. ಇದು ನನ್ನ ಅನಿಸಿಕೆ.

□

## ಶ್ರೀ ವಸಂತ ನಾರಾಯಣ ರಣ್ಣವರೆ, ಜಗ್ಗಲಿಗೆ ಕಲಾವಿದರು

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಸಂಸ್ಥೆಯು ನನ್ನನ್ನು ಗುರ್ತಿಸಿ ಈ ಕ್ಷೇತ್ರದ ಬಗ್ಗೆ ನನ್ನ ಅನುಭವವನ್ನು ಹಂಚಿಕೊಳ್ಳಲು ಕೇಳಿಕೊಂಡಿದ್ದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸುತ್ತಾ ಮೂರು ಪ್ರಶ್ನೆಗಳಿಗೆ ನನ್ನ ಅನಿಸಿಕೆಯನ್ನು ಉತ್ತರಿಸಲು ಬಹಳೇ ಸಂತೋಷವೆನಿಸುತ್ತದೆ.

**(೧) ಜಾನಪದ ವಿದ್ವಾಂಸರೆಂಬುವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಕೆಲಸದ ಬಗ್ಗೆ ನನ್ನ ಅನಿಸಿಕೆ ಈ ಕೆಳಗಿನಂತೆ ಇದೆ.**

ಜಾನಪದ ವಿದ್ವಾಂಸರೆಬುವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಸೇವೆ ನನಗೆ ತೃಪ್ತಿಕರವಾಗಿಲ್ಲ. ಯಾಕೆಂದರೆ ಜೀವನನಾಡಿಯಂತಿರುವ ಜಾನಪದವೆಂಬುದು ಸಾಮಾನ್ಯ ಜನರಲ್ಲಿ ಬೆರೆತು ಸಾಮಾನ್ಯ ಜನರ ನಾಡಿ ಮಿಡಿತವಾಗಿದೆ. ವಿದ್ವಾಂಸರೆಂಬುವರು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಬರೆದರಾಗಲಿ, ಹಾಡಿದರಾಗಲಿ, ಭಾಷಣ ಪ್ರಚಾರ ಮಾಡಿದರಾಗಲಿ ಪ್ರಾಚೀನ ಜಾನಪದ ಕಲೆಯು ಬೆಳೆಯುವದಿಲ್ಲಾ. ಸದರೀಯವರು ನೇರವಾಗಿ ಆ ಕ್ಷೇತ್ರಕ್ಕೆ ಹೋಗಿ ಕಲಾವಿದರನ್ನು ಗುರ್ತಿಸಿ ಅವರವರ ನೋವು ನಲಿವಿನ ಅನುಭವವನ್ನೇ ಗೀತೆಯನ್ನಾಗಿ ಮಾಡಿ ಹಾಡಿದಾಗ ಅದು ಎಲ್ಲರಿಗೂ ಸ್ಪಂದಿಸುತ್ತದೆ. ಜಾನಪದವಾಗುತ್ತದೆ.ವಿದ್ವಾಂಸರು ಸ್ವಾರ್ಥಿಯಾಗಿರಬಾರದು. ಎಲ್ಲಿ ಯಾವ ಭಾಗದಲ್ಲಿ ಈ ಕಲೆ ಅಡಗಿದೆ ಎಂಬುದನ್ನು ನಿಸ್ಪೃಹ ಭಾವದಿಂದ ಹುಡುಕಿ ತೆಗೆದು ಇದ್ದದ್ದನ್ನು ಇದ್ದಂತೆ- ಹೇಳುವ ಹಾಲಿನಂತಹ ಹೃದಯವುಳ್ಳವನಾಗಿರಬೇಕು. ಈ ವಿದ್ವಾಂಸರ ಭಿನ್ನಾಭಿಪ್ರಾಯದಲ್ಲಿ ಅನೇಕ ನಿಜವಾದ ಕಲಾಕಾರರು ಕಮರಿ ಹೋಗುತ್ತಿದ್ದಾರೆ. ವಿಶೇಷವಾಗಿ ಜಾನಪದ ಕಲೆಯೆ ಅರಿಯದಂತ ಜನರನ್ನು ದಯವಿಟ್ಟು ಸರಕಾರವು ಜಾನಪದ ವಿದ್ವಾಂಸನೆಂದು ಗುರುತಿಸಬಾರದು. ಬರೀ ಹಾಳೆಯ ಮೇಲಿನ ಪ್ರಮಾಣ ಪತ್ರಕ್ಕಿಂಥ ಜನರು ನೀಡುವ ಜನಾಭಿಪ್ರಾಯವೇ ಶ್ರೇಷ್ಠವಾಗಿರಬೇಕು. ಈ ಜಾನಪದ

ಕಲೆಗೆ ಅಕ್ಷರ ಜ್ಞಾನಕ್ಕಿಂತ ಮಸ್ತಕ ಜ್ಞಾನವೇ ಶ್ರೇಷ್ಠ. ಆದ್ದರಿಂದ ನನ್ನ ಅಭಿಪ್ರಾಯದಂತೆ ಈ ಜಾನಪದ ಇನ್ನೂ ಹೆಚ್ಚು ಬೆಳೆಯಬೇಕಾದರೆ ವಿದ್ವಾಂಸರೆಂಬುವರು ಆಸೆ ಆಮಿಷ ಬಿಡಬೇಕು. ನಿಸ್ವಾರ್ಥಿಯಾಗಿರಬೇಕು. ನಿರಹಂಕಾರಿಯಾಗಿರಬೇಕು. ಒಳ್ಳೆಯ ಗುಣಗಳೊಂದಿಗೆ ಮಾನವರಲ್ಲಿ ಬೆರೆತು ಪ್ರಗತಿ-ಪರ ಜಾನಪದ ಕಾರ್ಯಗಳನ್ನು ಮಾಡಿದರೆ ಇದು ಪ್ರಜ್ವಲವಾಗಿ ಬೆಳೆಯುತ್ತದೆ, ಉಳಿಯುತ್ತದೆ. ಇದು ನನ್ನ ಅನಿಸಿಕೆ.

(೨) ಜಾನಪದ ಕಲಾವಿದರಿಗಾಗಿ ಗ್ರಾಮಮಟ್ಟದಲ್ಲಿ ಜಾನಪದ ಕಲಾಮಂದಿರವನ್ನು ಸರಕಾರದಿಂದ ಕಟ್ಟಿಸುವ ವ್ಯವಸ್ಥೆ ಮಾಡಿಸಬೇಕು. ಕಲಾವಿದರಿಗೆ ಕೊಡಮಾಡುವ ಅಕಾಡೆಮಿಯಿಂದ ಸಿಗತಕ್ಕಂತಹ ಸೌಲಭ್ಯಗಳನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು. ಅಕಾಡೆಮಿ ಪ್ರಶಸ್ತಿ ಕಲಾವಿದರ ಸಂಖ್ಯೆ ಹೆಚ್ಚಿಸಬೇಕು. ಜಾನಪದ ಕಲೆಯನ್ನು ಆಗಾಗ ಪ್ರಕಟಿಸಲು ಕನಿಷ್ಠ ತಿಂಗಳಿಗೊಮ್ಮೆ ಗ್ರಾಮ ಮಟ್ಟದಲ್ಲಿ ಕಲಾಮೇಳದಲ್ಲಿ ಸರಕಾರ ನಡೆಸುವ ವ್ಯವಸ್ಥೆ ಮಾಡಬೇಕು. ಕಲಾವಿದರಿಗೆ ಸಹಾಯಧನ ಸಿಗುವಂತೆ ಮಾಡಬೇಕು. ಜಾನಪದ ಅಕಾಡೆಮಿಯಿಂದ ಗುರುತಿಸಲ್ಪಟ್ಟ ಎಲ್ಲಾ ಜಾನಪದ ಸಂಘಗಳಿಗೆ ಉಚಿತವಾಗಿ ವೇಷ -ಭೂಷಣ, ವಾದ್ಯ ಪರಿಕರಣ ಪೂರೈಸಬೇಕು. ಆಗಾಗ ಹೊಸದಾಗಿ ಹುಟ್ಟುವ ವಾದ್ಯಗಳನ್ನು ಕಲಾವಿದರಿಗೆ ಗ್ರಾಮ ಮಟ್ಟದಲ್ಲಿ ಸ್ವತ: ತಾವೇ ಬಂದು ಪರಿಚಯಿಸಬೇಕು ಹಾಗೂ ಧನ ಸಹಾಯವನ್ನು ನೀಡಬೇಕು. ಯೋಗ್ಯ ಕಲಾಕಾರರನ್ನು ಗುರುತಿಸಿ ಹೊರರಾಜ್ಯಗಳಿಗೆ ಕಳುಹಿಸಿ ಅಲ್ಲಿಯ ಕಲೆಯನ್ನು ತಿಳಿದುಕೊಳ್ಳಲು ಹಾಗೂ ನಮ್ಮ ಕಲೆಯನ್ನು ಪರಿಚಯಿಸಲು ಅವಕಾಶ ಕಲ್ಪಿಸಿಕೊಡಬೇಕು. ಹೀಗೆ ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಸಂಶೋಧಿಸಿ ನೀಡಿದಾಗ ಈ ಕಲೆಯು ಜೀವಂತವಾಗಿ ಉಳಿಯಲು ಸಾಧ್ಯವಿದೆ. ಈ ಕಲೆಯು ಉಳಿಯಲಿ-ಬೆಳೆಯಲಿ ಅನ್ನುವುದೆ ನನ್ನ ಅನಿಸಿಕೆ.

(೩) ಜಾನಪದ ಹಾಗೂ ಜನಪದ ಈ ಎರಡು ಶಬ್ದಗಳು ಬೇರೆ ಬೇರೆಯಾಗಿ ಕಂಡರೂ ನಾಣ್ಯ ಒಂದೆ ಮುಖ ಎರಡು. ಜಾನಪದ ಕಲೆ ಎಂಬುದು ಪ್ರಾಚೀನ ಕಾಲದಿಂದ ಅನುಸರಿಸಿದ ಕಲೆ, ನಾವು ಅದೇ ನಿಯಮದಂತೆ ಅನುಸರಿಸುವುದಾಗಿದೆ. ಆದರೆ ಜನಪದವೆಂದರೆ ನನ್ನ ಅರ್ಥದಲ್ಲಿ ಒಂದೊಂದು ಸಂದರ್ಭದಲ್ಲಿ ಒಂದೊಂದು ಸನ್ನಿವೇಶದಲ್ಲಿ ಆ ವಿಷಯಕ್ಕೆ ತಕ್ಕಂತೆ- ತತ್ಕಾಲದಲ್ಲಿಯೇ ಸೃಷ್ಟಿಸಿ ವ್ಯಕ್ತಪಡಿಸುವದಾಗಿದೆ. ಜಾನಪದ ಅಥವಾ ಜನಪದ ಕಲೆಯು ಬಹಳೇ ಮಹತ್ವದ ವಿಷಯವಾಗಿದೆ. ಹೃದಯದಲ್ಲಿ ಹದವಾದಾಗ ಆಮೇಲೆ ಪದವಾಗಿ ಹೊರಬರುತ್ತದೆ. ರೈತನು ಒಕ್ಕುವಾಗ, ಬಿತ್ತುವಾಗ ಕಾರ್ಮಿಕರು ಕೆಲಸ ಮಾಡುವಾಗ ವ್ಯಾಪಾರಿಯು ಜನಸ್ಪಂದದಲ್ಲಿದ್ದಾಗ ಹೀಗೆ ಎಲ್ಲಾ ಜನಾಂಗವು ಹೃದಯದ ನೋವುನಲಿವನ್ನಾಗಲಿ ಸಂತೋಷ ಕ್ಷಣಗಳನ್ನಾಗಲಿ

ತನ್ನದೇ ಹಾಡಿನ ಮುಖಾಂತರ ಕುಣಿಯುವ ಮುಖಾಂತರ ವ್ಯಕ್ತಪಡಿಸಿದಾಗ ಅದು ಕಲೆಯಾಗುತ್ತದೆ. ರಾಗಬದ್ಧ, ತಾಳಬದ್ಧ, ಲಯಬದ್ಧವಾಗಿ ಹಾಡಿ ಜನರು ಆನಂದಿಸುವಂತೆ ಮಾಡಿದರೆ ಅದುವೇ ಜಾನಪದ ಕಲೆಯಾಗುತ್ತದೆ.

ಈ ಜಾನಪದ ಕಲೆಯನ್ನು ಅನುಭವಿಸದ ಜನರೇ ಇಲ್ಲಾ, ಇದು ಎಲ್ಲಾ ಜನರಿಗೆ ಹಿಡಿಸಿ ಆನಂದಿಸಿ ತಮ್ಮ ನೋವು ನಲಿವುಗಳನ್ನು ಮರೆಯುವುದಾಗಿದೆ. ಈ ಜಾನಪದ ಕಲೆಯು ಪ್ರತಿಯೊಬ್ಬ ಮಾನವನ ಹೃದಯಕ್ಕೆ ದಿವ್ಯ ಔಷಧಿಯಾಗಿದೆ. ಆದುದರಿಂದ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಇನ್ನೂ ಹೆಚ್ಚಿನ ರೀತಿಯಲ್ಲಿ ಶ್ರಮವಹಿಸಿ ಈ ಕಲೆಯು ಯಾವಾಗಲೂ ಅಜರಾಮರವಾಗಿ ಉಳಿಯಲೆಂದು ನನ್ನ ಅನಿಸಿಕೆ.

## ಶ್ರೀ ಮುನಿವೆಂಕಟಪ್ಪ , ತಮಟೆ ಕಲಾವಿದರು

೧. ಜಾನಪದ ಕ್ಷೇತ್ರದಲ್ಲಿನ (ಸುಮಾರು ೪೦ ವರ್ಷಗಳ) ನನ್ನ ಅನುಭವವನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಜಾನಪದ ವಿದ್ವಾಂಸರೆಂಬುವವರು ಈ ಕ್ಷೇತ್ರಕ್ಕೆ ಮಾಡುತ್ತಿರುವ ನಿಸ್ವಾರ್ಥ ಸೇವೆ ತುಂಬಾ ಮೆಚ್ಚುವಂತಹದ್ದು. ಗ್ರಾಮೀಣ ಜನರ ಉಡುಗೆ ತೊಡುಗೆ, ಆಚಾರ-ವಿಚಾರ, ಗ್ರಾಮೀಣ ಸಂಸ್ಕೃತಿ ಬಗ್ಗೆ ಅದ್ಯಯನ ನಡೆಸಿ, ನಶಿಸಿ ಹೋಗದ ರೀತಿಯಲ್ಲಿ ಗ್ರಾಮೀಣ ಮೂಲ ಜಾನಪದ ಕಲೆಗಳನ್ನು ಸಂರಕ್ಷಿಸುವ ಕೆಲಸ ಜಾನಪದ ವಿದ್ವಾಂಸರ ಕೆಲಸವಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಮೂಲ ಜಾನಪದ ಕಲಾವಿದರ ಸ್ಥಿತಿ-ಗತಿಗಳನ್ನು ಸಮೀಕ್ಷೆ ಮಾಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ನಡೆಯಬೇಕು.

ಜಾನಪದ ಉದ್ಧರಿಸಲು ಮೊದಲಿಗೆ ನಗರ ಪ್ರದೇಶಗಳಲ್ಲಿ ಕುಳಿತು ಅದ್ಯಯನ ಮಾಡುತ್ತಿದ್ದರು. ಈಗ ಗ್ರಾಮೀಣ ಪ್ರದೇಶದ ಕಡೆ ಗಮನ ಹರಿಸಿ ಸಂಶೋಧನೆ ಮಾಡುತ್ತಿರುವುದು ಉತ್ತಮ ಕೆಲಸ. ಜಾನಪದ ಕಲಾವಿದರನ್ನು ಮುಖ್ತಾ ಭೇಟಿ ಮಾಡಿ ಅವರ ಸಂದರ್ಶನ ಮಾಡಿ ಅವರಿಗೆ ಪ್ರೋತ್ಸಾಹ ನೀಡುತ್ತಿರುವ ವಿದ್ವಾಂಸರ ಕಾರ್ಯ ಒಳ್ಳೆಯ ಉತ್ತಮ ಬೆಳವಣಿಗೆ ಎಂದರೆ ತಪ್ಪಾಗಲಾರದು.

ಜಾನಪದ ವಿದ್ವಾಂಸರು ಬಹಳ ಮುಖ್ಯವಾದ ಕೆಲಸ ಮಾಡಬೇಕೆಂದರೆ ಗ್ರಾಮೀಣ ಹಳ್ಳಿ ಜನರ ಮೂಲ ಕಸುಬುಗಳಾದ ಚಮ್ಮಾರಿಕೆ, ಕುಂಬಾರಿಕೆ, ನೇಯ್ಗೆ, ದೋಬಿ, ಭಜಂತ್ರಿಗಳವರು ಮೂಲ ಕಸುಬುಗಳನ್ನು ಬಿಟ್ಟು, ತನ್ನದೇ ಆದ ವೈಜ್ಞಾನಿಕ ಕಸುಬುಗಳಿಗೆ ಹೊಂದಿಕೊಂಡಿರುವುದರಿಂದ ಮೂಲ ಕಸುಬುಗಳ ಕಡೆ ಗಮನ ಹರಿಸುವಂತೆ ಪ್ರಯತ್ನ ಮಾಡುವುದು ಒಳ್ಳೆಯದು.

ಹಳ್ಳಿಯ ಜನರ ಬದುಕಿಗೆ ಕಷ್ಟ ಸುಖಗಳನ್ನು ಹಂಚಿಕೊಂಡು ಬಾಳುವ ಒಗ್ಗಟ್ಟಿನಿಂದ ರಾಗಿ ಬೀಸುವ ಹಾಡು, ಸೋಬಾನೆ, ಸುಗ್ಗಿ ಹಾಡುಗಳ ಪುನರುಜ್ಜೀವನಕ್ಕಾಗಿ

ವಿದ್ವಾಂಸರು ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಏರ್ಪಡಿಸಿದರೆ ಉತ್ತಮವಾದ ಬೆಳವಣಿಗೆ ಎಂದರೆ ತಪ್ಪಾಗಲಾರದು.

೨) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯು ಇತ್ತೀಚಿಗೆ ತನ್ನದೇ ಆದ ವಿಶಿಷ್ಟವಾದ ಕಾರ್ಯಕ್ರಮಗಳ ಜೊತೆಗೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಜಾನಪದ ಕಲೆಗಳ ಬಗ್ಗೆ ಯುವ ಕಲಾವಿದರಿಗೆ ತರಬೇತಿಗಳನ್ನು ಏರ್ಪಡಿಸುವುದು. ಗ್ರಾಮೀಣ ಪ್ರದೇಶದಲ್ಲಿ ವಿವಿಧ ಕಲೆಗಳನ್ನು ನಿಪುಣರಾದ ಕಲಾವಿದರನ್ನು ಒಂದೆಡೆ ಸೇರಿಸಿ ಅನುಭವ, ವಿಚಾರ ವಿನಿಮಯ ಏರ್ಪಡಿಸುವುದು. ಹಿಂದಿನ ಕಾಲದಲ್ಲಿ ಗ್ರಾಮೀಣ ಜನತೆ ಒಗ್ಗಟ್ಟಿನಿಂದ ಆಡುತ್ತಿದ್ದ ಜಾನಪದ ಕ್ರೀಡೆಗಳ ಬಗ್ಗೆ ಒತ್ತು ನೀಡುವುದು. ಜಾನಪದ ಕಲಾವಿದರ ಮಾಹಿತಿಯನ್ನು ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಹೊರತರುವುದು. ಜಾನಪದ ಕಲೆಗಳ ಬಗ್ಗೆ ಗ್ರಾಮಪಂಚಾಯಿತಿ ಹಾಗೂ ಹೋಬಳಿ ಮಟ್ಟದಲ್ಲಿ ಜಾನಪದ ಸಿದ್ಧಾಂತಗಳ ಬಗ್ಗೆ ಆಚಾರ-ವಿಚಾರ, ಸಂಸ್ಕೃತಿಯ ಸಂವಹನದ ಬಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು. ಜನಪದ ನೃತ್ಯಗಳು, ಜನಪದ ಸಂಗೀತ, ಜನಪದ ಪಾನೀಯಗಳು, ಜನಪದ ತಂತ್ರಜ್ಞಾನದ ಬಗ್ಗೆ ಹಾಗೂ ಮಹಿಳಾ ಜಾನಪದದ ಬಗ್ಗೆ ವಿಶೇಷ ಕಾಳಜಿ ವಹಿಸುವುದು.

೩) ಜಾನಪದ, ಜನಪದ ಕಲೆ ಎನ್ನುವುದು ಏನು ಎಂದರೆ ಇದು ನಮ್ಮ ಬದುಕಿನ ಸಮಾಚಾರ ಮುಂದಿನ ಜಾನಪದ ದಾರಿಯನ್ನು ಹುಡುಕಿಕೊಳ್ಳುವುದಕ್ಕೆ ನಮಗೆ ಜಾನಪದರು, ಜನಪದ ಕಲೆಗಳ ಬಗ್ಗೆ ಅರಿವು ಮುಖ್ಯ. ಜನಪದ ಕಲೆ ಮನುಷ್ಯನ ಸಮುದಾಯದ ಮನರಂಜನೆಯ ಕಲೆ. ಸದರಿ ಕಲೆಯು ಗ್ರಾಮೀಣ ಜನತೆಯ ಮನೋ ಉಲ್ಲಾಸದ ಜೊತೆಗೆ ಒಂದೆಡೆ ಸೇರಿ ಒಗ್ಗಟ್ಟಿನಿಂದ ಬದುಕುವ ಅವಕಾಶವನ್ನು ಮತ್ತು ಮುಂದಿನ ಪೀಳಿಗೆಗೆ ಶಾಶ್ವತವಾಗಿ ಬೆಳೆಸಿಕೊಂಡು ಉಳಿಸಿಕೊಂಡು ಹೋಗಲು ದಾರಿದೀಪವಾದ ಕಲೆ.

ಅನಕ್ಷರಸ್ಥ ಜನತೆಯಲ್ಲಿ ಉತ್ತಮ ಜಾನಪದ ಕಲೆ ಇದೆ ಎಂದರೆ ತಪ್ಪಾಗಲಾರದು. ಮಹಿಳೆಯರು ಅನೇಕ ಕಲೆಗಳ ಮುಖಾಂತರ ಗ್ರಾಮೀಣ ಬದುಕಿನ ಕಷ್ಟ ಸುಖ ದು:ಖಗಳಿಗೆ ಸ್ಪಂದಿಸುತ್ತಾರೆ. ಉದಾ:- ಮಗು ಅಳುತ್ತಿದ್ದ ಸಂದರ್ಭದಲ್ಲಿ ತಾಯಿ ಲಾಲಿ ಜೋಗುಳ ಹಾಡು ಹಾಡಿದರೆ ಹಾಡಿನ ಶಬ್ದದಿಂದ ಉಲ್ಲಾಸದಿಂದ ನಿದ್ದೆ ಮಾಡುವ ಗುರಿ ಹಾಡಿನಲ್ಲಿ ಅಡಕವಾಗಿದೆ.

ಕೊನೆಯಲ್ಲಿ ಒಂದು ಮಾತು ಹೇಳುವುದೇನೆಂದರೆ ಅಕಾಡೆಮಿಯು ನಿಜವಾದ ಗ್ರಾಮೀಣ ಕಲೆಯಲ್ಲಿ ನಿಪುಣರಾದ ವಯೋವೃದ್ಧರಾದ ಕಲಾವಿದರನ್ನು ಗುರ್ತಿಸಿ

ಪುರಸ್ಕಾರ ಮಾಡುವ ಕೆಲಸ ಆಗಬೇಕು. ಕಲಾವಿದರ ಬದುಕು ಜೀವನದ ಬಗ್ಗೆ ಅಧ್ಯಯನ ನಡೆಸಿ ಕಷ್ಟಕರ ಸ್ಥಿತಿಯಲ್ಲಿರುವ ಕಲಾವಿದರಿಗೆ ಆರ್ಥಿಕವಾಗಿ ನೆರವಾಗಬೇಕು ಎಂಬ ಅಂಶಗಳನ್ನು ನನ್ನ ಅನುಭವವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ❐

**ಶ್ರೀ ಭಾಸ್ಕರ ಕೊಗ್ಗ ಕಾಮತ್**, ಯಕ್ಷಗಾನ ಸೂತ್ರದ ಗೊಂಬೆಯಾಟದ ಕಲಾವಿದರು

ವಂದನೆಗಳು. ನೀವು ಪತ್ರ ಮೂಲಕ ಬರೆದು ವಿಚಾರಿಸಿರುವಂತೆ ಮೂರು ಅಮೂಲ್ಯ ಪ್ರಶ್ನೆಗಳಿಗೆ ನನ್ನ ಸ್ವಅನುಭವದ ನೆಲೆಯಲ್ಲಿ ಈ ಕೆಳಗೆ ಉತ್ತರಿಸಿದ್ದೇನೆ.

೧. ಜಾನಪದ ವಿದ್ವಾಂಸರೆಂಬುವವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಕೆಲಸದ ಬಗ್ಗೆ ನನ್ನ ಅಭಿಪ್ರಾಯ :

ಇತ್ತೀಚಿನ ದಿನಗಳಲ್ಲಿ ಜಾನಪದ ಸಂಶೋಧಕರು ಹಾಗೂ ವಿದ್ವಾಂಸರ ಸಂಖ್ಯೆ ಸಾಕಷ್ಟಿರುವ ವಿಚಾರ ನಿಮಗೆ ತಿಳಿದೇ ಇದೆ. ಹಾಗೂ ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಮಂದಿ ಜಾನಪದ ವಿಷಯದಲ್ಲಿ ಪಿಎಚ್.ಡಿ ಅಥವಾ ಡಾಕ್ಟರೇಟ್ ಇತ್ಯಾದಿ ಬಿರುದು-ಬಾವಲಿ ಪಡೆಯುತ್ತಿರುವ ಸುದ್ದಿ ಆಗಾಗ್ಗೆ ನೋಡುತ್ತಿರುತ್ತೇವೆ. ಆದರೆ ಈ ನಿಟ್ಟಿನಲ್ಲಿ ಕೆಲವು ಮಂದಿ ಉತ್ತಮ ಸಂಶೋಧಕರು, ವಿದ್ವಾಂಸರು ಸಾಕಷ್ಟು ಶ್ರಮ ವಹಿಸಿ ತಮ್ಮ ಕೊಡುಗೆಯನ್ನು ನೀಡಿರುವುದನ್ನು ನಾವು ಕಡೆಗಣಿಸುವಂತಿಲ್ಲ.

ಆದರೆ ಹೆಚ್ಚಿನ ವಿದ್ವಾಂಸರು ತಮ್ಮ ವಯಕ್ತಿಕ ಪ್ರತಿಷ್ಠೆಯ ನೆಲೆಯಲ್ಲಿ ಹಾಗೂ ಆರ್ಥಿಕ ಭದ್ರತೆಯಡಿ ಏನೋ ಒಂದಿಷ್ಟು ಮಾಡಿ ಮುಗಿಸಿ ತಮ್ಮ ಭವಿಷ್ಯವನ್ನು ಭದ್ರ ಮಾಡಿಕೊಂಡಿದ್ದಾರೆ. ಇದರಲ್ಲಿ ಹೆಚ್ಚಿನ ವಿದ್ವಾಂಸರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳದೆ ಕೇವಲ ಮಾಹಿತಿ ಸಂಗ್ರಹ, ಅನಿಸಿಕೆ, ನಿರೂಪಣೆಯಲ್ಲಿ ತಮ್ಮ ಸಾಧನೆ ತೋರಿದವರೆ ಬಹಳ ಮಂದಿ. ಜಾನಪದ ರಂಗದ ಯಾವುದೇ ಕ್ಷೇತ್ರವಿರಬಹುದು, ಕಲೆ ಹಾಗೂ ಕಲಾವಿದನಲ್ಲಿರುವ ಸಿಹಿ-ಕಹಿ, ಒಳಿತು-ಕೆಡುಕುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿಶ್ಲೇಷಿಸಿ ವಿದ್ವಾಂಸರಾದವರು ಬೆರಳೆಣಿಕೆಯಷ್ಟಿರಬಹುದು.

ಜಾನಪದ ವಿದ್ವಾಂಸರು ಹೆಚ್ಚಿನವರು ತಮಗೆ ಸುಲಭ ಕಂಡ ಕ್ಷೇತ್ರವನ್ನೇ ಆರಿಸಿಕೊಂಡು ಕೆಲಸ ಮಾಡಿದ್ದಾರೆ. ಆದರೆ ನನ್ನ ಅನಿಸಿಕೆಯಂತೆ ಇನ್ನೂ ಅಸಂಖ್ಯಾತ ವಿಶಿಷ್ಟ ಕಲೆಗಳು ಇಂದು ನಶಿಸುವ ಹಂತದಲ್ಲಿದ್ದರೂ ಕೂಡ ವಿಶ್ವವಿದ್ಯಾಲಯವಾಗಲಿ ವಿದ್ವಾಂಸರಾಗಲಿ ಆ ಕ್ಷೇತ್ರಗಳನ್ನು ಇನ್ನು ಆರಿಸಿಕೊಂಡಿಲ್ಲದಿರುವುದು ಆಶ್ಚರ್ಯವೆನಿಸಿದೆ.

ಈವರೆಗೆ ಅಸಂಖ್ಯಾತ ಜಾನಪದ ವಿದ್ವಾಂಸರು ಸಕ್ರಿಯವಾಗಿರಲಿ ಅಥವಾ ಯಾವುದೇ ರೀತಿಯಲ್ಲಾಗಲಿ, ತಮ್ಮ ಅಮೂಲ್ಯ ಅನುಭವದ ನೆಲೆಯಲ್ಲಿ ಮಾಡಿದ ಕಾರ್ಯಗಳು ದಾಖಲಾತಿಗಳು ಬರಹ (ಪುಸ್ತಕ) ಗಳು ಹೊರ ಬಂದಿರಬಹುದು. ಆದರೆ ಇಂತಹದ್ದರಿಂದ ಅವರು ಮಾಡಿದ (ಸಂಶೋಧನೆಯ ವಿಶ್ಲೇಷಣೆ) ಆಯಾಕ್ಷೇತ್ರದಲ್ಲಿ ಅಥವಾ ಅದನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಕಲಾವಿದರ ಗಮನಕ್ಕೆ ಬಂದಿದೆಯೆ? ಅಥವಾ ಇಂತಹ ವಿದ್ವಾಂಸರಿಂದ ಕಲೆ ತನ್ನತನ ಉಳಿಸಿಕೊಂಡಿದೆಯೆ? ಅನ್ನುವುದು ಬಹು ಮುಖ್ಯ. ಓರ್ವ ಜಾನಪದ ವಿದ್ವಾಂಸನಿಂದ ಒಂದು ಕಲೆ ಹಾಗೂ ಕಲಾವಿದ ತನ್ನ-ತನ ಅರಿತು, ಉಳಿದು -ಬೆಳೆದು ಬೆಳಗುವಲ್ಲಿ ಸಫಲವಾದರೆ ಅಂತಹವರು ನಿಜವಾದ ಅರ್ಥದಲ್ಲಿ ಜಾನಪದದ ಶ್ರೇಷ್ಠ ವಿದ್ವಾಂಸರೆನಿಸಿಕೊಳ್ಳಬಲ್ಲರು.

ಇಂದು ನನ್ನ ಅಭಿಪ್ರಾಯದಂತೆ ಜಾನಪದ ವಿದ್ವಾಂಸರು ಹಾಗೂ ಕಲಾವಿದರ ನಡುವಿನ ಅಂತರ ಬಹಳವಿದೆ. ವಿದ್ವಾಂಸರು ಶಿಕ್ಷಿತರಾಗಿದ್ದು, ಕಲಾವಿದರನೇಕರು ಅಶಿಕ್ಷಿತರಾಗಿರುವುದು ಒಂದು ಕಾರಣವಾದರೆ ಇನ್ನೊಂದುಕಡೆ ವಿದ್ವಾಂಸರ ಸಾಧನೆ, ವಿಶ್ಲೇಷಣೆ, ಅನಿಸಿಕೆ ಎಷ್ಟು ಉತ್ತಮವಾಗಿದ್ದರೂ ಕೂಡ, ಕಲೆಯನ್ನು ಮುಂದುವರಿಸಿಕೊಂಡು ಹೋಗುವ ಕಲಾವಿದನಿಗೆ, ನೈಜ ಸ್ಥಿತಿಯಲ್ಲಿ ಕಲೆಗೆ ಇನ್ನೂ ಮುಟ್ಟದಿರುವುದು ತಲುಪದಿರುವುದು, ತಿಳಿಯದಿರುವುದು, ದೊಡ್ಡ ಕಾರಣವಾಗಿದೆ. ಕಲೆ ಹಾಗೂ ಕಲಾವಿದನಿಗೆ ವಿದ್ವಾಂಸರು ಕನ್ನಡಿಯಂತಾದಾಗ ಮಾತ್ರ ಶ್ರಮ ಸಾರ್ಥಕವಾಗಬಹುದು ಇಲ್ಲದಿದ್ದಲ್ಲಿ ವಿರುದ್ಧ ದಿಕ್ಕಿನಲ್ಲಿ ಸಾಗುವ ನಿರರ್ಥಕ ಪ್ರಯತ್ನವಾಗಬಹುದು!

೨. ಈ ಹಿಂದೆ ನಾನು ಕೂಡ ಅಕಾಡೆಮಿಯ ಸದಸ್ಯನಾಗಿ ಕೆಲಸ ಮಾಡಿರುವುದರಿಂದ ಆ ಕಿಂಚಿತ್ ಅನುಭವದ ನೆಲೆಯಲ್ಲಿ ಈ ಪ್ರಶ್ನೆಗೆ ಉತ್ತರಿಸುತ್ತಿದ್ದೇನೆ.

ಪ್ರಪ್ರಥಮವಾಗಿ ಅಕಾಡೆಮಿಯ ಆರ್ಥಿಕ ಸ್ಥಿತಿಯನ್ನು ಬದಿಗಿರಿಸಿ ತಿಳಿಸುವುದಾದಲ್ಲಿ ಅಕಾಡೆಮಿ ತನ್ನೆಲ್ಲ ಇನ್ನಿತರ ಕೆಲಸಗಳನ್ನು ಬದಿಗೊತ್ತಿ ಈ ಕೆಳಗಿನ ವಿಷಯದ ಬಗ್ಗೆ ಖಂಡಿತ ಆದ್ಯತೆ ನೀಡಲೇಬೇಕಾಗಿದೆ.

೧ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕ್ಷೇತ್ರವಾರು ವಿಂಗಡನೆ, ಕಲಾಪ್ರಕಾರ ವಿಂಗಡನೆ, ಇದನ್ನಾಧರಿಸಿ ದುಡಿಯಿುವ ಕಲಾವಿದರ ಪರಿಚಯ ಹಾಗೂ ವಿಳಾಸ ಸಂಗ್ರಹ ಕಾರ್ಯ ಪುಸ್ತಕ ರೂಪದಲ್ಲಿ ಶೀಘ್ರದಲ್ಲೇ ಬರಬೇಕು, ಇದರಿಂದ ಕಲೆಯ ಬಗ್ಗೆ, ಕಲಾವಿದರ ಬಗ್ಗೆ ಅದರ ಇರುವಿಕೆ. ಸ್ಥಿತಿಗತಿ, ತಿಳಿಯಲು ಸಹಾಯವಾಗುತ್ತದೆ.

೨. ಇನ್ನು ಕೇವಲ ಯಕ್ಷಗಾನದ ಬಗ್ಗೆ ಮಾಡಬೇಕಾದ ಅತೀ ಶೀಘ್ರದ ಕೆಲಸವೆಂದರೆ ತೆಂಕು-ಬಡಗುತಿಟ್ಟುಗಳ ಪೂರ್ಣ ಪ್ರಮಾಣದ ಸಂಪ್ರದಾಯ ತೀರ್ಮಾನಿಸಬಲ್ಲ ಆಕರ ಗ್ರಂಥ ಸಿದ್ಧವಾಗಲೇಬೇಕು. ಇಲ್ಲದಿದ್ದರೆ ಯಕ್ಷಗಾನ ಅವರವರ ಮೂಗಿನ ನೇರಕ್ಕೆ ಬೇಕಾಬಿಟ್ಟಿಯಾಗಿ ಬೆಳೆಯಬಹುದು (ಬೆಳೆಯುತ್ತಿದೆ). ಎಲ್ಲರ ಒಕ್ಕೊರಲಿನ ಧ್ವನಿಯಿಂದ ಹೊರಬಂದ 'ಆಕರಗ್ರಂಥ' ಇಂದು-ಮುಂದಿನವರಿಗೆ ಆಸಕ್ತರಿಗೆ ಕಲೆಯ ಪೂರ್ತಿ ಪರಿಚಯ, ಸಂಪ್ರದಾಯ, ಬೇರೆ ಯಾರದೇ ಆಧಾರವಿಲ್ಲದೆ ತಿಳಿಸುವಂತಿರಬೇಕು.

೩. ಅಕಾಡೆಮಿ ಪ್ರಶಸ್ತಿ ಆಯ್ಕೆಯಲ್ಲಿ ಬದಲಾವಣೆಗೆ ಯೋಚಿಸಬೇಕು ಯಾಕೆಂದರೆ ಜಾನಪದ ತೆಕ್ಕೆಯಲ್ಲಿ ಅಸಂಖ್ಯಾತ ಕಲೆಗಳಿರುವುದರಿಂದ ಪ್ರತಿ ವರ್ಷವು ಕೂಡ ಸಾಧ್ಯವಾದಷ್ಟು ಹೊಸ ಕ್ಷೇತ್ರದ ಕಲಾವಿದರಿಗೆ (ಅರ್ಹರಿಗೆ ಮಾತ್ರ) ಪ್ರಶಸ್ತಿ ನೀಡಿ ಗೌರವಿಸಬೇಕು, ಆದರೆ ಪ್ರಶಸ್ತಿ ಸಂಖ್ಯೆ ಹೆಚ್ಚಾಗಬಾರದು.

೪ ಅಕಾಡೆಮಿ ನೀಡುತ್ತಿರುವ ಸವಲತ್ತುಗಳ ವಿವರಗಳನ್ನು ಎಲ್ಲಾ ಕಲಾವಿದರಿಗೂ ಪತ್ರ ಮೂಲಕ ಮಾಹಿತಿ ನೀಡಬೇಕು (ಉದಾಹರಣೆ ಮಾಶಾಸನ, ಚಿಕಿತ್ಸೆ ವೆಚ್ಚ ಇತ್ಯಾದಿ). ಪ್ರತಿ ಕಲಾವಿದರಿಗೂ ಅರ್ಜಿ ಕಳುಹಿಸಿಬೇಕು. ನಂತರ ಅಕಾಡೆಮಿಯಲ್ಲಿ ಕಲಾವಿದನ ಆಯ್ಕೆ ಆತನ ಯೋಗ್ಯತೆಯನ್ನನುಸರಿಸಿ ಮಾಡಬೇಕು. ಇದರಿಂದ ಎಲ್ಲಾ ಕಲಾವಿದರಿಗೆ ತಿಳುವಳಿಕೆ ಸಾಧ್ಯವಾಗುತ್ತದೆ.

೫. ನಶಿಸಿ ಹೋಗುತ್ತಿರುವ ಜಾನಪದ ಕಲೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಸಂಘ-ಸಂಸ್ಥೆಗಳನ್ನು ಅಕಾಡೆಮಿಯು ಖುದ್ದಾಗಿ ಭೇಟಿ ನೀಡಿ ಸರಕಾರದಿಂದ ಅವರಿಗೆ ಸಹಾಯಧನ ಸಿಗುವಂತೆ ಶಿಫಾರಸು ಮಾಡಬೇಕು.

೬ ಅಕಾಡೆಮಿ ಸದಸ್ಯರನ್ನು ಆಯ್ಕೆ ಮಾಡುವಾಗ ಕಲೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಕಲಾವಿದರನ್ನೇ ಆಯ್ಕೆ ಮಾಡುವಂತೆ ಸರಕಾರಕ್ಕೆ ಶಿಫಾರಿಸು ಮಾಡಬೇಕು ಇತ್ಯಾದಿ.

೩. ನಮ್ಮ ಜನ-ಜೀವನ ಸಂಸ್ಕೃತಿಯನ್ನು ಬಿಂಬಿಸುವ ಪ್ರಯತ್ನವೇ 'ಜಾನಪದ'. ನಮ್ಮ ಜನ-ಜೀವನ, ಧರ್ಮ, ಸಂಸ್ಕೃತಿಯನ್ನು ಸಂತೋಷದ ಮೂಲಕ ಮಾಧ್ಯಮವಾಗಿ ಅರಳಿದ ಫಲವೇ 'ಜಾನಪದ ಕಲೆ' .

ಈ 'ಜಾನಪದಕಲೆ' ಆಯಾ ಪರಿಸರದ ಕಟ್ಟುಪಾಡು, ಸಂಸ್ಕೃತಿ ಆಚರಣೆ ಧರ್ಮವನ್ನು ನಿರಂತರವಾಗಿರಿಸಿಕೊಂಡು ಮುಂದುವರಿಯುವುದೆ ಇದರ ಗುಣ ವಿಶೇಷ.

❑

**ತುಡುಮು ಮುನಿ ವೆಂಕಟಪ್ಪ,** ತುಡುಮು ವಾದ್ಯ ಕಲಾವಿದರು

---

೧) ಕರ್ನಾಟಕ ರಾಜ್ಯದಲ್ಲಿ ಜಾನಪದ ವಿದ್ವಾಂಸರು ಈ ಕ್ಷೇತ್ರದಲ್ಲಿ ಇನ್ನೂ ಮಾಡಬೇಕಾದ ಕೆಲಸ ತುಂಬಾ ಇದೆ. ಹಾಗೂ ತಾವು ಈಗ ಮಾಡುತ್ತಿರುವ ಕೆಲಸ ಕೇವಲ ನಗರ ಪ್ರದೇಶದ ಜನಗಳನ್ನು ದೃಷ್ಟಿಯಲ್ಲಿ ಇಟ್ಟು ಕೊಂಡು ಕೆಲಸ ನಿರ್ವಹಿಸದೇ ಗ್ರಾಮೀಣ ಪ್ರದೇಶದಲ್ಲಿ ಜಾನಪದ ಕಲಾವಿದರ ಪರಿಸ್ಥಿತಿ, ಅವರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪ್ರತ್ಯೇಕವಾಗಿ ಭೇಟಿ ಮಾಡಿ ಅವರಿಗೆ ಪರಿಹಾರ ಒದಗಿಸುವ ಕೆಲಸವಾಗಬೇಕು.

ಗಡಿ ಅಂಚಿನಲ್ಲಿರುವ ಗ್ರಾಮೀಣ ಜಾನಪದ ಕಲೆ, ಕಲಾವಿದರ ಮೂಲ ವಾದ್ಯಗಳು ಶಿಥಿಲಗೊಂಡಿದ್ದು, ಹೊಸದಾಗಿ ವಾದ್ಯಗಳನ್ನು ಖರೀದಿಸಲು ತೊಂದರೆ ಇರುವುದರಿಂದ ಪೂರಕ ವ್ಯವಸ್ಥೆ ಮಾಡಲು ಜಾನಪದ ಅಕಾಡೆಮಿ ಪ್ರಯತ್ನಿಸಬೇಕು.

೨) ಜಾನಪದ ಅಕಾಡೆಮಿ ಕಲಾವಿದರಾಗಿ ಕಲಾವಿದರ ವಿಚಾರದಲ್ಲಿ ಹೆಚ್ಚಿನ ಕೆಲಸ ಮಾಡಬೇಕಾದ ಅವಶ್ಯಕತೆ ಇದೆ. ಜಾನಪದ ಕಲೆ ಮುಂದಿನ ಪೀಳಿಗೆಗೆ ಉಳಿಯಬೇಕಾದರೆ ಅದರ ಕಷ್ಟ ಸುಖ ಆಗುಹೋಗುಗಳಿಗೆ ಸ್ಪಂದಿಸಬೇಕು. ಕಲಾವಿದರಿಗೆ ಈಗ ನೀಡುತ್ತಿರುವ ಮಾಶಾಸನ ೫೦೦-೦೦ ರಿಂದ ೧೦೦೦-೦೦ ಮಾಡಬೇಕು. ಮನೆ ಮನೆಯಲ್ಲಿ ಜಾನಪದ ಕಲಾವಿದರು ಇರುವುದರಿಂದ ಅದರ ಪ್ರಾಶಸ್ತ್ಯ ಮತ್ತು ಮೌಲ್ಯವನ್ನು ಹೆಚ್ಚಿಸಬೇಕಾಗಿದೆ.

- ಪ್ರಶಸ್ತಿ ಕಲಾವಿದರಿಗೆ ಜಿಲ್ಲಾ ಕೇಂದ್ರದಲ್ಲಿ ಒಂದು ನಿವೇಶನ ನೀಡಲು ಕ್ರಮಗೊಳಿಸಬೇಕು.
- ಹಿರಿಯ ಜಾನಪದ ಕಲಾವಿದರು ಮೃತಪಟ್ಟ ಸಂದರ್ಭದಲ್ಲಿ ಅವರ ಕುಟುಂಬದ ಸದಸ್ಯರಿಗೆ ಕಲೆಯನ್ನು ಮುಂದುವರಿಸಲು ಅಕಾಡೆಮಿ ಒಂದು ಸೇತುವೆಯಾಗಿ ಅಗತ್ಯ ನಿಯಮ ರೂಪಿಸಬೇಕು,

- ಕಲಾವಿದರಿಗೆ ಕನಿಷ್ಟ ೨ ಲಕ್ಷದವರೆಗೆ ಜೀವವಿಮೆ ಮಾಡಬೇಕು.
- ಕಲಾವಿದರಿಗೆ ಉಚಿತ ಬಸ್ ಪಾಸ್ ನೀಡಬೇಕು.
- ಉಚಿತ ವೈದ್ಯಕೀಯ ಸೇವೆಗೆ ಅವಕಾಶ ಕಲ್ಪಿಸಬೇಕು.
- ಕಲಾವಿದರಿಗೆ ಅಕಾಡೆಮಿಯಿಂದ ಗುರುತಿನ ಚೀಟಿ ನೀಡಬೇಕು,
- ಜಾನಪದ ಅಕಾಡೆಮಿ ಕಲಾವಿದರ ಸಾಧನೆ ಬಗ್ಗೆ 'ಜಾನಪದ ಸುದ್ದಿ' ಎಂಬ ಪತ್ರಿಕೆ ಬಿಡುಗಡೆ ಮಾಡಿ ಎಲ್ಲಾ ಕಲಾವಿದರಿಗೆ ಮುಟ್ಟುವ ಕ್ರಮ ಕೈಗೊಳ್ಳಬೇಕು.
- ಗ್ರಾಮೀಣ ಪ್ರದೇಶದಲ್ಲಿ ಹಿಂದಿನ ಜಾನಪದ ನಾಟಿ ವೈದ್ಯಪದ್ಧತಿ ಬಗ್ಗೆ ಅಕಾಡೆಮಿ ಕೆಲಸ ನಿರ್ವಹಿಸಬೇಕು.

೩) ಜಾನಪದ ಕಲೆ ಎಂಬುವುದು ವಂಶಪಾರಂಪರ್ಯವಾಗಿ ಬಂದಂತಹ ಗಂಡು ಕಲೆ. ಒಬ್ಬರಿಂದ ಒಬ್ಬರಿಗೆ ವಿನಿಮಯ ಮಾಡಿಕೊಂಡ ಕಲೆ ಇದು. ನಿದ್ದೆ ಮಾಡುವ ವ್ಯಕ್ತಿಯನ್ನು ಬಡಿದೆಬ್ಬಿಸುವ ಕಲೆ. ಮನಸ್ಸಿಗೆ ನೆಮ್ಮದಿ, ಸಂತೋಷ, ಸುಖ ದು:ಖಗಳನ್ನು ಮರೆಸುವಂತಹ ಕಲೆ. ಸಮುದಾಯವನ್ನು ಒಂದೆಡೆ ಸೇರಿಸಿ ಒಗ್ಗಟ್ಟು ಶಾಂತಿ, ಮೂಡಿಸುವ ಕಲೆ. ಗ್ರಾಮೀಣ ಜನ ಒಗ್ಗಟಿನಿಂದ ಬದುಕುವ ದಾರಿಯನ್ನು ಕಲಿಸುವ ಕಲೆಯಾಗಿದೆ.

**ಎಂ.ಎಂ.ಹಾಲಯ್ಯ,** ದೊಡ್ಡಾಟದ ಕಲಾವಿದರು

---

೧) ಜಾನಪದ ವಿದ್ವಾಂಸರು ಜಾನಪದ ಕ್ಷೇತ್ರಕ್ಕೆ ಮಾಡುವ ಕೆಲಸವು ಬಹಳ ಅಮೂಲ್ಯವಾದದ್ದು ಮತ್ತು ಅಪಾರವಿದೆ. ಅವರು ಗ್ರಾಮಾಂತರ ಪ್ರದೇಶದಲ್ಲಿರುವ ಅನೇಕ ರೀತಿಯ ಜಾನಪದ ಕಲಾವಿದರನ್ನು ಗುರ್ತಿಸಿ ಕಲಾ ಕಮ್ಮಟಗಳನ್ನು ಹಾಗು ಪ್ರದರ್ಶನಗಳನ್ನು ಮಾಡಬೇಕು, ಏಕೆಂದರೆ ವಿದ್ವಾಂಸರು ತಮ್ಮ ಅನಿಸಿಕೆಗಳನ್ನು ಗ್ರಂಥಗಳ ಮೂಲಕ ಹಾಗೂ ಪ್ರವಚನಗಳ ಮೂಲಕ ಕಾರ್ಯಗತ ಮಾಡುತ್ತಾರೆ. ಆದರೆ ಕಲಾವಿದರು ವಿದ್ವಾಂಸರಲ್ಲದಿದ್ದರೂ. ನಿತ್ಯ ಜೀವನದಲ್ಲಿ ಅವರನ್ನು ಗುಂಪು ಸಂಘಟಿಸಿ ಆದರಿಂದ ಕಲಾ ಪ್ರದರ್ಶನದ ಮೂಲಕ ತಮ್ಮ ವಿದ್ವತ್ತನ್ನು ಜನರಿಗೆ ತೋರಿಸುತ್ತಾರೆ. ಹಲವಾರು ವಿದ್ವಾಂಸರು ಸ್ವಯಂ ಕಲಾವಿದರು ಆಗಿರುತ್ತಾರೆ. ಇಂಥ ವಿದ್ವಾಂಸಕು ಗ್ರಾಮಾಂತರ ಕಲಾವಿದರನ್ನು ಸಂಪರ್ಕಿಸಿ ಜೊತೆಗೆ ತಮ್ಮ ವಿದ್ವತ್ತನ್ನು ಕ್ರೋಢೀಕರಿಸಿದಾಗ ಜಾನಪದ ಕ್ಷೇತ್ರಕ್ಕೆ ಒಳ್ಳೆಯ ಮೆರಗು ಬರುತ್ತದೆ. ಈ ರೀತಿ ಜಾನಪದ ವಿದ್ವಾಂಸರು ಮೇಲೆ ಕಾಣಿಸಿದ ವಿಷಯಗಳಿಗೆ ಸ್ಪಂದಿಸಿದಾಗ ಜಾನಪದ ಅಕಾಡೆಮಿಗೂ ಜಾನಪದ ವಿದ್ವಾಂಸರಿಗೂ ಜಾನಪದ ಕಲಾವಿದರಿಗೂ ಒಳ್ಳೆ ಶ್ರೇಯಸ್ಸು ಸಿಗುತ್ತದೆ.

೨) ಜಾನಪದ ಅಕಾಡೆಮಿಯು ಕಲಾವಿದರನ್ನು ಗುರ್ತಿಸಿ ಯಾವ ಯಾವ ಕಲಾವಿದರು ನಿಸರ್ಗದತ್ತವಾಗಿ ಯಾವ ಯಾವ ಕಲೆಯಲ್ಲಿ ಪರಿಣಿತಿ ಹೊಂದಿರುತ್ತಾರೆ ಎಂಬುವುದನ್ನು ಜಾನಪದ ಅಕಾಡೆಮಿಯ ಜಿಲ್ಲಾ ಸದಸ್ಯರು ತಮ್ಮ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಂಪರ್ಕಿಸಿ ಕಲಾವಿದರನ್ನು ಗುರ್ತಿಸಬೇಕು. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶದ ಕಲಾವಿದರು ರೈತಾಪಿವರ್ಗಕ್ಕೆ ಸೇರಿದವರು, ಹಾಗೂ ಕೂಲಿಕಾರರು, ಗಿರಿಜನರು, ಹರಿಜನರು ಹೆಚ್ಚಾಗಿದ್ದು ಆರ್ಥಿಕ ಪರಿಸ್ಥಿತಿಯಲ್ಲಿ ಹಿಂದುಳಿದವರಾಗಿರುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಹಿರಿಯ ಕಿರಿಯ ಬಡವ

ಬಲ್ಲಿದ ಅಕ್ಷರಸ್ಥ ನಿರಕ್ಷರಸ್ಥ ಎಂಬ ಭಾವನೆಯಿಲ್ಲದೆ ಪ್ರೋತ್ಸಾಹಿಸಬೇಕು. ಹಾಗೂ ಕಲಾವಿದರಲ್ಲಿರತಕ್ಕಂತ ಪ್ರತಿಭೆಯನ್ನು ಧ್ವನಿಮುದ್ರಣ ಮಾಡಬೇಕು. ಅವರಿಗೆ ಉಚಿತ ವೈದ್ಯಕೀಯ ಸೌಲಭ್ಯ, ನಿವೇಶನ ರಹಿತರಿಗೆ ಮನೆ, ಅಂಧರಿಗೆ, ವೃದ್ಧರಿಗೆ, ಅಂಗವಿಕಲರಿಗೆ ಬಸ್ ಪಾಸ್ ಸೌಲಭ್ಯ ಒದಗಿಸಬೇಕು. ಕಲಾವಿದರಿಗೆ ಮಾಸಾಶನ ಮಂಜೂರು ಮಾಡುವಾಗ ಪ್ರತ್ಯಕ್ಷ ಸಂದರ್ಶನ ಕರೆದು ಅವರ ಅರ್ಹತೆಯ ಮೇಲೆ ಮಾಸಾಶನ ಮಂಜೂರು ಮಾಡಬೇಕು. ಎಲ್ಲಾ ಕಲಾವಿದರಿಗೂ ಒಂದೇ ತರಹ ಮಾಸಾಶನ ಗೌರವವಲ್ಲ. ನಶಿಸಿ ಹೋಗುತ್ತಿರುವ ಜಾನಪದ ಕಲೆಯನ್ನು ಜಾನಪದ ಅಕಾಡೆಮಿಯವರು ರಕ್ಷಿಸುವುದು ಆದ್ಯ ಕರ್ತವ್ಯವಾಗಿದೆ.

೩) ಜಾನಪದವು ಪುರಾತನ ಇತಿಹಾಸವನ್ನು, ಕಲೆಯನ್ನು, ಸಂಸ್ಕೃತಿಯನ್ನು, ಪರಿಸರವನ್ನು ಜಾನಪದ ಹಾಡುಗಳ ಮೂಲಕ, ವೇಷಭೂಷಣಗಳ ಕುಣಿತಗಳ ಮೂಲಕ, ಹಿಂದಿನ ಕತೆಗಳನ್ನು ಉದಾಹರಣೆಗೆ ಹಬ್ಬ ಹರಿದಿನಗಳಲ್ಲಿ ಹಾಡುವ ದೊಡ್ಡಾಟ, ಬಯಲಾಟ, ತೊಗಲು ಗೊಂಬೆಯಾಟ, ಕೋಲಾಟ, ಸುಗ್ಗಿ ಕುಣಿತಗಳು, ಹರಟೆ ಹಾಡುಗಳು, ಕಿನ್ನರಿ ಜೋಗಿಗಳು, ಗೊಂದಲಿಗರು ಜಾನಪದ ಹಾಡುಗಳನ್ನು ಹಾಡುವುದು ಜಾನಪದ. ಜನಪದ ಜನರಾಡುವ ಭಾಷೆಯು ಜಾನಪದವಾಗಿ ಎರಡು ಶಬ್ದಗಳ ಅರ್ಥ ಒಂದೇ ಆಗಿದ್ದು ಕೆಲವು ಪ್ರದೇಶವಾರು ಸ್ವಲ್ಪ ವ್ಯತ್ಯಾಸವಿದ್ದರೂ, ಅದರ ಮೂಲ ಒಂದೇ ಆಗಿರುತ್ತದೆ. ಇದರ ಗುಣಸ್ವಭಾವ ಜನ ಸಾಮಾನ್ಯರನ್ನು ಸಂತೈಸುತ್ತದೆ. ಜನರಲ್ಲಿ ಐಕ್ಯತೆ, ಭಾವೈಕ್ಯತೆ ಮತ್ತು ಸಮಾಜದ ಎಲ್ಲಾ ಜಾತಿ ವರ್ಗಗಳನ್ನು ಒಂದುಗೂಡಿಸುತ್ತದೆ. ಮದುವೆ ಮುಂಜಿಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಎಲ್ಲಾ ಜಾತಿಯ ಜನರನ್ನು ಒಂದುಗೂಡಿಸಿ ಸಮಾಜದ ಸುಖ ಶಾಂತಿ ನೆಮ್ಮದಿಯನ್ನುಂಟು ಮಾಡುತ್ತದೆ. ಜನಪದ ಈಗಿನ ಸಂಸ್ಕೃತಿಗೆ ಅನುಗುಣವಾಗಿ ಇಂದಿನ ಕಲೆಯನ್ನು ಪ್ರತಿಬಿಂಬಿಸುತ್ತದೆ.

❐

**ಬಸವೇಗೌಡ,** ಭಾಗವಂತಿಕೆ ಕಲಾವಿದರು

ತಾವು ತಮ್ಮ ಪತ್ರದಲ್ಲಿ ಮೂರು ಪ್ರಶ್ನೆಗಳನ್ನು ಕಳುಹಿಸಿದ್ದು ನನಗೆ ತೋಚಿದಂತೆ ಅವುಗಳಿಗೆ ಉತ್ತರಿಸುವ ಪ್ರಯತ್ನ ಮಾಡಿರುತ್ತೇನೆ.

೧. ಜಾನಪದ ವಿದ್ವಾಂಸರೆನಿಸಿಕೊಂಡ ಕೆಲವು ಗಣ್ಯರು ಕೇವಲ ಜನಪದ ಸಾಹಿತ್ಯದ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಅವರು ಜನಪದ ಕಲಾವಿದರ ಅಥವಾ ಕಲೆಗಳ ಉಳಿವಿಗಾಗಿ ಶ್ರಮಿಸುತ್ತಿಲ್ಲ, ತಮ್ಮ ಸಂಶೋಧನೆಗಾಗಿ ಕಲಾವಿದರನ್ನು ಭೇಟಿ ಮಾಡಿ ಕೆಲವೊಮ್ಮೆ ಅಲ್ಪ ಸ್ವಲ್ಪ ಹಣನೀಡಿ ಕಣ್ಮರೆಯಾಗುತ್ತಿದ್ದಾರೆ. ಅವರಿಗಿರುವ ವಿಶೇಷ ಆದರ ಗೌರವಾದಿಗಳು ಕಲಾವಿದರಿಗೆ ಇಲ್ಲದಂತಾಗಿದೆ.

೨. ಜಾನಪದ ಆಕಾಡೆಮಿಯು ಜನಪದ ಕಲಾವಿದರಿಗೆ ಹಾಗೂ ಕಲೆಯ ಅಭಿವೃದ್ಧಿಗೆ ಮಾಡಬೇಕಾದ ಕೆಲಸಗಳು ಹಲವಾರು ಇವೆ. ಅವುಗಳಲ್ಲಿ ಪ್ರಮುಖವಾದವುಗಳು.

೧) ಆರ್ಥಿಕವಾಗಿ ದುರ್ಬಲ ಕಲಾವಿದರನ್ನು ಗುರ್ತಿಸಿ ಅವರಿಗೆ ಮಾಶಾಸನ ನೀಡುವುದು. ಅವರಿಗೆ ಉಚಿತ ವೈದ್ಯಕೀಯ ಸೌಲಭ್ಯ ದೊರೆಯುವಂತೆ ಮಾಡುವುದು.

೨) ಜಾನಪದ ಕಲೆಗಳು ಕೇವಲ ''ಮೆರವಣಿಗೆ ಕಲೆ'' ಗಳಾಗುತ್ತಿವೆ. ಇವುಗಳ ಪ್ರದರ್ಶನಕ್ಕೆ ಸೂಕ್ತ ವೇದಿಕೆ ನಿರ್ಮಿಸುವುದು.

೩.) ಆಸಕ್ತರಿಗೆ ಜನಪದ ಕಲೆಗಳನ್ನು ಕಲಿಸುವ 'ಕಲಾಶಾಲೆ' ಮಾದರಿಯ ಸಂಸ್ಥೆಯ ಸ್ಥಾಪನೆ ಮಾಡಬೇಕು.

೪) ಎಲ್ಲಾ ಜಾನಪದ ಕಲೆಗಳ ಸಂಗ್ರಹ ಮತ್ತು ರಕ್ಷಣೆ ವೈಜ್ಞಾನಿಕವಾಗಿ ಹಾಗೂ ವ್ಯವಸ್ಥಿತವಾಗಿ ನಡೆಯಬೇಕು.

೫) ವಿವಿಧ ಮಾಧ್ಯಮಗಳಲ್ಲಿ ಜನಪದ ಕಲೆಗಳ ಪ್ರದರ್ಶನ ಮತ್ತು ಪ್ರಚಾರ ಆಗಬೇಕು.

೬) ವಿದೇಶ ಪ್ರವಾಸಕ್ಕೆ ಶಾಸ್ತ್ರೀಯ ಕಲೆಗಳ ಬದಲಾಗಿ ಜನಪದ ಕಲಾವಿದರನ್ನು ಕಳುಹಿಸಬೇಕು.

೭) ವಿವಿಧ ರಾಜ್ಯಗಳಲ್ಲಿ ಜನಪದ ಕಲಾವಿದರ ಪ್ರವಾಸ ಮತ್ತು ಪ್ರದರ್ಶನವನ್ನು ನಡೆಸಿ ಪ್ರಚಾರಾಂದೋಲನ ನಡೆಸಬೇಕು.

೮) ಕಲಾವಿದರಿಗೆ ವಾದ್ಯೋಪಕರಣಗಳನ್ನು ಕೊಳ್ಳಲು ಆರ್ಥಿಕ ಸಹಾಯ ನೀಡಬೇಕು.

೯) ಜನಪದ ಕಲಾವಿದರಿಗೆ ಉಳಿದ ಶಾಸ್ತ್ರೀಯ ಕಲೆಗಾರರಿಗೆ ದೊರಕುವ ಮಾನ್ಯತೆ ದೊರೆಯಬೇಕು.

೧೦) ಪ್ರಶಸ್ತಿ ವಿಜೇತ ಕಲಾವಿದರು ಅಥವಾ ಅವರ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು.

೧೧) ವಾರ್ಷಿಕ ಜನಪದ ಮೇಳಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನಿಯಮಿತವಾಗಿ ನಡೆಸಬೇಕು.

೩. ಜಾನಪದ ಕಲೆ ಎನ್ನುವುದು ಸಕಲ ಕಲೆಗಳ ಮೂಲ. ಅದು ನಮ್ಮ ಸಂಸ್ಕೃತಿಯ ಮೂಲ. ನಾಗರೀಕತೆಯ ಉಗಮದೊಡನೆ ಜಾನಪದಕಲೆಯ ಉಗಮವಾಗಿದೆ.ಮಾನವ ತನ್ನ ಸಂಭ್ರಮವನ್ನು ವ್ಯಕ್ತಪಡಿಸಲು, ಧಾರ್ಮಿಕ ವಿಧಿವಿಧಾನಗಳನ್ನು ಆಚರಿಸುವ ಸಂಧರ್ಭದಲ್ಲಿ ಹಾಡಿ, ಕುಣಿದದ್ದೇ ಈಗಿನ ಜಾನಪದ. ಜಾನಪದವು ತನ್ನ ನೆಲದ ಸೊಗಡನ್ನು ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿದೆ. ಆದ್ದರಿಂದ ಸ್ಥಳದಿಂದ ಸ್ಥಳಕ್ಕೆ. ಪರಿಸರದಿಂದ ಪರಿಸರಕ್ಕೆ ಜನಪದ ಕಲೆಗಳು ವ್ಯತ್ಯಾಸವನ್ನು ಪ್ರದರ್ಶಿಸುತ್ತವೆ ಎನ್ನುವುದು ನನ್ನ ಅಭಿಮತ. ಇದು ನಿಮಗೆ ಅನುಕೂಲವಾದರೆ ನನ್ನ ಪ್ರಯತ್ನ ಸಫಲ ಎಂದು ಭಾವಿಸುತ್ತೇವೆ.

## ಗೋವಿಂದಗೌಡಾ

೧) ೧. ಜಾನಪದ ವಿದ್ವಾಂಸರ ಕಾರ್ಯಗಳ ಮೌಲ್ಯಮಾಪನ ಮಾಡುವ ಸಾಮರ್ಥ್ಯ ನನಗಿಲ್ಲ. ನಾನೊಬ್ಬ ಜಾನಪದ ಕಲಾವಿದ. ಈ ಕಲೆಯ ಉಳಿವಿಗಾಗಿ ವಿದ್ವಾಂಸರು ತುಂಬಾ ಪರಿಶ್ರಮ ವಹಿಸುತ್ತಿರುವುದು ನನಗೆ ತಿಳಿದಿದೆ. ನಮ್ಮ ನಾಡಿನಲ್ಲಿ ಜಾನಪದ ಕಲೆಗಳ ಹಾಡುಗಳ ಸಂಗ್ರಹಣೆ ಮತ್ತು ರಕ್ಷಣೆ ಕುರಿತು ಅನೇಕ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಇನ್ನು ಮುಂದೆ ಅವುಗಳ ಅಭ್ಯಾಸ ಪರಿಶೀಲನೆ ಮುಂತಾದ ಕಾರ್ಯಗಳು ನಡೆಯಬೇಕು.

೨) ಜಾನಪದ ವಿದ್ವಾಂಸರೆಂಬುವವರು ಜಾನಪದದ ಬಗ್ಗೆ ಆಸಕ್ತಿ ಉಳ್ಳವರಾಗಿರುತ್ತಾರೆ. ಅವರು ಜ್ಞಾನ ಸಂಪತ್ತನ್ನು ಬಾಯಿಯಿಂದ ಕೇಳಿ ಸಂಗ್ರಹಿಸಿ ಒಳ್ಳೆಯದು ಎನಿಸಿದವುಗಳನ್ನು ಆಯ್ಕೆ ಮಾಡಿ ಹಲವಾರು ಕತೆಗಳಲ್ಲಿ ಸಂಪಾದಿಸುತ್ತಿರುವುದು ಒಳ್ಳೆಯ ವಿಚಾರವಾಗಿದೆ ಎಂದು ನಾನು ತಿಳಿಸುತ್ತೇನೆ.

೩) ಜಾನಪದ ವಿದ್ವಾಂಸರು ಎಂಬುವರು ಜಾನಪದ ಕಲೆಯ ಕುರಿತು, ಸಂಗೀತದ ಕುರಿತು, ನಾಡಿನ ಸಂಸ್ಕೃತಿ, ಆಚಾರದ ಕುರಿತು ಸಂಶೋಧನೆ ಮಾಡಿ ಅದನ್ನು ಬೆಳೆಸಿಕೊಂಡು ನಮ್ಮ ತನದ ಅರಿವು ನಮಗಾಗುವುದರ ಜೊತೆ ನಮ್ಮ ಮುಂದಿನ ಪೀಳಿಗೆಯವರಿಗೆ ರಕ್ಷಿಸಿಕೊಂಡು ಹೋಗುವಂತೆ ನೋಡಿಕೊಳ್ಳುತ್ತಿರುವುದು ಆದ್ಯ ಕರ್ತವ್ಯವಾಗಿದೆ. ಇಂಥ ವಿಚಾರಗಳು ಮುಂದಿನ ಜನಾಂಗಕ್ಕೆ ದಾರಿದೀಪವಾಗಿದೆ ಎಂದು ತಿಳಿಸುತ್ತೇನೆ.

೪) ಜನಪದದಲ್ಲಿಯ ಕಲ್ಪನಾ ಶಕ್ತಿ, ಯುಕ್ತಿ, ಚಮತ್ಕಾರ, ತಂತ್ರ, ಕೌಶಲ್ಯವನ್ನು ಬೆಳೆಸಿಕೊಂಡು ಹೋಗುವಂತೆ ನಮ್ಮಲ್ಲಿಯ ದೈಹಿಕ, ಮಾನಸಿಕ, ಸ್ಥಿರತೆಯ ಕುರಿತು ಇರುವಂತೆ ನೋಡಿಕೊಳ್ಳುತ್ತಿರುವದು ನನಗೆ ತಂಬಾ ಸಂತೋಷವನ್ನು ಉಂಟುಮಾಡಿದೆ ಎಂದು ನಾನು ಬಯಸುತ್ತೇನೆ.

೫) ಜನಪದ ಗೀತೆಗಳಲ್ಲಿ ಅಡಗಿರುವ ಸಂಸ್ಕೃತಿಯ ಅಧ್ಯಯನ ನಡೆಸಿ ಜನಪದ ಗೀತೆಗಳ ಪ್ರಸಾರ, ಕಲಿಕೆ, ಹಾಡುಗಾರಿಕೆ ಸಂಗೀತದ ಕುರಿತು ವಿಂಗಡಿಸಿ ಮುಂದಿನ ತಲೆಮಾರಿನವರಿಗೆ ಅದರ ಸ್ಪಷ್ಟವಾದ ಕಲ್ಪನೆ ಮನವರಿಕೆ ಮಾಡಿಕೊಡುತ್ತಿರುವುದು ಇಂದಿನ ಸಮಾಜಕ್ಕೆ ದಾರಿದೀಪವಾಗಿದೆಯೆಂದು ತಿಳಿಸುತ್ತೇನೆ.

೬) ಬಾಯಿಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಹೆಜ್ಜೆಯಿಂದ ಹೆಜ್ಜೆಗೆ ಹರಿದು ಬಂದ ಜಾನಪದವು ಸಂಪೂರ್ಣ ನಶಿಸಿ ಹೋಗುವ ಪೂರ್ವದಲ್ಲಿ ಈ ಕ್ಷೇತ್ರದಲ್ಲಿ ಕಾರ್ಯ ಕೈಕೊಂಡು ಬರಹ ರೂಪಕ್ಕೆ ಇಳಿಸಿದ ಸಾಹಿತಿಗಳಿಗೆ ಪ್ರೋತ್ಸಾಹಿಸಿ ನಮ್ಮಂಥವರು (ಹಳೆಯ ತಲೆಮಾರಿನವರು) ಅವರಿಗೆ ಸಹಾಯ ಮಾಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ನಾನು ಬಯಸುತ್ತೇನೆ.

೭) ಜನಪದವು ಸಹಜ ಸ್ವಭಾವದಿಂದ ತುಂಬಿರುವಂತಹದ್ದು, ಅದರಲ್ಲಿ ಅನುಭಾವವಿದೆ. ಅನುಭೂತಿಯಿದೆ. ಜಾನಪದ ಕವಿಗಳು ಸ್ವಾರ್ಥ ಸಾಧನೆಗಾಗಿ ಅನ್ಯರನ್ನು ಹೊಗಳ ಹೊರಟವರಲ್ಲ. ಅವರು ನಿಷ್ಕಾಮಕರ್ಮರು. ತಾವು ಕಂಡದ್ದನ್ನು ಕೇಳಿದ್ದನ್ನು ಅನುಭವಕ್ಕೆ ಬಂದ ನೋವು-ನಲಿವುಗಳನ್ನು ಮನ ತುಂಬಿ ಹಾಡುತ್ತಾ ಬಂದಿದ್ದಾರೆ. ಅದು ಜಾನಪದ ಜೀವನದ ಮೌಲ್ಯವಾಗಿದೆ . ಈ ಮೌಲ್ಯದಿಂದ ಹಾಡುಗಳನ್ನು ಹುಡುಕಿ ರಕ್ಷಿಸಿ ಮುಂದಿನ ತಲೆಮಾರಿನ ಜನತೆಗೆ ಕೊಡಬೇಕು. ಅದಕ್ಕಾಗಿ ಜಾನಪದ ಅಕಾಡೆಮಿ ಪ್ರಯತ್ನಿಸಬೇಕು. ಯೋಗ್ಯರ ಮಾರ್ಗದರ್ಶನ ಅಂಥವರಿಗೆ ತಿಳಿಸಬೇಕು.

೮) ಪ್ರಕೃತಿಯಷ್ಟೇ ಹಳೆಯದಾದ ಜಾನಪದವು ನಶಿಸದಂತೆ ಜಾನಪದ ವಿದ್ವಾಂಸರು ಕಾರ್ಯ ಕೈಕೊಂಡಿದ್ದಾರೆ. ಇಂದಿನ ಈ ಕಂಪ್ಯೂಟರ್ ಯುಗದಲ್ಲಿಯೂ ಅವರು ಜಾನಪದ ಕಲೆಯನ್ನು ರಕ್ಷಣೆ ಮಾಡಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಅರ್ಪಿಸಬೇಕು. ಮತ್ತು ಅವರಿಗೆ ಅವಶ್ಯವಿರುವ ಮಾಹಿತಿಯ ಸಂಗ್ರಹಕ್ಕಾಗಿ, ಅಲ್ಲದೇ ನಮ್ಮ ಕನಸಿನ ಭವ್ಯಭಾರತದ ನಿರ್ಮಾಣಕ್ಕೆ ಈ ಜಾನಪದ ವಿದ್ವಾಂಸರು ಉತ್ತಮವಾಗಿ ಕೆಲಸ ಮಾಡಿದ್ದಾರೆ. ಇದರಿಂದ ನಮ್ಮತನದ ಅರಿವು ನಮಗಾಗುವುದರ ಜೊತೆಗೆ ನಮ್ಮ ಶಕ್ತಿ ಕೋಶಗಳು ಅನ್ಯರಿಗೆ ಗೊತ್ತಾಗುವುದರಲ್ಲಿ ಸಂದೇಹವಿಲ್ಲ ಎಂದು ತಿಳಿಸಲು ತುಂಬ ಸಂತೋಷವೆನಿಸುವುದು.

೨) ಜಾನಪದ ಅಕಾಡೆಮಿ ಕಲಾವಿದರಿಗಾಗಿ ಸರಕಾರವು ತನ್ನದೇ ಆದ ಕೊಡುಗೆಯನ್ನು ನೀಡಬೇಕಾಗಿದೆ. ಅವರಿಗೆ ಉಚಿತ ಬಸ್‌ಪಾಸ್ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಜಾನಪದ ಸಂಗ್ರಹ ಮಾಡಲು ಆಧುನಿಕ ಟೇಪ್‌ರೆಕಾರ್ಡ್‌ರ್ ಕ್ಯಾಸೆಟ್, ವಿಡಿಯೋ ಟೇಪು, ಕ್ಯಾಮರಾ ಮತ್ತು ಆಧುನಿಕ ಮಾದರಿಯ ಕೆಲವೊಂದು ವಿಶಿಷ್ಟವಾದ

ಸಲಕರಣೆಗಳನ್ನು ಒದಗಿಸಿದರೆ ಒಳ್ಳೆಯದು. ಅಲ್ಲದೇ ಅವರಿಗೆ ಕೆಲವೊಂದು ಪ್ರಮಾಣದಲ್ಲಿ ಹಣಕಾಸಿನ ನೆರವನ್ನು ಕೊಡಬೇಕು. ನಮ್ಮ ಸುಗ್ಗಿಯ ಕುಣಿತದ ಕುರಿತು ಯೋಚಿಸಿ ಹೆಚ್ಚಿನ ತರಬೇತಿ ಕೊಡುವ ಹಂತದಲ್ಲಿ ಪ್ರಯತ್ನಿಸಬೇಕು.

೩) ಇದು ತುಂಬ ವ್ಯಾಪಕವಾದ ಪ್ರಶ್ನೆ. ಒಂದೊಂದು ಕಲೆಗೂ ಅದರದೇ ಆದ ವಿಶೇಷ ಗುಣಾಂಶಗಳು ಇರುತ್ತವೆ. ಆದರೆ ಒಟ್ಟಾರೆಯಾಗಿ ಹೇಳುವುದಾದರೆ ಜಾನಪದ ಕಲೆಗಳು, ಕ್ರೀಡೆಗಳು, ಆಚರಣೆಗಳು, ಒಂದು ಜನಾಂಗ, ಜನ ಸಮೂಹ ಅಖಂಡವಾಗಿ ಎಲ್ಲರು ಬಳಸಿಕೊಂಡು ಯಾವ ಬೇಧವೂ ಇಲ್ಲದೇ ಹಂಚಿಕೊಳ್ಳುವ ತಿಳುವಳಿಕೆ, ಸಂತೋಷ ಸಂಭ್ರಮಗಳೇ ಜಾನಪದ ಎನಿಸಿದೆ.

ಜಾನಪದ ಎಂದರೆ ವೈವಿಧ್ಯಪೂರ್ಣವಾದದ್ದು ಆಗಿದೆ. ಶ್ರೀಸಾಮಾನ್ಯರು ದಿನ ನಿತ್ಯದ ಆಡುಭಾಷೆಯಲ್ಲಿ ಹಾಡಿದ ಹಾಡು, ಹೇಳಿದ ಕತೆ, ಒಡ್ಡಿದ ಒಗಟು, ಬಳಸಿದ ಗಾದೆ ಹಾಗೂ ಆಟಪಾಟಗಳಲ್ಲಿ ಬರುವ ಸುಂದರ ಮಾತು ಎನಿಸುತ್ತದೆ.

ಜಾನಪದ ಎಂದರೆ ಬಾಯಿಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಹೆಜ್ಜೆಯಿಂದ ಹೆಜ್ಜೆಗೆ ಹರಿದು ಬಂದ ಪದ್ಯವಾಗಿದೆ. ಆದರಲ್ಲಿ ಕಲೆಯೂ ಸೇರಿದೆ. ಸಂಗೀತವೂ ಸೇರಿದೆ. ಅದರ ಅಧ್ಯಯನ, ಅಧ್ಯಾಪನ ಇತ್ತೀಚೆಗೆ ನಡೆದರೂ ಸಹ ಜಾನಪದ ಸಹಜ ಸ್ವಭಾವದಿಂದ ಅವರ ಅನುಭವ ಸರಳವಾಗಿ ಹೊರಬಿದ್ದಿದೆ. ಇವರು ಸ್ವಾರ್ಥ ಸಾಧನೆಗಾಗಿ ಬೇರೆಯವರನ್ನು ಹೊಗಳ ಹೊರಟವರಲ್ಲ, ಅವರದು ನಿಷ್ಕಾಮ ಕರ್ಮ. ತಾವು ಕಂಡದ್ದನ್ನು ಕೇಳಿದ್ದನ್ನು ಅನುಭವಕ್ಕೆ ಬಂದ ನೋವು - ನಲಿವುಗಳನ್ನು ಮನ ತುಂಬಿ ಹಾಡುತ್ತಾ ಬಂದಿದ್ದಾರೆ. ಅದು ಅವರ ಜೀವನದ ಮೌಲ್ಯವಾಗಿದೆ. ಈ ಜಾನಪದದಲ್ಲಿ ಗೀತೆ, ಗಾದೆ, ಒಡಪು, ಒಡಬು, ಸಣ್ಣಾಟ, ದೊಡ್ಡಾಟ, ಬಯಲಾಟ, ಗುಮ್ಮಟಪದ, ಲಾವಣಿ, ಸಂಗೀತ, ನೃತ್ಯ, ಆಟ, ಗದ್ಯ ಕಥನಗಳು, ಕಲೆ, ಕುಶಲ ಕಲೆಗಳು ವೈವಿಧ್ಯಮಯವಾಗಿವೆ. ಅಲ್ಲದೇ ಶಿಶು ಗೀತೆಗಳು, ಜೋಗುಳ, ಒಗಟಿನ ಹಾಡುಗಳು, ನೃತ್ಯ ಗೀತೆಗಳು, ಸುಗ್ಗಿಯ ಕುಣಿತ, ಡೊಳ್ಳಿನ ಕುಣಿತ, ಪಗಡೆಕುಣಿತ, ಕಳಸದ ಕುಣಿತ ಮುಂತಾಗಿದೆ. ಜಾನಪದ ಜನಜೀವನದಲ್ಲಿ ಹಾಸ್ಯವಿದೆ. ಬಡತನಗಳ ಸ್ವಾರಸ್ಯವನ್ನು ಹೇಳುವ ಕಲೆಯಿದೆ.

ಕನ್ನಡ ಜಾನಪದವು ವೈವಿಧ್ಯಪೂರ್ಣವಾದುದು ಮತ್ತು ವಿಶಾಲವಾದದ್ದು ಆಗಿದೆ. ಅದಕ್ಕೆ ಕಟ್ಟುಪಾಡುಗಳು ಇರುವುದಿಲ್ಲ, ಅಂದರೆ ಛಂದಸ್ಸು ವ್ಯಾಕರಣದ ಕಟ್ಟುಪಾಡುಗಳು ಇಲ್ಲವಾಗಿದೆ. ಈ ಜಾನಪದದಲ್ಲಿ ಹಲವಾರು ಜನಪದ ಕತೆಗಳು ಸೇರಿಕೊಂಡಿದೆ. ಕಲೆಗಳು ಸೇರಿಕೊಂಡಿದೆ. ನಂಬಿಕೆಗಳು ಸೇರಿಕೊಂಡಿದೆ. ಸಂಪ್ರದಾಯಗಳು ಇವೆ. ಕ್ರೀಡೆಗಳು ಇವೆ. ಅಲ್ಲದೇ ಜನಪದ ಕಲೆಯಲ್ಲಿ ನೃತ್ಯ, ವೈದ್ಯ, ಪದ್ದತಿ, ಉಡಿಗೆ-ತೊಡಿಗೆ, ಸಂಗೀತ ಸೇರಿಕೊಂಡಿದೆ.

ಈ ಜಾನಪದವು ಶಾಲಾ ಶಿಕ್ಷಕರ ಮೂಲಕ ಕಲಿತದ್ದು ಆಗಿರುವುದಿಲ್ಲ. ಈ ಜಾನಪದವು ಧರ್ಮಗುರು ಒಬ್ಬನ ವ್ಯಾಪ್ತಿಗೆ ಸಂಬಂಧಪಟ್ಟದ್ದು ಆಗಿರುವುದಿಲ್ಲ. ಯಾವುದೇ ಪತ್ರಿಕೆಯಿಂದಾಗಲಿ ರೇಡಿಯೋದಿಂದಾಗಲಿ ಟೆಲಿವಿಜನ್ ಮೂಲದಿಂದಾಗಲಿ ಬಂದ ಜ್ಞಾನವಲ್ಲ. ತಲೆಮಾರಿನಿಂದ ತಲೆಮಾರಿಗೆ ಬಂದ ಜ್ಞಾನಸಂಪತ್ತು ಆಗಿದೆ. ಇದಕ್ಕೆ ಯಾವುದೇ ಭಾಷೆಯ ಕಟ್ಟಡಗಳು ಇಲ್ಲವಾಗಿದೆ. ಈ ಜಾನಪದದಲ್ಲಿ ಬೇಟೆಯ ವಿಧಾನ, ಅಡಿಗೆಯ ವಿಧಾನ, ನಿಸರ್ಗದೊಂದಿಗೆ ಹೊಂದಿಕೊಳ್ಳುವ, ಅನುಭವ ಬದುಕಿನ ವಿವಿಧ ಸ್ಥರಗಳಲ್ಲಿನ ಆಚಾರ-ವಿಚಾರಗಳು ಇಂಥವರ ಪಾಲಿಗೆ ಮೌಖಿಕ ಮೂಲದಿಂದಲೇ ಬರಬೇಕಾಗುತ್ತದೆ. ಈ ಜನಪದವು ಕೆಲವರ ಆಸ್ತಿಯಾಗಿರದೆ ಎಲ್ಲರ ಸ್ವತ್ತು ಆಗಿದೆ. ಸುಗ್ಗಿಯೆನ್ನದೆ, ಬೇಸಗೆಯನ್ನದೆ ಬೇರು ತನ್ನ ಸಹಜ ಕರ್ಮವನ್ನು ಸಾಗಿಸುತ್ತಲೇ ಇರುತ್ತದೆ. ಹಂಗಾಮು ನೋಡಿ ಹಣ್ಣಿನ ಗಿಡಗಳಿಗೆ ನೀರು ಸುರಿಯುವ ಚತುರ ತೋಟಗಾರನಂತೆ ಜನಾಂಗವು ಜನಪದ ಸಾಹಿತ್ಯವನ್ನು ತನ್ನ ಪ್ರಯೋಜನ ಪ್ರಸಂಗಗಳಲ್ಲಿ ಕಾಪಾಡಿಕೊಳ್ಳುವ, ಬೆಳೆಸಿಕೊಳ್ಳುವ ಹಾಗೂ ಸಾರ್ಥಕಗೊಳಿಸುವ ಕೆಲಸವನ್ನು ಕೈಕೊಳ್ಳುವಂತೆ ತೋರುತ್ತದೆ.

ನಾಗರಿಕತೆಯ ಕಾಲದಲ್ಲಿ ಇತಿಹಾಸ ಪುರಾಣಗಳ ಸಾರವನ್ನು ಜನರ ಮಟ್ಟಕ್ಕೆ ಇಳಿಸುವುದು. ಚರಿತ್ರೆಯಲ್ಲಿ ನಡೆದ ಮರೆಯಲಾಗದ ಸಂಗತಿಗಳನ್ನು ಜನರ ನೆನಪಿನಲ್ಲಿ ನಿಲ್ಲಿಸುವುದು.

೧) ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಮನೆ ಮನೆಗೆ ಬೀರುವುದು ಈ ಜಾನಪದ ಕೆಲಸವಾಗಿದೆ. ನಾಲ್ಕು ಮಂದಿ ಕೂಡಿದಾಗ, ನೇಗಿಲು ಹೊಡೆಯುವಾಗ, ಹುಟ್ಟು ಹಾಕುವಾಗ, ಹಾಡು ಹೊರ ಹೊಮ್ಮುತ್ತದೆ. ಮಕ್ಕಳು ಅಳುವಾಗ, ರಂಜಿಸುವ ಜೋಗುಳವು ಹಾಡೇ ಆಗಿರುತ್ತದೆ. ಸತ್ತಾಗ ಅಳುವುದೂ ಕೂಡ ಹಾಡೇ ಆಗಿರುತ್ತದೆ. ನಕ್ಕು ನಗಿಸುವುದಕ್ಕೂ ಜಾನಪದ ಹಾಡೇ ಬೇಕಾಗುತ್ತದೆ. ಮದುವೆ ಶೋಭಾನದಂಥ ಸಂತೋಷ ಪ್ರಸಂಗಗಳಲ್ಲಿ ಸಾಹಿತ್ಯಗೋಷ್ಠಿ ಸಾಗಿದಂತೆ ಹತ್ತಿ ಬಿಡಿಸುವಾಗಲೂ ಹೊಲದಲ್ಲಿ ಕಳೆ ಕೀಳುವಾಗಲೂ ಕಾವ್ಯ ಗೋಷ್ಠಿ ಸಾಗಿರುತ್ತದೆ. ಜಾನಪದ ಸಾಹಿತ್ಯವೂ ಜೀವನದ ಪ್ರತಿಭಾಪಾತವಾಗಿ ಜೀವನವೂ ಸಾಹಿತ್ಯ ಪ್ರತಿಬಿಂಬದರ್ಪಣವಾಗಿ ಏಕರೂಪವಾಗಿ ನಿಲ್ಲುವ ಪ್ರಯೋಜನವು ಅಷ್ಟಿಷ್ಟಲ್ಲ.

ದುಡಿದು ಸೋತು ಮನೆಗೆ ಹೊರಟ ಕೋಮಲೆಯನ್ನು ತೃಪ್ತ ಜೀವನವನ್ನು ಬಿಂಬಿಸುವ ಕಳೆ ಮುಖವನ್ನು ಕಂಡು ಸಹೃದಯನಾದ ಕವಿಯಲ್ಲಿ ಸಹಜವಾಗಿ

ಬಂದಾಳ ಬಾಲೆ ಬಂದಾಳ।<br>
ಹೊಲದಿಂದ ಬಂದಾಳ ।ಪ।

ತಲೆಮ್ಯಾಲ ಹೊರಿ ಒಂದ,
ಬಗಲಾಗ ಕೂಸು ಒಂದ
ಆಡೊಂದ ಮುಂದ ಮುಂದ
ಮರಿಯೊಂದ ಹಿಂದ ಹಿಂದ॥

ಈ ಬಗೆಯ ಹಾಡು ಉಕ್ಕಿ ಬರುವುದರ ಮೇಲಿಂದ ಜನಪದ ಸಾಹಿತ್ಯದ ಪ್ರಯೋಜವನ್ನು ಅರಿಯಬಹುದು. ಈ ಜಾನಪದ ವೇದಕ್ಕೆ ಮಂತ್ರಶಕ್ತಿ ಇದೆ. ಕಿರಿಯದರಲ್ಲಿ ಪಿರಿಯದನ್ನು ಬಯಸುವ ಸಾಮರ್ಥ್ಯವಿದೆ. ಎದೆಯ ಬಗೆಗಳನ್ನು ಪಡಿ ಮೂಡಿಸುವ ಕನ್ನಡಿಯೇ ಜನವಾಣಿಯೆಂದರೆ ಅತಿಶಯದ ಮಾತಾಗಲಾರದು. ಅದರಲ್ಲಿ ಪ್ರಸಾದವಿದೆ. ಗಾಂಭೀರ್ಯವಿದೆ. ಮನಕ್ಕೆ ನೇರವಾದ ಅರ್ಥವನ್ನು ಒಯ್ಯುವ ಚಾತುರ್ಯವಿದೆ.

❑

**ಎಚ್.ಎನ್. ಮಾದಯ್ಯ,** ಕಂಸಾಳೆ ಕಲಾವಿದರು

ಸ್ವಾಮಿ, ಅಕಾಡೆಮಿ, ನಮ್ಮ ಕನ್ನಡ ನಾಡಿನಲ್ಲಿ, ಜಾನಪದ ಕಲಾವಿದರನ್ನು ಹುಡುಕಿ, ಇದುವರೆವಿಗು ತುಂಬಾ ಸೌಕರ್ಯ ಮಾಡಿದೆ. ನಮ್ಮ ನಾಡಿನಲ್ಲಿ ಕಲಾವಿದರು, ಬೆಳೆದಿದ್ದಾರೆ. ಇವರಲ್ಲಿ, ಯಾವ ಯಾವ ಕಲೆಗಳಲ್ಲಿ ಕಲಾವಿದರು ಏನೇನು ಮಾಡುತ್ತಾರೆ. ಎಂಬುದನ್ನು ತಾವು ಪರೀಕ್ಷೆ ಮಾಡಬೇಕು, ಏತಕೆಂದರೆ, ನಮ್ಮ ಜನಪದ ಕಲಾವಿದರು, ನಾವು ಕಲಾವಿದರು ಎಂದುಕೊಂಡು ತಮಗೆ ಹೇಳಿ ಪಿಂಚಣಿ ಪಡೆಯುತ್ತಿದ್ದಾರೆ. ಆ ಕಲಾವಿದರು, ಈ ಕಲೆಯ ಬಗ್ಗೆ ಏನು ಮಾಡುತ್ತಾ ಇಲ್ಲ, ಕಲಾವಿದರು ಎಂದ ಮೇಲೆ ಒಂದು ಸಂಸ್ಥೆಯನ್ನು ಮಾಡಿ ಕಲಾವಿದರನ್ನು ಹೆಚ್ಚಿಸಿದರೆ ಅದು ಮುಂದೆ ಪ್ರಬುದ್ಧಮಾನವಾಗಿ ಉಳಿಯುತ್ತದೆ. ಆದ್ದರಿಂದ ತಾವು ಅಂಥವರನ್ನು ಪರೀಕ್ಷೆ ಮಾಡಬೇಕು ಮತ್ತು ನಾನು ೨೦ ವರ್ಷದಿಂದ ನಮ್ಮ ಸಂಸ್ಥೆಯಲ್ಲಿ ಅನೇಕ ಜನ ಕಲಾವಿದರನ್ನು ಸೇರಿಸಿಕೊಂಡು ಸಂಸ್ಥೆಯನ್ನು ದೊಡ್ಡದು ಮಾಡುತ್ತಾ ಇದ್ದೇನೆ. ತಾವು ದಯವಿಟ್ಟು ನಾನು ಹೇಗೆ ಈ ಕಲೆಯನ್ನು ಮುಂದುವರಿಸುತ್ತಾ ಇದ್ದೇನೆ ಎಂಬುದನ್ನು ನೋಡಿ, ನಾನು ಇರುವುದು ಕೊಳಚೆ ಪ್ರದೇಶ ೫-೧೦ ಅಡಿ ಜಾಗದಲ್ಲಿ ಹಂಚಿನ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಾ, ನಮ್ಮ ಪರಂಪರೆ ಕಂಸಾಳೆ ಕಲೆಯನ್ನು, ಮುಂದುವರಿಸುತ್ತಿದ್ದೇನೆ.

ಸ್ವಾಮಿ, ಈ ಜಾನಪದ, ಜನಪದ ಕಲೆ ಎನ್ನುವುದು ಏನು. ಇದರ ಗುಣ ಸ್ವಭಾವ ಏನು, ಜಾನಪದ ಕಲೆ, ಎಂದರೆ, ನಮ್ಮ ನಮ್ಮ ಕಲೆಯನ್ನು ನಾವುಗಳು ನಮ್ಮ ನಮ್ಮ, ಹಳ್ಳಿಗಳಲ್ಲಿ ಊರು ಕೇರಿಗಳಲ್ಲಿ ಹಾಡಿಕೊಂಡು ನಮ್ಮನಮ್ಮ ದೇವರಿಗೆ, ತಕ್ಕಂತೆ ಕಲೆಯನ್ನು ಮಾಡಿಕೊಂಡು ಇದ್ದೊ, ಇಂದಿನ ಕಾಲದಲ್ಲಿ ಈವಾಗ ಹೊಸ ಕನ್ನಡ ಬರುತ್ತಾ ಬರುತ್ತಾ ಬದಲಾವಣೆ ಮಾಡಿಕೊಂಡು ಬಂದಿದ್ದಾರೆ. ಏನು ಬದಲಾವಣೆ ಎಂದರೆ, ಊರುಗಳಲ್ಲಿ ಹಬ್ಬಗಳನ್ನು ಮಾಡುವಾಗ ಕೋಲುಗಳಿಗೆ ಬಿಳಿ ಬಟ್ಟೆ ಸುತ್ತಿಕೊಂಡು ದೇವರ ಮುಂದೆ ನಂದಿಕೋಲು ಕುಣಿತವೆಂದು ಕುಣಿಯುತಿದ್ದೊ, ಈವಾಗ ಆ ನಂದಿಕೋಲುಗಳನ್ನು ನಂದಿಕಂಬ, ಮತ್ತು ಹಿತ್ತಾಳೆ ಬಿರುಡೆಗಳನ್ನು ಹಾಕಿ, ಬಿದಿರು ಜಿಲ್ಲೆಗೆ ತುದಿಯಲ್ಲಿ , ಒಂದು ಬೆರಳಿ ಕಟ್ಟಿ

ಕಲರ್‌ಬಟ್ಟೆಯಲ್ಲಿ ದಾಳ ಕಟ್ಟಿ, ಅದನ್ನು ನಂದಿ ಧ್ವಜವೆಂದು ಕುಣಯುತ್ತಾರೆ, ಈಗ ನಮ್ಮ ನಮ್ಮ ಕಲೆಗಳನ್ನು ಊರಿನಲ್ಲಿ ಮಾಡಿ ಕೊಂಡು ಇದ್ದೊ, ಈವಾಗ, ಆ ಕಲೆಗಳನ್ನು, ನಮ್ಮ ಸರ್ಕಾರ ಅಂದರೆ, ನಮ್ಮ ಜಾನಪದ ಅಕಾಡೆಮಿಯ ಅಧ್ಯಕ್ಷರು, ಎಲ್ಲಾ ದೇಶಗಳಲ್ಲಿ ಸಮ್ಮೇಳನಗಳಲ್ಲಿ ಮೆರೆಸಿ, ಇವುಗಳಿಗೆ, ಜನಪದ ಕಲೆಗಳೆಂದು ಹೆಸರಿಟ್ಟರು. ನಮ್ಮ ಅಕಾಡೆಮಿ ಯಾವಾಗ, ಕಲಾವಿದರನ್ನು ಮೆರೆಯಿಸಿದರೂ, ನಮ್ಮ ಕನ್ನಡ ರಾಜ್ಯದಲ್ಲಿ, ಎಲ್ಲಾ ಕಲಾವಿದರಿಗೂ, ಸಂತೋಷವಾಯಿತು. ನಮ್ಮ ಅಕಾಡೆಮಿಯವರು, ನಮ್ಮ ನಮ್ಮ ಕಲೆಯನ್ನು ಬೀದಿ ರಂಗಕ್ಕೆ ತರದಿದ್ದರೆ ಆ ಕಲೆಗಳು ಇಷ್ಟು ಮುಂದಕ್ಕೆ ಬರುತ್ತಿರಲಿಲ್ಲ; ಆದ್ದರಿಂದ ಸ್ವಾಮಿ, ನಮ್ಮ ಜನಪದ ಕಲಾವಿದರಿಗೆಲ್ಲ, ನಮ್ಮ ಅಕಾಡೆಮಿಯೇ ಆಸ್ತಿ, ಎಂದು ನಂಬಿರುತ್ತೇವೆ.

**ಎಸ್. ಮಹದೇವ,** ಕಂಸಾಳೆ ಕಲಾವಿದರು

---

(೧) ಜಾನಪದ ಸಾಹಿತ್ಯಕ್ಕೆ ಹೆಚ್ಚಿನ ಒಲವು ತೋರಿದವರಲ್ಲಿ ಕೆ.ಆರ್. ಲಿಂಗಪ್ಪ, ಮತಿಘಟ್ಟ ಕೃಷ್ಣಮೂರ್ತಿ, ಡಾ|| ಜೀ. ಶಂ. ಪರಮಶಿವಯ್ಯ ಮತ್ತು ಚನ್ನಬಸಪ್ಪನವರು, ಇವರಲ್ಲದೆ ಡಾ|| ಜವರೇಗೌಡ ಮತ್ತು ಹಾ.ಮಾ. ನಾಯಕ್ ಇವರು ಮೈಸೂರು ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ಸ್ನಾತಕೋತ್ತರ ಪದವಿಯನ್ನು ತೆರೆದರು. ಇದಲ್ಲದೆ ಕನ್ನಡ ಸಾಹಿತ್ಯ ಪರಿಷತ್ ಮೂಲಕ ಜಾನಪದ ವಿಶ್ವಕೋಶವನ್ನು ಹೊರತಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಜನಪದ ಕಲೆಗಳು ಗಮನಾರ್ಹವಾದ ಕೃತಿ. ಇದಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಜಾನಪದ ಪರಿಷತ್ತು ಮತ್ತು ಉಡುಪಿಯ ರಂಗಕಲೆಗಳ ಅಧ್ಯಯನ ಸಂಸ್ಥೆ ಜಾನಪದ ಕ್ಷೇತ್ರಕ್ಕೆ ಹೆಚ್ಚು ಸಹಾಯಮಾಡಿದೆ.

ಡಾ|| ಜೀ. ಶಂ. ಪರಮಶಿವಯ್ಯನವರು. ವೃತ್ತಿಗಾಯಕರು, ಗೊರವರ ಕುಣಿತ, ಡೊಳ್ಳಿ ಕುಣಿತ, ವೀರಗಾಸೆ, ವೀರಭದ್ರನ ಕುಣಿತ ಇವುಗಳನ್ನು, ಉತ್ತರ ಕರ್ನಾಟಕ ಕಲೆಗಳು, ಜನಪದ ಸಾಹಿತ್ಯ ವಿಮರ್ಶೆ, ಸಂಶೋಧನೆ ಮಾಡಿರುತ್ತಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ಎಚ್.ಎಲ್.ನಾಗೇಗೌಡ, ಡಾ|| ಜೀ.ಶಂ. ಪರಮಶಿವಯ್ಯ, ಡಾ|| ಎಸ್.ಕೆ. ಕರೀಂಖಾನ್, ಡಾ|| ಎಚ್. ಜೆ. ಲಕ್ಕಪ್ಪಗೌಡ, ಕಾಳೀಗೌಡ ನಾಗವಾರ, ಡಾ|| ಹಿ.ಶಿ. ರಾಮಚಂದ್ರೇಗೌಡ ಇವರುಗಳನ್ನು ವಿಶೇಷವಾಗಿ ಸನ್ಮಾನಿಸಬೇಕು. ಎಚ್.ಎಲ್. ನಾಗೇಗೌಡರು ಧ್ವನಿ ಮುದ್ರಣ, ಚಿತ್ರೀಕರಣ ಎಲ್ಲವನ್ನು ಜಾನಪದ ಟ್ರಸ್ಟಿನಿಂದ ಮಾಡಿ ಕಲಾವಿದರನ್ನು ಜಾನಪದ ಕಲೆಗಳನ್ನು ಗುರುತಿಸಿದರು.

೨) ಆಗಿಂದಾಗ್ಗೆ ಕಲೆ ಪ್ರದರ್ಶನ ಮತ್ತು ಕಲಾಮೇಳಗಳನ್ನು ಆಯಾ ಜಿಲ್ಲೆಗಳಲ್ಲಿ ಮಾಡತಕ್ಕದ್ದು (ಏರ್ಪಡಿಸುವುದು). ಹಿರಿಯ ಕಲಾವಿದರನ್ನು ಗುರ್ತಿಸಿ, ಅವರಿಗೆ

ಅಕಾಡೆಮಿ ಪ್ರಶಸ್ತಿಯನ್ನು ಕೊಡತಕ್ಕದ್ದು. ಹಿರಿಯ ಕಲಾವಿದರಿಗೆ ಮಾಶಾಸನವನ್ನು ಕೊಡಿಸಬೇಕು ಹಿರಿಯ ಕಲಾವಿದರಿಂದ ಕಂಸಾಳೆ, ಡೊಳ್ಳು ಕುಣಿತ, ಬೊಂಬೆಯಾಟ, ಗೊರವರ ಕುಣಿತ, ತರಬೇತಿ ಕೇಂದ್ರಗಳನ್ನು ಆಯಾ ಜಿಲ್ಲೆಗಳಲ್ಲಿ ಕಿರಿಯ ಕಲಾವಿದರನ್ನು ತಯಾರು ಮಾಡಬೇಕು. ಕಲಾವಿದರ ವೇಷಭೂಷಣಕ್ಕೆ, ತಾಳವಾದ್ಯ ತಮಟೆ, ಕಂಸಾಳೆಗಳನ್ನು ಅಕಾಡೆಮಿಯಿಂದ ಕೊಡಿಸಿಕೊಡಬೇಕು.

ಎಚ್.ಎಲ್. ನಾಗೇಗೌಡರು ಇರುವಾಗ ನಗರದ ಉದ್ಯಾನವನಗಳಲ್ಲಿ ತಿಂಗಳ ಒಂದಾವರ್ತಿ ಜಾನಪದ ಕಲೆಗಳ ಪ್ರದರ್ಶನವನ್ನು ಏರ್ಪಾಡು ಮಾಡಿದ್ದರು. ಅಂತರರಾಜ್ಯದಲ್ಲಿ ಜಾನಪದ ಕಲಾಮೇಳವನ್ನು ಏರ್ಪಡಿಸಬೇಕು. ಇದಲ್ಲದೆ ಹೆಚ್ಚಿನ ಜನಪದ ಕಲಾವಿದರಿಗೆ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ಉತ್ತರ ವಲಯ ಸಾಂಸ್ಕೃತಿಕ ಕೇಂದ್ರ, ಪೂರ್ವ ಮತ್ತು ಪಶ್ಚಿಮ ವಲಯ ಕ್ಷೇತ್ರಗಳಲ್ಲೂ ಹೆಚ್ಚಿನ ಕಾರ್ಯಕ್ರಮಗಳನ್ನು ಒದಗಿಸಿ ಕೊಡಬೇಕು.

೩) ಜಾನಪದ ಎಂಬುವುದು ಜನಾಂಗದ ಜೀವಾಳವಾಗಿರುತ್ತದೆ. ಹಳ್ಳಿಯ ಅವಿದ್ಯಾವಂತ ಗಂಡಸರು ಹೆಂಗಸರು, ತಮ್ಮ ಬಾಳಿನಲ್ಲಿ ಆನಂದ ಉಕ್ಕಿದಾಗ ದುಃಖ ಉಮ್ಮಳಿಸಿದಾಗ ಅನುಕಂಪ, ಭಕ್ತಿಭಾವ ಆವರಿಸಿದಾಗ ಮದುವೆ ಮತ್ತು ಸುಗ್ಗಿಯ ಕಾಲದಲ್ಲಿ ಮೌಖಿಕವಾಗಿ ಹಾಡುವ ಪದಗಳೇ ಜಾನಪದ.

ಜನಪದ ಕಲೆ ಎಂಬುವುದು ಹಳ್ಳಿಯ ಹಾಡಿಗೆ ತಕ್ಕಂತ ವೇಷಭೂಷಣಗಳಿಂದ ತಾಳ ಲಯಬದ್ದವಾಗಿ ಕುಣಿಯತಕ್ಕಂತಹ ಕಲೆಯೇ ಜನಪದ ಕಲೆ. ಕಂಸಾಳೆ ಕುಣಿತ, ಗೊರವನ ಕುಣಿತ, ಪಟಾ ಕುಣಿತ, ಸೋಮನ ಕುಣಿತ, ಲಂಬಾಣಿ ಕುಣಿತ, ವೀರಭದ್ರ ಕುಣಿತ, ದೇವರ ಹೆಸರಲ್ಲಿ ಆಯಾ ಲಾಂಛನಗಳನ್ನು ಧರಿಸಿ ತಾಳ ಲಯಬದ್ದವಾಗಿ ಕುಣಿಯತಕ್ಕದ್ದು ಜನಪದ ಕಲೆಗಳು.

❒

## ಕೆ. ಗುಡ್ಡಪ್ಪ ಜೋಗಿ, ಕಿನ್ನರಿಜೋಗಿ ಕಲಾವಿದರು

ತಮ್ಮ ಪತ್ರ ತಲುಪಿತು. ವಿಷಯ ತಿಳಿಯಿತು. ತಾವು ಕಳಿಸಿರುವ ವಿಷಯ ತುಂಬಾ ಚೆನ್ನಾಗಿದೆ. ನಾನೊಬ್ಬ ಸಾಮಾನ್ಯ ಕಲಾವಿದ, ಆದರೂ ನನ್ನ ಅಭಿಪ್ರಾಯ ಹೀಗಿದೆ.

(೧) **ಜಾನಪದ ವಿದ್ವಾಂಸರೆಂಬುವವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಕೆಲಸದ ಬಗ್ಗೆ ನನ್ನ ಅಭಿಪ್ರಾಯ :**

೨೧ನೇ ಶತಮಾನದಲ್ಲಿ ಬೆಳ್ಳಿ ತೆರೆಯ ಬಣ್ಣದ ಲೋಕದಲ್ಲಿ ಇಂದಿನ ಜನ ಸಾಮಾನ್ಯರು, ಯುವಕರಲ್ಲಿ ಜಾನಪದ ಸೊಗಡು ಕಣ್ಮರೆಯಾಗುವ ಕಾಲ ಸನಿಹವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜಾನಪದ ವಿದ್ವಾಂಸರು ಜಾನಪದ ಜಗತ್ತಿಗೆ ಮಾಡುತ್ತಿರುವ ಕೆಲಸ ತುಂಬಾ ಸ್ವಾಗತಾರ್ಹ. ಜಾನಪದ ವಿದ್ವಾಂಸರು, ಕವಿಗಳು, ಸಾಹಿತಿಗಳು ಹಾಗೂ ಪ್ರಸಾರ ಮಾಧ್ಯಮಗಳು ಗತಕಾಲದ ಅನುಭವದ ಸಾರವನ್ನು ಬಿತ್ತರಿಸಬೇಕು. ಈ ನಿಟ್ಟಿನಲ್ಲಿ ವಿದ್ವಾಂಸರ ಶ್ರಮವೂ ಬೇಕು. ಇದಕ್ಕೆ ಪ್ರತಿಯೊಬ್ಬ ಕಲಾವಿದನ ಸಹಕಾರವೂ ಬೇಕು. ಇಂತಹ ಕೆಲಸಗಳಿಗೆ ನನ್ನ ಸಹಕಾರ, ಸಲಹೆ, ಮೆಚ್ಚುಗೆ ಯಾವಾಗಲೂ ಇರುತ್ತದೆ.

(೨) ೧) ಅಕಾಡೆಮಿ ಸ್ವಾತಂತ್ರ್ಯವಾಗಿರಬೇಕು. ರಾಜಕೀಯ ಧುರೀಣರ ಕೈ ಗೊಂಬೆಯಾಗಬಾರದು.

೨) ಗತಕಾಲದಿಂದ ಬಂದ ಕಲೆ ಮೂಲತಃ ಬದಲಾವಣೆ ಆಗದ ಕಲೆ ಇದೆ. ಅಂತಹ ಕಲೆ ಮತ್ತು ಕಲಾವಿದರನ್ನು ಗುರ್ತಿಸಿ ಸಹಕಾರ ನೀಡಬೇಕು.

೩) ಕಲಾವಿದರಿಗೆ ಆರ್ಥಿಕ ನೆರವು ನೀಡಬೇಕು. ಏಕೆಂದರೆ ವೃತ್ತಿ ಕಲಾವಿದರು, ಇತರೆ ಕಲಾವಿದರು ಇದನ್ನೇ ನಂಬಿ ಜೀವನ ನಡೆಸುವವರು ಇದ್ದಾರೆ.

೪) ಹಳ್ಳಿಗಳಿಂದ ಉತ್ತಮ ಕಲಾವಿದರನ್ನು ಆಯ್ಕೆ ಮಾಡಿ ಅಕಾಡೆಮಿಯಿಂದ ಸಲಹೆ,

ಸಹಕಾರ, ತರಬೇತಿ ನೀಡಬೇಕು.

೫) ಕಲೆ ಅಥವಾ ಕಲಾವಿದರನ್ನು ಗುರ್ತಿಸಿದರೆ ಅಷ್ಟೇ ಸಾಲದು. ಅವರಿಗೆ ಮಾರ್ಗ ದರ್ಶನ, ಪ್ರೋತ್ಸಾಹ ಹಾಗೂ ಅವರಿಗಿರುವ ಸೌಲಭ್ಯಗಳು ಎಲ್ಲಾ ಕಲಾವಿದರಿಗೂ ಸಿಗುವಂತೆ ಗಮನ ಹರಿಸಬೇಕು.

೬) ಕಲಾವಿದರಿಗೆ ಪ್ರಶಸ್ತಿಯನ್ನು ನೀಡುವಾಗ ಕಲೆ, ಅವರ ಸೇವೆಯನ್ನು ಗಮನದಲ್ಲಿಡಬೇಕೆ ಹೊರತು ವಯಸ್ಸನ್ನಲ್ಲ, ಏಕೆಂದರೆ ಕೆಲವರಿಗೆ ಪ್ರಶಸ್ತಿ -ಪುರಸ್ಕಾರಗಳು ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ಪ್ರೋತ್ಸಾಹ ನೀಡುತ್ತವೆ.

೭) ಕಲಾವಿದರಿಗೆ ಜಾನಪದ ಅಕಾಡೆಮಿಯಿಂದ ವರ್ಷದಲ್ಲಿ ಒಂದು / ಎರಡು ಬಾರಿಯಾದರೂ ಕಾರ್ಯಕ್ರಮಗಳನ್ನು ನೀಡಬೇಕು.

೮) ಕಲಾವಿದರಿಗೆ ಮಾಸಾಶನ ನೀಡುವಾಗ ಆದಾಯ ಆಧಾರವಾಗಿದೆ. ಇಂದು ಒಬ್ಬ ಕೂಲಿಕಾರನಿಗೂ ೧೫-೨೦ ಸಾವಿರ ಆದಾಯ ಇರುತ್ತದೆ.

೯) ಸಾಮಾನ್ಯ, ಅನಕ್ಷರಸ್ಥ ಕಲಾವಿದನ ಕಲೆಯನ್ನು ಇತರರೂ ಉಪಯೋಗಿಸಿಕೊಂಡು ಅದರ ಲಾಭ ಪಡೆಯುತ್ತಾರೆ. ಆ ಲಾಭ ಕಲಾವಿದನಿಗೆ ಸಿಗುವಂತೆ ನೋಡಿಕೊಳ್ಳಬೇಕು.

(೩) 'ಜನಪದ' ಎಂದರೆ ಜನರು ಸುಖ-ಸಂತೋಷ, ನೋವು-ನಲಿವು, ಬೇಸರ-ದು:ಖ, ಇಂತಹ ಸಂದರ್ಭದಲ್ಲಿ ಅವರ ಬಾಯಿಂದ ಬಂದ ಪದವೇ ಜನಪದ. ಇದಕ್ಕೆ ಒಬ್ಬ ನಿಖರವಾದ ರಚನೆಕಾರರಿರುವುದಿಲ್ಲ. ಜನರ ಬಾಯಿಂದ ಬಾಯಿಗೆ ಬಂದ ಪದವೇ ಜನಪದ. ಇದಕ್ಕೆ ರಾಗ, ಲಯವೇನೂ ಇಲ್ಲ.

ಜನಪದಕ್ಕೆ ರಾಗ, ಲಯ, ತಾಳ ಮತ್ತು ಶ್ರುತಿ ಸೇರಿಸಿದಾಗ ಅದೇ ಜಾನಪದ. ಇದು ಹಳ್ಳಿಯ ಜನರ ಜೀವನವನ್ನು ನಮ್ಮೆಲ್ಲರ ಮುಂದೆ ತಂದು ನಿಲ್ಲಿಸುತ್ತದೆ. ಇದು ನಾವು ಮಾಡುತ್ತಿರುವ ತಪ್ಪು-ಸರಿಗಳನ್ನು ತಿಳಿಸುತ್ತದೆ. ಅಂದರೆ ಹೆಂಡತಿ-ಗಂಡನೊಂದಿಗೆ ಹೇಗಿರಬೇಕು, ಹೆಣ್ಣು ಮಕ್ಕಳ ಉಡುಗೆ-ತೊಡುಗೆ, ನಡತೆ, ತಾಯಿ ಮಕ್ಕಳಿಂದ ಏನು ಬಯಸುತ್ತಾಳೆ, ಮಕ್ಕಳು ತಂದೆ -ತಾಯಿ, ಹಿರಿಯರು-ಕಿರಿಯರೊಂದಿಗೆ ಹೇಗಿರಬೇಕು, ಪ್ರತಿಯೊಬ್ಬರಿಗೂ ಅವರ ಕರ್ತವ್ಯದ ಅರಿವು ಅವರು ದಾರಿ ತಪ್ಪುತ್ತಿರುವಾಗ ಅದನ್ನು ಧೈರ್ಯವಾಗಿ ಹೇಳುವುದೆಂದರೆ ಜನಪದ ಕಲೆ ಎಂದು ನನ್ನ ಅನಿಸಿಕೆ.

ಜಾನಪದ ವಿದ್ವಾಂಸರನ್ನು ಆಯ್ಕೆ ಮಾಡುವಾಗ ಅವರಿಗೆ ಕಲೆಯ ಬಗ್ಗೆ ಹೆಚ್ಚಿನ ಮಾಹಿತಿ, ಕಲಾವಿದರ ನೋವು-ನಲಿವು, ಕಷ್ಟ-ಸುಖವನ್ನು ಅರಿತ ಹಾಗೂ

ಕಲಾವಿದರೊಂದಿಗೆ ಉತ್ತಮ ಸಂಬಂಧ ಹೊಂದುವಂತವರನ್ನು ಗುರ್ತಿಸಿ ಆಯ್ಕೆ ಮಾಡಬೇಕು.

ಪ್ರಶಸ್ತಿಗಳನ್ನು ೫೦-೬೦ ವರ್ಷಕ್ಕೆ ನೀಡಿದರೆ ವೇದಿಕೆ ಕಾರ್ಯಕ್ರಮ ಕಲಾವಿದರಿಗೆ ಸರಿಯಾಗಿ ನೀಡಲಾಗುವುದಿಲ್ಲ. ಆಭಾಸವಾಗಿರುತ್ತದೆ.

ಇದಿಷ್ಟು ನನ್ನ ಅಭಿಪ್ರಾಯ. ಇದಕ್ಕೆ ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ಧನ್ಯವಾದಗಳು. ಕಲಾವಿದನಾಗಿ ಬರೆದಿದ್ದೇನೆ.

## ನಿಂಗನಗೌಡ ಮುಂಡರಗಿ, ದೊಡ್ಡಾಟ ಕಲಾವಿದರು

೧) ಸಮಾಜ ಸೇವೆಯೇ ನನ್ನ ಗುರಿ. ಜನರನ್ನು ಎಚ್ಚರಗೊಳಿಸುವುದೇ ನನ್ನ ಉದ್ದೇಶ, ಬಡ ಜನರ ಏಳಿಗೆಗಾಗಿ ದುಡಿಯುವುದೇ ನನ್ನ ಕರ್ತವ್ಯ, ಜನರ ಮನದ ತಿಳಿವಳಿಕೆಯನ್ನು ಹೆಚ್ಚಿಸುವುದು, ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನನ್ನ ಜಾನಪದ ಕಲೆಯಲ್ಲಿ ಎತ್ತಿ ತೋರಿಸುವುದೇ ನನ್ನ ಉದ್ದೇಶ. ಓದು ಬರಹ ಕಲಿತವರು, ಪುಸ್ತಕ ಭಂಡಾರವನ್ನು ಓದಿ ತಮ್ಮ ಬುದ್ಧಿಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಾರೆ. ಬಡ ಜನ ಓದು ಬರಹ ಕಲಿಯದೆ ಇದ್ದವರೇ ಸುಮಾರು ನಮ್ಮ ದೇಶದಲ್ಲಿ ೧೦೦ಕ್ಕೆ ೯೦% ಜನ ಉಳಿದಿದ್ದಾರೆ. ಕಾರಣ ಆ ಜನರ ಉದ್ಧಾರಕ್ಕಾಗಿ ನನ್ನ ಜಾನಪದ ಶೈಲಿಯಲ್ಲಿ ಅಂಥವರನ್ನು ಎಚ್ಚರಿಸುತ್ತಾ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಬೇಕೆಂದು ನನ್ನ ಮುಖ್ಯ ಉದ್ದೇಶವಾಗಿರುತ್ತದೆ.

೨) ಜಾನಪದ ಕಲಾವಿದರಿಗಾಗಿ, ಜಾನ-ಪದ ಎಂದರೆ ಪದರಚನೆಯಲ್ಲಿ ಪದ ರಚಿಸಿ, ತಾನೇ ರಾಗ ತಾಳಬದ್ಧವಾಗಿ ಹಾಡುವುದು, ಇದನ್ನೇ ಜಾನಪದ ಎಂದು ಕರೆಯುತ್ತಾರೆ. ಮಾನವನು, ತನ್ನ ಏಳಿಗೆಗೆ ತಾನೇ ಶಿಲ್ಪಿ ಎಂಬಂತೆ ಈ ಜಾನಪದ ಕಲೆಯಲ್ಲಿ ಕೂಡಾ ಹಾಗೆ ಇರುತ್ತದೆ. ಜನರ ಮನಸೂರೆ ಮಾಡಿ, ರೇಡಿಯೋ ಕಾರ್ಯಕ್ರಮ, ಹಾಗೆ ಟಿ.ವಿ.ಕಾರ್ಯಕ್ರಮದ ಮೂಲಕ, ತಮ್ಮ ಕಲೆಯನ್ನು ವ್ಯಕ್ತಪಡಿಸಿ, ಮನ ಗೆದ್ದ ಬಳಿಕ ಅರ್ಹತೆಗೆ ಯೋಗ್ಯರಾಗಿರುತ್ತಾರೆ ಎಂಬುದೇ ನನ್ನ ಉದ್ದೇಶ. ಇಂತಹ ಕಲಾವಿದರನ್ನು ಗುರುತಿಸಿ ರಾಜ್ಯ ಪುರಸ್ಕಾರ ಸಿಗಬೇಕು. ಇನ್ನು ಮುಂದೆ ರಾಷ್ಟ್ರ ಪುರಸ್ಕಾರ ಕೊಟ್ಟರೆ ನಮ್ಮಂತಾ ಕಲಾವಿದರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಭಾರತ ದೇಶದ ಹೆಸರನ್ನು ಅಜರಾಮರವಾಗಿ ಉಳಿಸುವುದೇ ನಮ್ಮ ಜಾನಪದದ ಉದ್ದೇಶ,

೩.) ಜನರ ಉದ್ಧಾರಕ್ಕಾಗಿ ದುಡಿಯುವುದು ನಮ್ಮ ಜಾನಪದದ ಕರ್ತವ್ಯ ಮತ್ತು ಜನ ಸೇವೆಯನ್ನು ಮಾಡುವುದು ನಮ್ಮ ಗುರಿ.

ಇನ್ನೊಬ್ಬರ ಮನ ಜಾನಪದ ಕಲಾವಿದರಿಗಾಗಿ ಸರಕಾರದವರು ಕೊಡುವ ಪುರಸ್ಕಾರ ಮತ್ತು ಪತ್ರಿಕೆ-ಕಲಾಜಾಥ ತಂಡವನ್ನು ರಚಿಸಿ ಪ್ರತಿ ಹಳ್ಳಿ ಹಳ್ಳಿಗೆ ಹೋಗಿ ಬರುತ್ತಾರೆ. ಹಾಗೆ ಜಾನಪದ ಸಂಘವನ್ನು ರಚಿಸಿ ನಮ್ಮ ಸೇವೆಯನ್ನು ಪ್ರತಿ ಹಳ್ಳಿ ಹಳ್ಳಿಗೆ ಮುಟ್ಟಲೆನ್ನುವುದೇ ನಮ್ಮ ಉದ್ದೇಶ.

❑

**ಬಿ. ಕೆ. ರಾಮಣ್ಣ**, ಪಟಾಕುಣಿತದ ಕಲಾವಿದರು

(೧) ಜಾನಪದ ವಿದ್ವಾಂಸರು ಮಾಡುತ್ತಿರುವ ಕೆಲಸ ತೃಪ್ತಿಕರವಾಗಿದೆ, ಆದರೆ ಎಲ್ಲಾ ಕಲಾವಿದರಿಗು ತಾಲ್ಲೋಕಿನಿಂದ ತಾಲ್ಲೋಕಿಗೆ, ಜಿಲ್ಲೆಯಿಂದ ಜಿಲ್ಲೆಗೆ ರಾಜ್ಯದಿಂದ ರಾಜ್ಯಕ್ಕೆ ಪ್ರದರ್ಶನ ಮಾಡಲು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಮುಂದಿನ ಪೀಳಿಗೆಯವರು ಕಲೆಯನ್ನು ಉಳಿಸಿಕೊಳ್ಳಲು ಅನುಕೂಲವಾಗುತ್ತೆ.

(೨) ಜಾನಪದ ಅಕಾಡೆಮಿ ವತಿಯಿಂದ ಸನ್ಮಾನ ಪಡೆದವರಿಗೆ ಆದಾಯ ದೃಢೀಕರಣ ಪತ್ರ ಇಲ್ಲದೆ ವೃದ್ಧಾಪ್ಯ ವೇತನವನ್ನು ಕೊಡಿಸಬೇಕು. ಈವಾಗ ೩೬೦೦ ರೂ. ಆದಾಯ ದೃಢೀಕರಣ ಪತ್ರವನ್ನು ಕೊಟ್ಟವರಿಗೆ ವೃದ್ಧಾಪ್ಯ ವೇತನವನ್ನು ಕೊಡಬೇಕೆಂದು ತಿಳಿಸಿರುತ್ತೀರ. ತಾಲ್ಲೂಕಿನ ಅಧಿಕಾರಿಗಳು ೧೫ ಸಾವಿರದವರೆಗೆ ಕೇಳುತ್ತಾರೆ. ಬಡವರೆಂದು ಸರ್ಕಾರ ಘೋಷಣೆ ಮಾಡಿರುತ್ತಾರೆ. ೩೬೦೦ ರೂಪಾಯಿಗೆ ಆದರೆ ಅವರು ಕೊಡಕ್ಕಾಗಲ್ಲವೆಂದು ವಾಪಸ್ಸು ಕಳುಹಿಸುತ್ತಾರೆ. ೫೦೦ ರೂಪಾಯಿಗಳಿಗೆ ಮಾಡಬೇಕು, ಬಡಕಲಾವಿದರಿಗೆ ಜೀವನ ಮಾಡಲು ಅನುಕೂಲವಾಗುತ್ತೆ. ಯುವ ಪೀಳಿಗೆಯವರಿಗೂ ಅನುಕೂಲವಾಗುತ್ತೆ ಮತ್ತು ಕಲೆಗೆ ಬಳಸುವ ಸಾಮಗ್ರಿ, ತಮಟೆ, ಇತ್ಯಾದಿ ಸಾಮಗ್ರಿಗಳನ್ನು ಕೊಡಿಸಬೇಕು.

(೩) ಜಾನಪದ ಕಲೆ ಸ್ಕೂಲಿನಿಂದ ಬಂದಿದ್ದಲ್ಲ, ಗ್ರಾಮದ ಹಿರಿಯರು ಮತ್ತು ಮನೆಯ ಅಜ್ಜರಿಂದ, ಅಜ್ಜಿಯರಿಂದ, ಜನರಿಂದ ಜನರಿಗೆ, ಓದು ಬರಹ ಇಲ್ಲದವರಿಂದ ಕಲಿಕೆಯಿಂದ ಕಲಿತಿದ್ದರಿಂದ ಜಾನಪದ ಕಲೆ ಹಾಡುಗಳು ಎಂದು ಹೇಳಬಹುದು.

**ನಾನು ಕಲಿಯುವಾಗ ಬಂದಂಥ ವಿವರವನ್ನು ಬರೆದಿರುತ್ತೇನೆ.**

ನಾನು ಗ್ರಾಂಟು ಸ್ಕೂಲಿನಲ್ಲಿ ನಾಲ್ಕನೆ ತರಗತಿಯವರೆಗೆ ವಿದ್ಯಾಭ್ಯಾಸ ಮುಗಿಸಿ ಮುಂದಕ್ಕೆ ಓದಲು ಹೋಬಳಿ ಮಟ್ಟದಲ್ಲಿ ಮಿಡಲ್ ಸ್ಕೂಲ್ ಇದ್ದುದು. ೧೦-೧೨ ಮೈಲಿಗಳು ನಡೆದುಕೊಂಡು ಹೋಗಬೇಕಾಯಿತು. ಆದ್ದರಿಂದ ಮುಂದಕ್ಕೆ ಹೋಗಲು ಸಾಧ್ಯವಾಗದೆ ಬಿಟ್ಟು

ಮನೆ ಸೇರಿಕೊಂಡೆನು. ಮನೆಯಲ್ಲಿ ಎಮ್ಮೆ ಕಾಯಲು ನನಗೆ ನೇಮಿಸಿದರು. ಗ್ರಾಮದಲ್ಲಿ ಹಬ್ಬಗಳು ಆದಾಗ ರಾತ್ರಿಯಲ್ಲಿ ಪಟಕುಣಿತ ಮತ್ತು ನಾಟಕಗಳು ನಡೆದರೆ ಬೆಳಿಗ್ಗೆ ಕೆರೆಯಲ್ಲಿ ಎಮ್ಮೆ ಕಾಯುವಾಗ ಹುಡುಗರನ್ನು ಜೊತೆ ಕಟ್ಟಿಕೊಂಡು ರಾತ್ರಿಯಲ್ಲಿ ನೋಡಿದ ಕಲೆಗಳನ್ನು ಹಾಡುವುದು. ನಾನು ಆಟಗಳಲ್ಲಿ ಇದ್ದಾಗ ಎಮ್ಮೆಗಳು ಯಾರದೋ ಹೊಲಗಳಿಗೆ ಹೋಗಿ ಮೇಯುವಾಗ ಆ ಹೊಲದ ಮಾಲೀಕ ಬಂದು ನನಗೆ ಎಮ್ಮೆ ಹೊಡೆದುಕೊಂದು ಬಂದು ನಮಗೆ ಕೋಲಿನಿಂದ ಹೊಡೆದಾಗ ನಾವು ಎಮ್ಮೆ ಮೇಯಿಸಲು ಬಂದಿರುತ್ತೇವೆ ಎಂದು ತಿಳಿಯುತ್ತಿತ್ತು. ಮತ್ತೆ ಸಾಯಂಕಾಲ ಮನೆಯವರಿಗೆ ಬಂದು ಹೇಳಿ ಒದೆಕೊಡಿಸುತ್ತಿದ್ದರು.

ನನಗೆ ೧೫ ವರ್ಷ ತುಂಬಿದ ಮೇಲೆ ತಮಟೆ ಗತ್ತಿಗೆ ಕುಣಿಯಬೇಕೆಂದು ನನ್ನ ಜೊತೆ ಹುಡುಗರನ್ನು ಕಟ್ಟಿಕೊಂಡು, ನಮ್ಮ ಗ್ರಾಮದ ಎಲೆಕೆರೆ ಮರಿಯಣ್ಣ ತಮಟೆ ಬಡಿಯುವುದರಲ್ಲಿ ಒಳ್ಳೆಯ ಕಲಾವಿದ. ಅವನ ಹತ್ತಿರ ನಮಗೆ ಗತ್ತಿಗೆ ತಕ್ಕಂತೆ ಪಟಕುಣಿಯುವುದನ್ನು ಕಲಿಸಬೇಕೆಂದು ಕೇಳಿಕೊಂಡೆವು. ಅವನು ಒಂದು ಪಲ್ಲ ರಾಗಿ ಕೇಳಿದ. ಅದಕ್ಕೆ ಒಪ್ಪಿಕೊಂಡು, ಆದರೆ ನಮ್ಮ ಮನೆಯ ಜನಗಳಿಗೆ ಕಾಣದಂತೆ ತಲುಪಿಸುವುದು ಹೇಗೆ ಮನೆಯವರು ಕಂಡರೆ ಒದೆ ಕೊಡುತ್ತಾರೆ, ಏನು ಮಾಡುವುದು ಎಂದು ಯೋಚನೆ ಮಾಡಿ, ಒಂದು ಉಪಾಯ ಬಂದಿತು. ಸಾಯಂಕಾಲ ಊಟಕ್ಕೆ ಬಂದಾಗ ಬಟ್ಟೆಯಲ್ಲಿ ಕಟ್ಟಿ ಹುಲ್ಲಿನಲ್ಲಿ ಬಚ್ಚಿಟ್ಟು ಕತ್ತಲಾದ ಮೇಲೆ ತಮಟೆಯ ಮರಿಯಣ್ಣನ ಮನೆಗೆ ಕೊಡುವುದು ಎಂದು ಯೋಚನೆ ಮಾಡಿದೆನು.

ನಮ್ಮ ಮನೆಯಲ್ಲಿ ೨, ೩ ಕಂಡಗ ರಾಗಿ ಮಾಡಿಕೊಂಡು ವಾಡೆಯಲ್ಲಿ ತುಂಬಿಕೊಂಡು ದಿನಾ ರಾಗಿ ಬೀಸುವುದರಿಂದ ಕದ್ದ ರಾಗಿ ಗೊತ್ತಾಗಲಿಲ್ಲ. ಗುಂಪನ್ನು ಕಟ್ಟಿಕೊಂಡು ಪಟ ಕುಣಿತ ಮತ್ತು ಸೋಮನ ಕುಣಿತವನ್ನು ಕಲಿತು ಗ್ರಾಮದ ದೇವರ ಉತ್ಸವದಲ್ಲಿ ಮೆರೆಸಲು ಮುಂದಾದುದು, ಕಾಲಾಂತರದಲ್ಲಿ ಸಿನಿಮಾ ಬಂದ ಮೇಲೆ, ವಿದ್ಯಾವಂತರಾದ ಮೇಲೆ ನಮ್ಮ ಕಲೆಗೆ ಪ್ರೋತ್ಸಾಹ ಸಿಗಲೇ ಇಲ್ಲ, ನಿಲ್ಲುವ ಮಟ್ಟಿಗೆ ಬಂದಿತು ನಮ್ಮ ಕಲೆ.

ಅಷ್ಟರಲ್ಲಿ ದಿನಾಂಕ ೨೬-೧-೧೯೬೮ರಲ್ಲಿ ಮಂಗಳೂರಿನಲ್ಲಿ ಜಾನಪದ ಕಲಾಮೇಳ ನಡೆಯಿತು. ಎಚ್.ಎಲ್.ನಾಗೇಗೌಡ್ರು ಮತ್ತು ಜೀ. ಶಂ. ಪರಮಶಿವಯ್ಯ ಹಾಗೂ ಗೊ.ರು. ಚನ್ನಬಸಪ್ಪನವರ ಕಣ್ಣಿಗೆ ಬಿದ್ದೆವು. ಅಂದಿನಿಂದ ಇಲ್ಲಿಯವರೆಗೂ ಮೈಸೂರು ದಸರ ಹಾಗೂ ಬೆಂಗಳೂರು ಕನ್ನಡ ರಾಜ್ಯೋತ್ಸವಗಳಲ್ಲಿ ಸಾಕಷ್ಟು ಕುಣಿದು ಮೆರೆದಿದ್ದೇವೆ. ಸಂಸ್ಕೃತಿ ಇಲಾಖೆ ವತಿಯಿಂದ ಕೇರಳ, ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಕಲೆಯನ್ನು ಪ್ರದರ್ಶಿಸಿದ್ದೇವೆ. ಹಾಗೂ ಜಾನಪದ ಅಕಾಡೆಮಿ ವತಿಯಿಂದ ಸಾಕಷ್ಟು ಕಾರ್ಯಕ್ರಮ ಮಾಡಿರುತ್ತೇವೆ. ಜಾನಪದ ಪರಿಷತ್ ವತಿಯಿಂದ ಕಾರ್ಯಕ್ರಮ ಕೊಟ್ಟಿರುತ್ತೇವೆ.

ವಾರ್ತೆ ಮತ್ತು ಪ್ರಚಾರ ಇಲಾಖೆ ವತಿಯಿಂದ ದೆಹಲಿ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದೇವೆ. ಕರ್ನಾಟಕಕ್ಕೆ ಎರಡನೆಯ ಸ್ಥಾನದ ಪ್ರಶಸ್ತಿಯನ್ನು ತಂದಿರುತ್ತೇವೆ. ೧೯೮೭ ಮತ್ತು ೨೦೦೨ರಲ್ಲಿ ದೆಹಲಿಯಲ್ಲಿ ನಡೆದ ಫೂಲೂಪೋಲಂಕಿ ಉತ್ಸವದಲ್ಲಿ ಭಾಗವಹಿಸಿ ಮೊದಲ ಸ್ಥಾನ ಪಡೆದು ನಮ್ಮ ರಾಜ್ಯಕ್ಕೆ ಒಳ್ಳೆ ಗೌರವ ತಂದಿರುತ್ತೇವೆ. ನಿಮ್ಮಗಳ ಪ್ರೋತ್ಸಹದಿಂದ ನಮ್ಮ ತಂಡ ಉತ್ತಮವಾಗಿದೆ. ೧೮ ರಿಂದ ೩೦ ವರ್ಷದ ಹುಡುಗರಿಗೆ ತರಬೇತಿ ನೀಡಿರುತ್ತೇನೆ.

## ಮಹದೇವಯ್ಯ, ನೀಲಗಾರರು

೧) ಜನಪದ ಕಲೆಯ ಪರಂಪರೆಯನ್ನು ಉಳಿಸಿ, ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ಜಾನಪದ ವಿದ್ವಾಂಸರು ಗಣನೀಯವಾದ ಕೆಲಸವನ್ನು ಮಾಡುತ್ತಿದ್ದಾರೆ. ಜನಪದ ವಿದ್ವಾಂಸರೆಂಬುವವರು ಇಂದು ನಮ್ಮಂಥ ಗ್ರಾಮೀಣ ಪ್ರದೇಶದ ಕಲಾವಿದರ ಜ್ಞಾನ. ವಿದ್ಯೆಗಳಿಗೆ ವಿಶೇಷವಾದ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಇವರ ಪ್ರಮುಖ ಉದ್ದೇಶವೇನೆಂದರೆ ನಮ್ಮ ಹಳ್ಳಿಯ ಜ್ಞಾನ, ನಮ್ಮ ಹಳ್ಳಿಯ ಕಲಾವಿದರ ಜ್ಞಾನ ಒಟ್ಟು ಗ್ರಾಮೀಣ ಪ್ರದೇಶದಲ್ಲಿ ಏನಿದೆ ಅದನ್ನೆಲ್ಲ ಕಾಪಾಡುವಂಥ, ಅದನ್ನು ಕುರಿತು ಅಧ್ಯಯನ ಮಾಡುವಂಥ ಉದ್ದೇಶವಾಗಿದೆ. ನಮ್ಮ ನಾಡಿನ ಸಂಸ್ಕೃತಿ, ಸಂಪ್ರದಾಯಗಳನ್ನು ಜನಪದ ಕಲೆಯ ಮೂಲಕ ಕಾಪಾಡಿಕೊಳ್ಳುವಂಥ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮಂಥ ಕಲಾವಿದರನ್ನು ಕರೆಯಿಸಿಕೊಂಡು ಬೃಹತ್ ಪ್ರಮಾಣದ ಜಾನಪದ ಸಮ್ಮೇಳನಗಳಲ್ಲಿ, ನಮ್ಮಲ್ಲಿರುವ ಕಲೆಗಾರಿಕೆಯ ಜ್ಞಾನವನ್ನು ಪ್ರದರ್ಶಿಸುವುದರ ಮೂಲಕ ನಮ್ಮನ್ನು ಸನ್ಮಾನಿಸಿ, ಅನೇಕ ಜಾನಪದ ಕತೆಗಳನ್ನು ಕಾವ್ಯ ರೂಪದಲ್ಲಿ ಹಾಡಿಸಿದ್ದಾರೆ. ನನಗೆ ನೀಲಗಾರ ಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಸುದೀರ್ಘ ಸೇವೆಗೆ ಪ್ರೋತ್ಸಾಹ ಸಿಕ್ಕಿದೆ; ಪ್ರಶಸ್ತಿ ಸಿಕ್ಕಿದೆ. ಹೀಗೆ ಹಲವಾರು ಜಾನಪದ ವಿದ್ವಾಂಸರು, ಹಲವಾರು ಕಡೆ ನಮ್ಮ ನಾಡಿನಾದ್ಯಂತ ಈ ಕ್ಷೇತ್ರದಲ್ಲಿ ಅಮೋಘವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೨) ಜಾನಪದ ಅಕಾಡೆಮಿ ಕಲಾವಿದರಿಗಾಗಿ ಏನೇನು ಮಾಡಬೇಕೆಂದರೆ, ನಾವು ಕಾರ್ಯ ಮಾಡುವಂತ ಮನೆಗೆ ಹೋಗುವ ಪದ್ಧತಿ ನಮ್ಮದಾಗಿದೆ. ನಮಗೆ ಕೊಟ್ಟಿರುವಂತಹ ದೇವರ ಜೋಳಿಗೆ, ಬೆತ್ತ ಮತ್ತು ದೇವರ ವಿಗ್ರಹ ತೆಗೆದುಕೊಂಡು ಹೋಗಿ ಅವರ ಮನೆಯಲ್ಲಿ ಕಾರ್ಯಗಳನ್ನು ಮಾಡಿ

ಬರುತ್ತೇವೆ. ನಾವು ಕೊಂಡೊಯ್ದ ಜೋಳಿಗೆಗೆ ಏನು ಹಾಕುತ್ತಾರೋ ಅವರಿಗೆ ಬಿಟ್ಟದ್ದು. ನಾವು ಬಾಯಿಬಿಟ್ಟು ಕೇಳಿ ತೆಗೆದುಕೊಳ್ಳುವಂತಹ ಪದ್ಧತಿ ನಮ್ಮದಲ್ಲ. ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ, ಇತ್ತೀಚೆಗೆ ಟಿ.ವಿ. ಸಿನಿಮಾ ಎಲ್ಲವೂ ಬಂದ ಮೇಲೆ ಜನಪದ ಕಲೆ ಕಡಿಮೆಯಾಗತೊಡಗಿದೆ. ಮೊದಲೆಲ್ಲಾ ನಮ್ಮನ್ನು ಆಗಾಗ ಕರೆಯಿಸಿಕೊಂಡು ಹೋಗಿ ಅನೇಕ ಜನರು ನಮ್ಮಿಂದ ಕತೆಯನ್ನು ಕಾವ್ಯ ರೂಪದಲ್ಲಿ ಹಾಡಿಸುತ್ತಿದ್ದರು. ಈಗ ಆ ಪರಿ ಇಲ್ಲವೇ ಇಲ್ಲ. ಏಕೆಂದರೆ ಈ ಟಿ.ವಿ. ಸಿನಿಮಾಗಳ ವ್ಯಾಮೋಹವೇ ಜಾಸ್ತಿಯಾಗಿದೆ. ನೂರಾರು ಮನೆಯವರು ನನ್ನನ್ನು ಕತೆ ಹಾಡಲಿಕ್ಕೆ ಕರೆದುಕೊಂಡು ಹೋಗುತ್ತಾರೆ. ಒಂದು ರಾತ್ರಿ ಮಟ್ಟಿಗೆ ನನ್ನ ಕತೆಯ ಹಾಡನ್ನು ಕೇಳುತ್ತಾರೆ. ಬೆಳಗಾದ ಮೇಲೆ ಹೊರಟುಹೋಗು ಅಂದುಬಿಡುತ್ತಾರೆ. ಅಲ್ಲಿಗೆ ಅವರ ಕೆಲಸ ಮುಗಿಯಿತು. ಆದರೆ ಅಕಾಡೆಮಿಯವರು ನಮ್ಮಂತಹ ಕಲಾವಿದರಿಗೆ ಮಾಡುತ್ತಿರುವ ಕೆಲಸವನ್ನು ಪ್ರಪಂಚವೆಲ್ಲಾ ಮೆಚ್ಚಿಕೊಳ್ಳುವಂತದ್ದು, ಏಕೆಂದರೆ ಇತ್ತೀಚೆಗೆ ನಮ್ಮಂತಹ ಅವಿದ್ಯಾವಂತರ ಕಲೆಯನ್ನು ಬರವಣಿಗೆ ರೂಪದಲ್ಲಿ ಅಕಾಡೆಮಿಯವರು ತರುತ್ತಿದ್ದಾರೆ. ಇನ್ನೂ ತರಬೇಕಿದೆ. ನನ್ನ ಮತ್ತೊಂದು ಕೋರಿಕೆಯೇನೆಂದರೆ ಅಕಾಡೆಮಿಯವರು ಜಾನಪದ ಕ್ಷೇತ್ರದ ನನ್ನ ಅನುಭವದ ಕಲೆಗಾರಿಕೆಯನ್ನು ಇಡಿಯಾಗಿ ಪುಸ್ತಕದ ರೂಪದಲ್ಲಿ ದಾಖಲಿಸಿಕೊಂಡರೆ ಒಂದು ಶ್ರೇಷ್ಟತರವಾದ ಕೆಲಸ ಮಾಡಿದಂತಾಗುತ್ತದೆ. ಏಕೆಂದರೆ ನಾನು ಸತ್ತರೂ ನನ್ನ ಕಾವ್ಯ ಸಾಯುವುದಿಲ್ಲ. ಅದು ಪುಸ್ತಕದಲ್ಲಿ ಉಳಿದಿರುತ್ತದೆ. ನಾನು ಹೊರಟು ಹೋದರೂ ನನ್ನ ಹೆಸರು ಈ ನರಲೋಕದಲ್ಲಿ ಶಾಶ್ವತವಾಗಿ ಉಳಿದುಕೊಳ್ಳುತ್ತದೆ. ಇಂತಹ ಕೆಲಸವನ್ನು ಅಕಾಡೆಮಿಯವರು ಮುಖ್ಯವಾಗಿ ಮಾಡಬೇಕಾಗಿದೆ.

೩) ನಮ್ಮ ಪೂರ್ವಿಕರ ಕಾಲದಿಂದ ಮಂಟೇಸ್ವಾಮಿ ಗುಡ್ಡಗಳು ಮತ್ತು ಮಾದೇಶ್ವರ ಸ್ವಾಮಿ ಗುಡ್ಡಗಳು ಎಂಬೆರಡು ಪಂಗಡಗಳಿದ್ದುವು. ಇವರನ್ನು ಜೋಗಪ್ಪ ಮತ್ತು ದಾಸಪ್ಪ ಎಂದು ಕರೆಯುವರು. ಇವರು ಈ ಎರಡೂ ದೇವರುಗಳ ಹೆಸರಿನಲ್ಲಿ ಕತೆಗಳನ್ನು ಕಾವ್ಯಗಳ ರೂಪದಲ್ಲಿ ಹಾಡಿಕೊಂಡು ಬಂದಿದ್ದಾರೆ. ನಾನು ಕೂಡ ಈ ವಿದ್ಯೆಯನ್ನು ನನ್ನ ತಂದೆ ಕುಂಟ ಮಾದಯ್ಯನವರಿಂದ ಕಲಿತಿದ್ದು. ನಮ್ಮ ತಂದೆಗೆ ಆಗಲಿ, ನನಗೆ ಆಗಲಿ ಅಕ್ಷರ ಜ್ಞಾನ ವಿದ್ಯೆ ಅನ್ನುವುದು ಇಲ್ಲ. ನಾವು ಅವಿದ್ಯಾವಂತರು. ನಮ್ಮಂತಹವರು ಮೊದಲಿನಿಂದ ಅಂದರೆ ತಲೆಮಾರಿನಿಂದ,

ತಲೆಮಾರಿಗೆ ಅಕ್ಷರ ಜ್ಞಾನವೇ ಇಲ್ಲದೆ ಆಡುಮಾತಿನ ಮೂಲಕವೇ ಕತೆಗಳನ್ನು, ಹಾಡುಗಳನ್ನು ಹಾಡಿಕೊಂಡು ಬಂದಿರುವ ಕಲೆ ಜಾನಪದ ಕಲೆಯಾಗಿದೆ. ಇದು ಪ್ರಾಚೀನ ಪರಂಪರೆಯಿಂದ ಬೆಳೆದು ಬಂದಿದ್ದಾಗಿದೆ. ಜಾನಪದ ಕಲೆ ಜನರ ಪ್ರಜ್ಞೆಯನ್ನು, ಸಾಮಾಜಿಕ ಹೊಣೆಗಾರಿಕೆಯನ್ನು , ಸಂಸ್ಕೃತಿಯ ಸ್ಪಷ್ಟ ಕಲ್ಪನೆಯನ್ನು ನೀಡುತ್ತದೆ. ಇಲ್ಲಿ ನಮ್ಮಂತಹ ಅಕ್ಷರ ಜ್ಞಾನವಿಲ್ಲದ ಜನ ಕತೆಗಳು, ನೀತಿ ಕಥೆಗಳು, ನೀಲಗಾರಪದ, ಕಂಸಾಳೆ ಹಾಡುಗಳು, ಸುಗ್ಗಿಯ ಹಾಡುಗಳು ಮುಂತಾದವುಗಳನ್ನು ಹಾಡಿಕೊಂಡು ಬಂದಿರುವುದೇ ಜಾನಪದ ಕಲೆಯ ಸೃಷ್ಟಿಗೆ ಮುಖ್ಯ ಕಾರಣವಾಗಿದೆ. ಈ ಜಾನಪದ ಕಲೆ ಎನ್ನುವುದು ನಮ್ಮ ಪೂರ್ವಿಕರ ಕಾಲದಿಂದ ಕಂಠಸ್ಥ ಸಂಪ್ರದಾಯವಾಗಿ ಉಳಿದುಕೊಂಡು ಬಂದಿದ್ದಾಗಿದೆ.

❒

## ಶ್ರೀಮತಿ ಕಪ್ಪಗಲ್ ಪದ್ಮಮ್ಮ, ದೊಡ್ಡಾಟದ ಹಾಡುಗಾರ್ತಿ

೧) ೧. ಜನಪದ ತಜ್ಞರು ಜನಪದ ಕಲೆಗಳನ್ನು ಗುರುತಿಸುವುದರ ಜೊತೆಗೆ ಆ ಕಲಾವಿದರನ್ನು ಮುಖ್ಯವಾಹಿನಿಗೆ ತರುವುದು.

೨. ಕಲಾವಿದರು ಅವರ ಕಲೆಯನ್ನು ಮುಂದಿನ ಯುವ ಪೀಳಿಗೆಗೆ (ಯುವ ಜನತೆ) ಪರಿಚಯಿಸುವುದು.

೩. ಜನಪದ ಹುಟ್ಟುವುದು ಹಳ್ಳಿಯ ಕೆಳವರ್ಗದ ಜನರಿಂದ. ಆ ಕಲಾವಿದರನ್ನು ಗುರುತಿಸಿ ಅವರ ಕಲೆಗಳನ್ನು ಬೆಳಕಿಗೆ ತರುವುದು.

೪. ಜನಪದ ಮತ್ತು ಜಾನಪದ ಕಲೆಗಳೂ ನಾಡಿನ ಸಂಪತ್ತು ಎಂಬ ಅರಿವನ್ನು ಹಳ್ಳಿಯ ಜನರಲ್ಲಿ ಬೆಳೆಸುವುದು.

೫. ಜನಪದ ಕಲೆಗಳು ಅಸಂಖ್ಯಾತವಾಗಿದ್ದರೂ ಆ ಕ್ಷೇತ್ರಗಳಲ್ಲಿ ಅಧ್ಯಯನ ಮಾಡುವ ವಿದ್ವಾಂಸರ ಸಂಖ್ಯೆ ಕಡಿಮೆ ಇದೆ. ಈ ಕಾರಣದಿಂದ ಪಾರಂಪರಿಕ ಜನಪದ ಕಲೆಗಳ ಅಧ್ಯಯನವು ಕುಂಠಿತವಾಗಿದೆ. ಇಂದಿನ ಯುವಪೀಳಿಗೆಯ ಸಂಶೋಧಕರನ್ನು ಈ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ಮನವಲಿಸುವದು.

೨) ೧. ಕಲಾವಿದರನ್ನು ಗುರುತಿಸಬೇಕು.

೨. ಕಲಾವಿದರು ಆರ್ಥಿಕವಾಗಿ ಉಪಜೀವನ ನಡೆಸಲು ಸಹ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಆದ ಕಾರಣ ಎಲ್ಲಾ ಕಲಾವಿದರಿಗೆ ಮಾಸಾಶನವನ್ನು ಒದಗಿಸಿಕೊಡಬೇಕು.

೩. ಕಲಾವಿದರು ದೊಡ್ಡ ಕಾಯಿಲೆಗೆ ತುತ್ತಾದಾಗ ಉದಾ :- ಕ್ಯಾನ್ಸರ್, ಹೃದಯಾಘಾತ ಇತ್ಯಾದಿ ಬಂದಾಗ ಕಲಾವಿದರಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನು ಪಡೆಯಲು ವೈದ್ಯಕೀಯ ಗುರುತಿನ ಚೀಟಿ ಕೊಡುವುದು.

೪. ಕಲಾವಿದರು ವಾಸಿಸುವ ಸ್ಥಳದಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವುದು.

೫. ಕಲಾವಿದರ ಕಲೆಗಳ ಉಳಿವಿಗಾಗಿ ಒಂದು ವರ್ಷದಲ್ಲಿ ಒಂದು ಬಾರಿಯಾದರೂ ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಕಲಾವಿದರ ಮೇಳಗಳನ್ನು ಹಮ್ಮಿಕೊಳ್ಳಬೇಕು.

೬. ಜಾನಪದ ಮತ್ತು ಜನಪದ ಕಲೆಗಳನ್ನು ಬೆಳೆಸಲು ಜಿಲ್ಲಾ ಕೇಂದ್ರಗಳನ್ನು ಸ್ಥಾಪಿಸಬೇಕು.

೭. ಕಲಾವಿದರಿಗೆ ಕೆಲವು ಲಿಖಿತ ಪ್ರಮಾಣ ಪತ್ರ ಸಂಗ್ರಹಿಸಿ ಇಡುವುದು ಸಾಧ್ಯವಾಗಿಲ್ಲ. ಅದೇ ಕಾರಣದ ಮೇರೆಗೆ ಅವರ ಮನವಿಗಳನ್ನು ತಿರಸ್ಕರಿಸದೆ ಅಗತ್ಯ ಶಿಫಾರಸ್ಸು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವುದು.

೩) ಅ) ಜನಪದ ಎಂದರೇನು?

ಜನಪದ ಎಂದರೆ ಜನಪದ ಕಲೆಗಳು, ಜನ ಸಾಮಾನ್ಯದಿಂದ ಬಂದಿದ್ದು, ಓದು ಬರಹ ಬಾರದ ಹಳ್ಳಿಯ ಕೆಳವರ್ಗದಿಂದ ಜನಪದ ಬಂದಿದೆ.

೧) ಇತ್ತೀಚಿನ ಹಳ್ಳಿಯ ಜನರಿಗೆ ಮನರಂಜನೆಯ ಸಾಧನ ಈ ಜನಪದ ಕಲೆಗಳಷ್ಟೇ ಆಗಿದ್ದಾವೆ.

೨) ಹಳ್ಳಿಯ ಜನರು ತಮ್ಮ ಮನೋಭಾವನೆಗಳನ್ನು ಜಾನಪದ ಹಾಡಿನ ಮೂಲಕ ವ್ಯಕ್ತ ಪಡಿಸುತ್ತಾರೆ.

೩.) ಹಳ್ಳಿಯಲ್ಲಿ ಗೌರಿ ಹಬ್ಬಕೆ ತಂಗಿಯನ್ನು ಅಣ್ಣನು ಹಬ್ಬಕ್ಕೆ ಕರೆತರುವ ಸನ್ನಿವೇಶದಲ್ಲಿ ಹಾಡಿನ ಮೂಲಕ ಹಾಡುತ್ತಾರೆ. ಈ ಹಾಡಿನಲ್ಲಿ ಅಣ್ಣ ತಂಗಿಯ ಬಾಂಧವ್ಯ ಮನಸೆಳೆಯುತ್ತದೆ, ಇದೇ ಜಾನಪದ.

ಆ) ಜಾನಪದ ಎಂದರೇನು?

ಜಾನಪದ ಕ್ಷೇತ್ರ ನಮ್ಮ ಜನ ಸಾಮಾನ್ಯರ ಅನುಭವದ ಮೂಲಕ ಹೊರ ಹೊಮ್ಮಿರುವುದು, ಇದಕ್ಕೆ ಜಾನಪದ ಎಂದು ಕರೆಯುತ್ತಾರೆ.

೧. ಜಾನಪದ ಕ್ಷೇತ್ರದಲ್ಲಿ ಈ ನೆಲದ ಸಾಹಿತ್ಯ, ಕಲೆ, ಜಾನಪದ ಆಡಿಗೆ, ಸಂಪ್ರದಾಯ ಹಾಡುಗಳು, ಜಾನಪದ ವೈದ್ಯ, ಕಾಲದಿಂದ ಕಾಲಕ್ಕೆ ಅಭಿವ್ಯಕ್ತಗೊಳ್ಳುವುದು ಜಾನಪದ.

೨. ಮಕ್ಕಳನ್ನು ಊಟ ಮಾಡಿಸಲು ಆಡಿಸಲು, ಹಳ್ಳಿಯ ಹೆಣ್ಣು ಮಕ್ಕಳು ತಮ್ಮ ಮನಸ್ಸಿನ ಅಭಿಪ್ರಾಯನ್ನು ಹಾಡಿನ ಮೂಲಕ ವ್ಯಕ್ತಪಡುವ ಹಾಡು ಹಾಡುತ್ತಾ ಮಕ್ಕಳನ್ನು ಮಲಗಿಸುವುದು ಜಾನಪದ ಹಾಡು.

೩. ಹಳ್ಳಿಯ ಹೆಣ್ಣು ಮಕ್ಕಳು ಹಾಗೂ ಮುಗ್ಧ ಜನರು ಹೊಲಗದ್ದೆಗಳಲ್ಲಿ ತಮಗೆ ಬೇಸರವಾದಾಗ ಅವರು ಹೆಣ್ಣಿನ ಬಾಳಿನ ಅನುಭವಗಳನ್ನು ಒಂದು ಹಾಡಿನ ಮೂಲಕ ವ್ಯಕ್ತಪಡಿಸುತ್ತಾ ಹೆಣ್ಣಿನ ಹಿರಿಮೆಯನ್ನು ಹಾಡಿನಲ್ಲಿ ಹೇಳುತ್ತಾರೆ. ಇದೇ ಜಾನಪದವಾಗಿದೆ.

ಜಾನಪದಗಳು ಡೊಳ್ಳು, ವೀರಾಗಾಸೆ, ಕೋಲಾಟ, ಕಾಳಿ (ಓಲ) ಸಂಪ್ರದಾಯ ಹಾಡುಗಳು, ತಮಟೆ, ಕರಡಿ ಮಜಲು.

ಜನಪದ ಆಟಗಳು : - ೧) ಕಣ್ಣು ಮುಚ್ಚಾಲೆ, ೨) ಹತ್ತಿಕಟ್ಟಿ, ಬುತ್ತಿಕಟ್ಟಿಗಿ, ಚಿಣಿಪಣಿ ಆಟ.

ಗುಣ ಸ್ವಭಾವಗಳು : -

೧) ಜನಪದ ಹೆಣ್ಣಿನ ಹಿರಿಮೆಯನ್ನು ತೋರಿಸುವುದು.

೨) ಜನಪದ ನಿರ್ದಿಷ್ಟವಾದ ಚೌಕಟ್ಟಿಗೆ ಒಳಪಡುತ್ತದೆ. ನ್ಯಾಯ, ನೀತಿ, ಧರ್ಮ, ಭಕ್ತಿ ಮುಂತಾದ ನಮ್ಮ ಸಂಸ್ಕೃತಿಯ ಸೂತ್ರಗಳನ್ನು ಒಳಗೊಂಡಿದ್ದು ಕೆಟ್ಟವರ ಅಳಿವನ್ನು ಒಳ್ಳೆಯದರ ಉಳಿವನ್ನು ಮನದಟ್ಟು ಮಾಡಿಕೊಡುತ್ತದೆ.

೩) ಪೌರಾಣಿಕ ಕಥಾ ಭಾಗಗಳಲ್ಲಿ ಬರುವ ರಾಮ, ಲಕ್ಷ್ಮಣ, ಆಂಜನೇಯ, ಸೀತೆ, ಧರ್ಮರಾಯ, ಶ್ರೀಕೃಷ್ಣ, ಕರ್ಣ ಮುಂತಾದ ವ್ಯಕ್ತಿಗಳ ಆದರ್ಶನೀತಿ ಜನರಿಗೆ ದಾರಿ ತೋರಿಸುತ್ತದೆ.

೪) ರಾವಣ, ಶಕುನಿ, ದುರ್ಯೋಧನರಂಥ ವ್ಯಕ್ತಿಗಳ ಅವರಿಗೆ ಒಳಿತು ಕೆಡುಕುಗಳನ್ನು ನಿರ್ಧರಿಸಲು ಸಹಾಯವಾಗಿದೆ.

## ಎ. ಎಸ್. ನಂಜಪ್ಪ, ಮೂಡಲಪಾಯ ಯಕ್ಷಗಾನ ಭಾಗವತರು

೧) ಜಾನಪದ ವಿದ್ವಾಂಸರೆಂಬ ಪದಕ್ಕೆ ತಕ್ಕಂತ ಕಾರ್ಯನಿರ್ವಹಿಸಿರುವವರು ನನಗೆ ತಿಳಿದ ಮಟ್ಟಿಗೆ, ಮೊದಲನೇ ಸ್ಥಾನದಲ್ಲಿ ಶ್ರೀ ಎಚ್ .ಎಲ್. ನಾಗೇಗೌಡರವರ ಸಾಧನೆ ಅಪೋಘ. ಅದೇ ರೀತಿ ಶ್ರೀ ಜೀ. ಶಂ. ಪರಮಶಿವಯ್ಯನವರು, ಶ್ರೀ ತಿಪ್ಪೇಸ್ವಾಮಿಯವರು, ಶ್ರೀ ರಾಜೇಗೌಡ್ರು, ಇನ್ನೂ ಅನೇಕಾನೇಕ ಜಾನಪದ ವಿದ್ವಾಂಸರೆಲ್ಲರೂ ಜನಪದರನ್ನು ಹುಡುಕಿ ಗುರ್ತಿಸಿ ಜಾನಪದ ಕಲೆಯೆಂದು ಅಸಂಖ್ಯಾತವಾದ ಹೆಸರನ್ನು ಕೊಟ್ಟು ಈ ಜಾನಪದ ಕಲೆಯು ಯಾವ ಕಾರಣಕ್ಕೂ ಅಳಿಯದಿರಲೆಂದು ದೊಡ್ಡ ಪಣವನ್ನು ತೊಟ್ಟು ಜಾನಪದ ಲೋಕ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಈ ಕಲೆಗೆ ಸೀಮಿತವಾಗಿರಲೆಂದು ನಿರ್ಮಾಣ ಮಾಡಿ ಎಲ್ಲಾ ತರದ ಸಹಾಯ ಸಹಕಾರ ನೀಡದಿದ್ದರೆ ಈ ಸಿನಿಮಾ ಟಿವಿ ಆರ್ಭಟದಲ್ಲಿ ಈ ಜಾನಪದ ಕಲೆಯು ಎಂದೋ ಅಳಿಸಿ ನಾಶವಾಗುತ್ತಿತ್ತು ಎಂಬ ಅನಿಸಿಕೆ ನನ್ನದು. ಜಾನಪದ ಕಲಾಪ್ರೋತ್ಸಾಹಕ ವಿದ್ವಾಂಸರು, ಗಣ್ಯ ವ್ಯಕ್ತಿಗಳು ತಮ್ಮ ಜೀವನವನ್ನೇ ಜಾನಪದ ಕಲೆಗೆ, ಅದರ ಉಳುಮೆಗಾಗಿ, ಮೀಸಲಾಗಿಟ್ಟು ಶ್ರಮಿಸುತ್ತಿರುವ ಎಲ್ಲಾ ಜನಪದ ವಿದ್ವಾಂಸರಿಗೂ ನನ್ನ ಅನಂತಾನಂತ ವಂದನೆಗಳು. ಹಾಗೆಯೇ ಇನ್ನು ಮುಂದೆಯೂ ಬೂದಿ ಮುಚ್ಚಿದ ಕೆಂಡದಂತೆ ಉಳಿದಿರುವ ಹಿರಿಯ ಕಲಾವಿದರು ಅನೇಕಮಂದಿ ಇರುವರು ಎಂಬ ಅನಿಸಿಕೆ ನನ್ನದು. ಅವರನ್ನು ಗುರ್ತಿಸಿ, ಅವರ ಕಲೆಗಳನ್ನು ಪರೀಕ್ಷಿಸಿ ತಕ್ಕಂಥ ಸಹಾಯ ಸಹಕಾರ ನೀಡಲು ಆ ಭಗವಂತನು ತಮ್ಮೆಲ್ಲರಿಗೂ ಆರೋಗ್ಯ ಭಾಗ್ಯ ಆಯಸ್ಸು ಶಕ್ತಿ ಸ್ಥೈರ್ಯ ಧೈರ್ಯಗಳನ್ನು ಕರುಣಿಸಲೆಂದು ಭಗವಂತನನ್ನು ಧ್ಯಾನಿಸುತ್ತಾ ಮತ್ತೊಮ್ಮೆ ವಂದಿಸುತ್ತಾ ನನ್ನ ಅನಿಸಿಕೆಯನ್ನು ತಮ್ಮ ಮುಂದಿಟ್ಟಿರುತ್ತೇನೆ.

೨) ಜಾನಪದ ಕಲಾವಿದರಿಗೆ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ನೂ ಇತರೆ

ಜಾನಪದ ಇಲಾಖೆಗಳು ನಡೆಸುವ ಜಾನಪದ ಚಟುವಟಿಕೆಗಳು ಪೇಪರ್‌ನಲ್ಲಿ ಪ್ರಸಾರ ಮಾಡಿದರೆ ಎಲ್ಲರಿಗೂ ತಿಳಿಯುವುದು ಕಡಿಮೆ. ತಿಳಿದುಕೊಂಡ ಕಲಾವಿದರು ಇನ್ನೊಬ್ಬರಿಗೆ ತಿಳಿಸದೆ ಉಳಿದವರನ್ನು ಮುಂದೆ ತರಬೇಕೆಂಬ ದೊಡ್ಡ ಗುಣವನ್ನು ತೋರದೆ ಎಲ್ಲಾ ಕಾರ್ಯಕ್ರಮಗಳನ್ನು ತಾವೇ ಉಪಯೋಗಿಸಿಕೊಂಡು, ತಿಳಿಯದೆ ಇರುವ ಕಲಾವಿದರಿಗೆ ವಂಚನೆಯಾಗುತ್ತಿದೆಯೆಂಬ ಅನಿಸಿಕೆ ನನ್ನದು. ಹುಚ್ಚ ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂಬ ಗಾದೆಗೆ ಸೀಮಿತವಾಗುತ್ತಾರೆ. ಆದುದರಿಂದ ಜಾನಪದದ ಎಲ್ಲಾ ಕ್ಷೇತ್ರಗಳಲ್ಲೂ ಉಳಿದಿರುವ ಕಲಾವಿದರನ್ನು ಗುರ್ತಿಸಲು ಏನು ಮಾಡಬೇಕೆಂಬ ವಿಚಾರವನ್ನು ವಿಮರ್ಶೆ ಮಾಡಿ ಸರ್ವ ಕಲಾವಿದರಿಗೂ ಜಾನಪದ ಕಾರ್ಯಕ್ರಮಗಳು, ಸಿಗುವಂತೆ ಮಾಡುವುದರ ಜೊತೆಗೆ ಹಿರಿಯ ಕಲಾವಿದರಿಗೆ, ರೈಲು, ಬಸ್ಸುಗಳ ಪ್ರಯಾಣ ಭತ್ಯೆ ಪಾಸು ಮಾಡಿಸಿಕೊಡುವುದು ಮತ್ತು ಅವರ ಆರೋಗ್ಯ ಖರ್ಚಿಗೆ ಔಷಧಿ ಖರ್ಚಿಗೆ ಧನ ಸಹಾಯ ನೀಡಿದರೆ ಒಳ್ಳೆಯದೆಂಬ ಅನಿಸಿಕೆ ನನ್ನದು. ಅಲ್ಲದೆ ಜಾನಪದ ಯಕ್ಷಗಾನ ತಂಡಗಳನ್ನು (ದೊಡ್ಡ ದೊಡ್ಡ) ವೇದಿಕೆಗೆ ತಂದು, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ನಡೆಸುವಂತೆ ಮಾಡಿ, ಗಣ್ಯ ಜಾನಪದ ತಂಡಗಳನ್ನು ಗುರ್ತಿಸಿ ದೇಶ ವಿದೇಶಗಳನ್ನು ಈ ಮುಖಾಂತರದಿಂದಲಾದರೂ ನೋಡಲು ಅವಕಾಶ ಮಾಡಿ ಕೊಟ್ಟರೆ. ಈ ಕಲೆಯನ್ನು ನಾನು ಕಲಿತದ್ದಕ್ಕೆ ಇದು ಪುಣ್ಯವೆಂದು ಸಂತೋಷಪಡುವರು. ಮುಂದಿನ ಪೀಳಿಗೆಯವರು ಸಹ ನಾನು ಸಹ ಕಲಾವಿದನಾದರೆ ನನಗೂ ಇಂಥ ಅವಕಾಶ ಸಿಗುವುದೆಂದು ಈ ಕಲೆಗೆ ಮನಕೊಟ್ಟು ಈ ಕಲೆಯನ್ನು ಉಳಿಸಲು ಸಿದ್ಧರಾಗುವರೆಂಬ ಅನಿಸಿಕೆ ನನ್ನದು. ಇನ್ನು ಒಂದು ಮುಖ್ಯವಾದ ವಿಷಯ ಯಕ್ಷಗಾನದ ವೇಶಭೂಷಣಗಳು. ಮರದಿಂದ ಮಾಡಿದ ಕಿರೀಟ, ಭುಜ ಕೀರ್ತಿ, ಇನ್ನೂ ಇತರೆ ವೇಷದ ಸಾಮಗ್ರಿಗಳು ಬಹಳ ತೂಕ. ಈಗಿನವರು ಅವುಗಳನ್ನು ಹೊತ್ತು ಕುಣಿಯಲು ಸಾಧ್ಯವಿಲ್ಲ, ಅಕಾಡೆಮಿಯವರೆ ಪ್ಲಾಸ್ಟಿಕ್ ಫ್ಯಾಕ್ಟರಿಯಲ್ಲಿ ತಯಾರು ಮಾಡಿಸಿ ಯಕ್ಷಗಾನ ಸಂಘ ಸಂಸ್ಥೆಗಳಿಗೆ ವಿತರಣೆ ಮಾಡಬೇಕೆಂಬ ಅನಿಸಿಕೆ. ಒಂದೊಂದು ತಂಡದವರು ಮಾಡಿಸಲು ಸಾಧ್ಯವಾಗುವುದಿಲ್ಲ ಎಂಬ ಅನಿಸಿಕೆ.

೩) ಜನಪದರು ತಮ್ಮದೇ ಆದ ಒಂದು ಸಂತೋಷ ಮಟ್ಟದ ಗುಣಮಟ್ಟದಲ್ಲಿ ರಾಗಿ ಬೀಸುವ ಪದ, ಹೊಲ ಕೆಲಸದ ಪದ, ಕುರಿ ಗೊಲ್ಲ ಕೋಲಾಟ, ಕೊಳಲು ಪದ, ಭಜನೆ ಪದ, ತಂಬೂರಿ ಪದ, ದೇವರನಾಮದ ಸ್ಮರಣೆ ಪದ, ಹೆಣ್ಣು ಮಕ್ಕಳು ಹಾಡುವ ಪದ, ಇನ್ನೂ ಇತರೆ ಪದ ತಪ್ಪನೆಪ್ಪನ್ನದೆ ಹಾಡುತ್ತಾ ಮುಂದೆ, ಶೃತಿ, ತಾಳ, ಲಯ, ರಾಗ ಇವುಗಳಿಗೆ ಜೊತೆಗೂಡಿರಬಹುದು ಅದೇ ಜನಪದ. ಈ ಜನಪದಕ್ಕೆ ಜಾನಪದವೆಂದು

ಹೆಸರು ಕೊಟ್ಟವರು ಜಾನಪದ ವಿದ್ವಾಂಸರೆಂಬ ಅನಿಸಿಕೆ. ನಂತರ ತಾಳ, ರಾಗ ಶೃತಿ, ಲಯಗಳನ್ನು ಅನುಸರಿಸಿಕೊಂಡು ನಂತರ ಯಕ್ಷಗಾನ ಹುಟ್ಟು ಮುಂದೆ ದಕ್ಷಿಣಾದಿ, ಇನ್ನೂ ಹಲವು ರಂಗಗಳ ಮೇಲೆ ಹಾಡುವ ಅಭಿನಯಿಸುವ ಹರಿಕಥೆ, ಸಂಗೀತ, ನಾಟಕ, ಸಿನಿಮಾಗಳ ಗುಣಮಟ್ಟಗಳನ್ನು ಹೆಚ್ಚಿಸಿಕೊಂಡು ಇದರ ಜೊತೆಗೆ ಎಲ್ಲಾ ವಾದ್ಯ ಪರಿಕರಗಳು ಸಹ, ಜನಪದದ ದಾರಿಯಲ್ಲಿ ಹುಟ್ಟಿದವೆಂಬ ಅನಿಸಿಕೆ, ಒಟ್ಟಾರೆ ಈ ಜನಪದಕಲೆಯು ದೇವರ ನಾಮಸ್ಮರಣೆ, ದೇವರ ಆರಾಧನೆಯಲ್ಲಿ ಜನರು ಸನ್ಮಾರ್ಗದಲ್ಲಿ ಸಹಬಾಳ್ವೆಯಲ್ಲಿ ಸಂಸಾರದ ಯಾವ ದುರ್ಘಟನೆ ನಡೆದರೂ ಮರೆತು ಸಂತೋಷದಲ್ಲಿರಲು ಸಹಕಾರಿಯಾಗುವ ಗುಣಮಟ್ಟ ಕಾಪಾಡುವ ಗುಣವೆಂಬ ಅನಿಸಿಕೆ ನನ್ನದು. ಎಲ್ಲಾ ಕಲೆಗೂ ಜನಪದವೇ ಮೂಲವೆಂಬ ನನ್ನ ಅನಿಸಿಕೆ.

❑

**ಡಿ. ಎಸ್. ಗಂಗಾಧರಗೌಡ,** ಸೋಮನ ಕುಣಿತದ ಕಲಾವಿದರು

೧) ಗಾಳಿ ಬಂದಾಗ ತೂರಿಕೊ, ಮಳೆ ಬಂದ ಕಡೆ ಕೊಡೆ ಹಿಡಿದುಕೊ ಎಂಬ ಗ್ರಾಮೀಣರ ಆಡುಭಾಷೆಯಂತೆ, ಇಂದಿನ ವಿದ್ವಾಂಸರು, ಜಾನಪದ ಕ್ಷೇತ್ರದಲ್ಲಿ ಕಂಡಂತೆ ಬಳಸಿಕೊಂಡು, ಇಂದು ಜಾನಪದ ಜಾಣರಿಂದಲೊ, ಮೂಡಾತ್ಮರಿಂದಲೊ ಭಾಗವಂತರಿಂದಲೊ ಬುಡಿಬುಡಿಕೆಯವರಿಂದಲೊ ಸೋಬಾನದವರಿಂದಲೊ ಕಲಾಪ್ರಕಾರಗಳಿಂದಲೊ ಜಾನಪದ ಜ್ಞಾನ ಸಿರಿಯನ್ನು ಅರಿಯಲು, ಬರೆಯಲು, ಪದವಿ ಪಡೆಯಲು, ಡಾಕ್ಟರೇಟ್ ಹೊಂದಲು ಜಾನಪದ ಕ್ಷೇತ್ರವನ್ನು ಆರಿಸಿಕೊಂಡಿರುವುದು ಸ್ವಾಗತಾರ್ಹ. ಅಂದರೆ ಇಂದಿನ ಪರಿಸ್ಥಿತಿಯಲ್ಲಿ ವಿದ್ವಾಂಸರೆಂಬುವರ ಪಾತ್ರ ಹೆಚ್ಚಿನದಾಗಿದೆ. ಈ ನಾಡಿನ ಅನೇಕರು ಜಾನಪದ ಜಾಡಿನಲ್ಲಿ ನಡೆದು ಬಂದು ಜೀವನದಲ್ಲಿ ಸೊರಗಿದ್ದಾರೆ. ಇಂತಹ ಕೊರಗಿದವರ, ಸೊರಗಿದವರ, ಜಾನಪದ ಕ್ಷೇತ್ರಕ್ಕೆ ದುಡಿದವರ ಬಗ್ಗೆ ಕಣ್ಣಾಡಿಸಿ ಕೆಲಸವನ್ನು ಜಾನಪದ ಸಾಹಿತ್ಯಾತ್ಮಕವಾಗಿ ಬರವಣಿಗೆಯ ಮೂಲಕ ಉಳಿಸಬೇಕಾಗಿದೆ. ಇಲ್ಲಿಯವರೆಗೆ ಆಗಿರುವ ಕೆಲಸ ಸಾಲದು ಸಾಹಿತ್ಯಕ್ಷೇತ್ರದಲ್ಲಿ ಒಬ್ಬ ಸಾಹಿತಿಯ ಹೆಸರಿನಲ್ಲಿ ಹಲವಾರು ಪುಸ್ತಕಗಳು ಬಂದಿವೆ. ಸಕಾಲಕ್ಕೆ ಮರುಅಚ್ಚು ಹಾಕಿಸಿವೆ. ಆದರೆ ಜಾನಪದ ಕ್ಷೇತ್ರಕ್ಕೆ ದುಡಿದ ಯಾವ ಭಾಗವತರ ಹೆಸರನ್ನು ಕುರಿತು ಪುಸ್ತಕ ಬಂದಿದೆ ಹೇಳಿ? ಅದೆಲ್ಲ ಜಾನಪದ ಸಮ್ಮೇಳನ ಮಾಡಲು ವಿದ್ವಾಂಸರಿಂದ, ಅವರ ಸಂಘಟನೆಯಿಂದ ಸಾಧ್ಯವಿಲ್ಲವೆ? ಯೋಚಿಸಿ. ಸಾಹಿತ್ಯ ಸಮ್ಮೇಳನಗಳಲ್ಲಿ ಒಬ್ಬ ಜಾನಪದ ಸಾಹಿತಿ ಪ್ರಬಂಧ ಮಂಡಿಸಿದರೆ ಸಾಲದು, ವಿದ್ವಾಂಸರೆಲ್ಲರೂ ಜಾನಪದ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜನಪದರು ಉಳಿಸಿದ ಕ್ಷೇತ್ರವನ್ನು ಬೆಳಗಿಸಲು ಮೊಳಗಿಸಲೆಂದು ಹಾರೈಸುವ ಜಾನಪದ ಕಲಾವಿದ ದಂಡಿನಶಿವರದ ಗಂಗಾಧರಗೌಡ.

೨) ಈ ನಾಡಿನ ಸಂಸ್ಕೃತಿಯ ಸರ್ವತೋಮುಖ ಶ್ರೇಷ್ಠತೆಯ ದೃಷ್ಟಿಯಿಂದ ಸರ್ಕಾರದ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೆ. ಇದರ ಜೊತೆಯಲ್ಲಿ ಹಲವಾರು ಅಕಾಡೆಮಿಗಳನ್ನು ನೇಮಿಸಿದೆ. ಅದರಲ್ಲಿ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಒಂದು. ಜಾನಪದ ಅಕಾಡೆಮಿ ಕಲಾವಿದರಿಗಾಗಿ ಮಾಡಲೇಬೇಕಾದ ವಿಚಾರಗಳನ್ನು ನೇರವಾಗಿ ತಿಳಿಸಲು ಇಚ್ಛಿಸುತ್ತೇನೆ.

೧) ಅಕಾಡೆಮಿಯನ್ನು ಮಾಡಿದ ಸರ್ಕಾರ ಅಧ್ಯಕ್ಷರನ್ನು ಸದಸ್ಯರನ್ನು ನೇಮಿಸುತ್ತದೆ. ಇಂತಹ ಸಂದರ್ಭದಲ್ಲಿ, ಕಲಾವಿದರನ್ನು ನೇಮಕಮಾಡುವಾಗ ಒಂದೊಂದು ಕಲೆಗೆ ಒಂದೊಂದು ಸಾರಿ ಸದಸ್ಯರಾಗುವ ಅವಕಾಶ ಕಲ್ಪಿಸಿಕೊಡಬೇಕು. ಅಕಾಡೆಮಿ ಸರಿಯಾದ ಮಾಹಿತಿ ಸರ್ಕಾರಕ್ಕೆ ನೀಡಬೇಕು.

೨) ಗ್ರಾಮೀಣ ಮಟ್ಟದಲ್ಲಿ ಕಲಾವಿದರನ್ನು ಸಂದರ್ಶನ ಮಾಡಿ ಅವರ ಸ್ಥಿತಿ, ಗತಿ ಅರಿತು ಅವರ ಹೆಸರುಗಳನ್ನು ಪಂಚಾಯ್ತಿ, ತಾಲ್ಲೋಕ್, ಜಿಲ್ಲಾ, ರಾಜ್ಯ ಮಟ್ಟದಲ್ಲಿ ನೋಂದಾಯಿಸಬೇಕು. ತಾಲ್ಲೂಕ್ ದಂಡಾಧಿಕಾರಿಗಳಿಗೆ ವಿಭಾಗಾಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಕಲಾವಿದರ ಪಟ್ಟಿ, ಅಕಾಡೆಮಿ ದೃಢೀಕರಿಸಿ ಸಲ್ಲಿಸಿ ಕಲಾವಿದರಿಗೆ ಸರ್ಕಾರದಿಂದ ನಿವೇಶನ, ಮನೆ ಮಕ್ಕಳಿಗೆ ವಿದ್ಯಾರ್ಥಿವೇತನ, ಕಷ್ಟದ ಸಮಯದಲ್ಲಿ ಆರೋಗ್ಯ ತಪಾಸಣೆ ವಿಚಾರದಲ್ಲಿ ಅನುಕೂಲ, ಮಾಸಾಶನದ ಬಗ್ಗೆ ಒದಗಿಸಲು ವ್ಯವಸ್ಥೆ ಮಾಡಬೇಕು.

೩) ಕಲಾವಿದರು ಕಲೆ ಉಳಿಸಲು ಅಸಕ್ತರಾಗಿರುವುದರಿಂದ ಆರ್ಥಿಕ ನೆರವು ನೀಡಿ ಉಡಿಗೆ ತೊಡಿಗೆ ಪರಿಕರಗಳನ್ನು ಒದಗಿಸಿ, ಅಕಾಡೆಮಿಯಲ್ಲಿ ತಂಡವನ್ನು ದಾಖಲಿಸಬೇಕು.

೪) ಈಗಾಗಲೇ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮ ನೀಡಿದ ಕಲಾ ತಂಡಗಳಿಗೆ ಹೆಚ್ಚಿನ ಆದ್ಯತೆ ನೀಡಿ ಅವರ ಕುಂದು ಕೊರತೆಯೊಂದಿಗೆ ಹೆಚ್ಚು ಕಾರ್ಯ ಸಿಗಲು ಅವಕಾಶ ಮಾಡಿಕೊಡಬೇಕು.

೫) ಕಾರ್ಯಕ್ರಮಕ್ಕೆ ನೀಡುವ ಹಣ ಬಹಳ ಕಡಿಮೆ, ಒಬ್ಬ ಕಲಾವಿದನಿಗೆ ದಿನಕ್ಕೆ ೨೦೦ ರೂ.ನಂತೆ ಕಾರ್ಯಕ್ರಮ ಮಾಡುವ ದಿನ ೩೦೦ ರೂ. ತಲಾ ಒಬ್ಬರಿಗೆ ನೀಡಬೇಕು.

೬) ಅಕಾಡೆಮಿ ನೀಡುವ ಅಕಾಡೆಮಿ ಪ್ರಶಸ್ತಿ ಹೆಚ್ಚು ಕಲಾವಿದರಿಗೆ ದೊರೆಯುವಂತೆ ಆಗಬೇಕು. ರಾಜ್ಯೋತ್ಸವ ಪ್ರಶಸ್ತಿಯಲ್ಲಿ ನಿಜವಾಗಿ ದುಡಿದವರಿಗೆ ಸಿಗುತ್ತಿಲ್ಲ ಇದನ್ನು ಅಕಾಡೆಮಿ ದುಡಿದವರ ಮಾಹಿತಿ ಅವರಿಗೆ ಒದಗಿಸಬೇಕು.

೭) ರಾಷ್ಟ್ರಮಟ್ಟದಲ್ಲಿ ಜಾನಪದ ಪ್ರಶಸ್ತಿಯ ವ್ಯವಸ್ಥೆಯೇ ಇಲ್ಲ. ಇದು ಅತ್ಯಗತ್ಯವಾಗಿ ಆಗಬೇಕು. ಸರ್ಕಾರ ಕೂಡ ಜಾನಪದ ಪ್ರಶಸ್ತಿ ಕೊಡುವ ಕಾರ್ಯಕ್ರಮ ಆಗಬೇಕಾಗಿದೆ.

೮) ಶ್ರೀ ಎಚ್.ಎಲ್. ನಾಗೇಗೌಡರಿಗೆ, ಶ್ರೀ ಕರೀಂಖಾನ್ ಇಂತಹವರಿಗೆ ರಾಷ್ಟ್ರ ಮಟ್ಟದ ಜಾನಪದ ಪ್ರಶಸ್ತಿ ದೊರೆಯಲು ಅಕಾಡೆಮಿ ಸರ್ಕಾರದ ಗಮನ ಹರಿಸಬೇಕು.

೯) ಅಕಾಡೆಮಿ ಅಧ್ಯಕ್ಷರು ಕಲಾತಂಡಗಳ ಕಷ್ಟಕಾರ್ಪಣ್ಯಗಳನ್ನು ಹೇಳಿಕೊಳ್ಳಲು ಸಂದರ್ಶನ ಅವಕಾಶ ಮಾಡಿಕೊಡಬೇಕು.

೧೦) ಹಿಂದಿನಿಂದ ದುಡಿದ ಕಲಾತಂಡಗಳಿಗೆ ಅವಕಾಶ ಸಿಗದೆ, ಇಲಾಖೆಗಳಲ್ಲಿ ಮಧ್ಯವರ್ತಿಗಳಿಂದ ತೊಂದರೆ ಆಗುತ್ತಿದೆ ಈ ವಿಚಾರದಲ್ಲಿ ಗಮನಹರಿಸಬೇಕು.

೧೧) ಜಾನಪದ ಕಲಾವಿದರ ಸಮ್ಮೇಳನ ರಾಜ್ಯ ಮಟ್ಟದಲ್ಲಿ ಸೇರಿಸಬೇಕು.

೧೨) ಮೂಡಲಪಾಯ ಯಕ್ಷಗಾನ, ಸೋಮನಕುಣಿತ, ನಗಾರಿ ಮೇಳ ಇಂತಹ ಕಲೆಗಳನ್ನು ಉಳಿಸಲು ಕಮ್ಮಟ ರೀತಿಯಲ್ಲಿ ಕಾರ್ಯಕ್ರಮ ನಡೆಸಬೇಕು.

೧೩.) ಜಾನಪದ ಕಲಾವಿದರೆಂದರೆ ಬೀದಿಯಲ್ಲಿ ಕುಣಿಯುವರೆಂದು ಕಡೆಗಣಿಸಿ, ರಾಷ್ಟ್ರ ರಾಜ್ಯಕಾರ್ಯಕ್ರಮಗಳಲ್ಲಿ ವೇದಿಕೆ ಅವಕಾಶ ನೀಡದಿರುವುದು ಸರಿಯಲ್ಲ.

೧೪) ನಾಟಕ, ಸಿನಿಮಾ, ಕಲಾವಿದರಿಗೆ ನೀಡುವ ಸ್ಥಾನಮಾನ ಜನಪದ ಕಲಾವಿದರಿಗೂ ವಿದ್ವಾಂಸರಿಗೂ ಸಿಗಬೇಕು. ಒಂದು ಸಿನಿಮಾ ತೆಗೆದರೆ ರಾಷ್ಟ್ರ ಪ್ರಶಸ್ತಿ ದೊರೆಯುತ್ತೆ. ಜಾನಪದ ಕ್ಷೇತ್ರದಲ್ಲಿ ತನ್ನ ಜೀವನವೆಲ್ಲಾ ಸವೆಸಿದರೂ ಇಲ್ಲಿಯವರೆವಿಗೆ ಯಾರಿಗಾದರೂ ರಾಷ್ಟ್ರ ಮಟ್ಟದ ಗೌರವ ಸಂದಿದೆಯೋ? ಇದು ಈ ರಾಷ್ಟ್ರದ ಜನಪದ ಕಲಾವಿದರಿಗೆ ಅವಮಾನ. ಇದರ ಬಗ್ಗೆ ಸರ್ಕಾರಗಳು ಚಿಂತಿಸಬೇಕಾಗಿದೆ. ಈ ವಿಚಾರವನ್ನು ಅಕಾಡೆಮಿ ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ಇದು ನನ್ನ ಬಹು ದಿನದ ಆಸೆ.

೩) ಭಾರತೀಯ ಭವ್ಯ ಸಂಸ್ಕೃತಿಯ ದಿವ್ಯ ಪರಂಪರೆಯಲ್ಲಿ ಗ್ರಾಮೀಣ ಜನರ ಜನಜೀವನ ಜನ್ಮತಾಳಿದ ದಿನದಿಂದ ಈ ಜಾನಪದ ಎಂಬ ಶಬ್ದವು ಜನ್ಮತಾಳಿತೆನ್ನಬಹುದು. ಜಾನಪದ ಶಬ್ದದಲ್ಲಿ ಅಡಗಿರುವ ವಿಚಾರ ಹೀಗಿದೆ. ಜನಪದ ಜ- ಜನರಿಂದ, ನ - ನಾಲಿಗೆಯಿಂದ, ಪ - ಪಠಿಸಲ್ಪಟ್ಟ, ದ - ದಾಟಿ ಜಾನಪದವಾಗಿದೆ. ಜಾನಪದ

ಎಂಬ ಶಬ್ದದಲ್ಲಿ ಅಡಗಿರುವ ಹಿನ್ನೆಲೆಯ ಅಮೂಲ್ಯವಾದ ಅರ್ಥಗರ್ಭಿತವಾದ ವಿಚಾರಧಾರೆಯು ಅಂತರಾತ್ಮದಿಂದ ಅಂತರಜಲದಂತೆ ಉಕ್ಕಿದ ಜಾನಪದ ಜ್ಞಾನಗಂಗೆಯು ಜನರ ದಿನನಿತ್ಯದ ಬದುಕಿನ ಮನೋಲ್ಲಾಸಕ್ಕೆ ಒಬ್ಬರಿಂದ ಒಬ್ಬರಿಗೆ ನಾಲಿಗೆಯಿಂದ ನಾಲಿಗೆಗೆ ಲೀಲಾಜಾಲವಾಗಿ ಬಂದ ಯಾವ ನುಡಿಯೇ ಆಗಲಿ, ಯಾವ ಪದವೇ ಆಗಲಿ, ಕಲಾಪ್ರಕಾರಗಳೇ ಆಗಲಿ ಜಾನಪದವೆಂದು ಕರೆಯಬಹುದು. ಜಾನಪದ ಕಲೆ ಎಂದರೆ ಜನಜೀವನದಲ್ಲಿ ಅವರವರೇ ರೂಪಿಸಿಕೊಂಡ ಬದುಕಿನಲ್ಲಿ ಬಾಳಿನಲ್ಲಿ ಅವರವರ ಮನದಲ್ಲಿ ಮೂಡಿದ ಭಾವನೆಗಳು ವ್ಯಕ್ತ ಪಡಿಸುವ ರೀತಿ ನೀತಿಯಲ್ಲಿ ಹುಟ್ಟಿಕೊಂಡ ವಿಚಾರಧಾರೆಗಳು. ಹಬ್ಬ ಹರಿದಿನಗಳಲ್ಲಿ ಜಾತ್ರಾ ಸಮಾರಂಭದಲ್ಲಿ ಕೃಷಿಕ ಸಮಯದಲ್ಲಿ ಸಂತೋಷ ಸಮಾರಂಭದಲ್ಲಿ ಸೃಷ್ಟಿಯಾದವೇ ಜಾನಪದ ಕಲೆ.

ಲೆಕ್ಕಚಾರದಂತೆ ಇದರ ಗುಣ - ಗುಣಿಸಿದರೂ ಒಂದೇ ಭಾಗಿಸಿದರೂ ಒಂದೇ ಕೂಡಿ ಕಳೆದರೂ ಒಂದೇ ಎಂಬ ಸಿದ್ಧಾಂತವನ್ನು ಪಡೆದುಕೊಂಡಿದೆ. ಮೂಲದ ಮೆರಗನ್ನು ಸೃಷ್ಟಿಯ ಸೊಗಸನ್ನು ಆಲಿಸಿ ಪಾಲಿಸುವರಿಗೆ ಸಿರಿಸಂತೋಷವನ್ನು ಕಾಲ ಕಾಲದಿಂದ ನೀಡುತ್ತಾ ಬಂದ ಏಕೈಕ ಜಾನಪದ ಕಲೆ. ಕಾಲದ ವ್ಯವಸ್ಥೆ ಬದಲಾದರೂ ಜಾನಪದ ಕಲೆ ತನ್ನ ಕಲಾತ್ಮಕ, ಭಾವಾತ್ಮಕ ಮೂಲ ಅಂಶಗಳನ್ನು ಅರಿಯುವರಿಗೆ ಚಿನ್ನದಂತೆ, ಸೂರ್ಯನಂತೆ ಗುಣಾತ್ಮಕವಾಗಿ ಸದಾ ಜಗತ್ತಿನಲ್ಲಿರುತ್ತದೆ ಎಂಬ ಆಸೆ ಆಕಾಂಕ್ಷೆಯನ್ನು ಹೊಂದಿರುವ ಜಾನಪದ ಕಲಾವಿದ ಡಿ.ಎಸ್. ಗಂಗಾಧರಗೌಡ.

❑

## ಸೋಬಾನೆ ಕೃಷ್ಣೇಗೌಡ, ಸೋಬಾನೆ ಕಲಾವಿದರು

೭೦ರ ದಶಕದಲ್ಲಿ ಕೇವಲ ಗ್ರಾಮೀಣ ಭಾರತದ ರೈತ ಕುಟುಂಬಗಳ ಬದುಕು-ಬವಣೆ, ಜೀವನ, ಸಮಾಜದಲ್ಲಿನ ನಮ್ಮ ನಡವಳಿಕೆ ಹಾಗೂ ವ್ಯವಸಾಯದ ಚಟುವಟಿಕೆಗಳನ್ನು ಕುರಿತು ಕೇವಲ ಮನರಂಜನೆಗೆ ಸೀಮಿತವಾಗಿದ್ದ ಜನಪದ ಸಂಸ್ಕೃತಿಯನ್ನು ಅದು ಕೇವಲ ಅವಿದ್ಯಾವಂತರ ಸಂಸ್ಕೃತಿಯಲ್ಲ. ಅದೂ ಎಲ್ಲ ಸಂಸ್ಕೃತಿಯ ಮೂಲಬೇರು ಎಂದು ಬೌದ್ಧಿಕ ವಲಯಕ್ಕೆ ಪರಿಚಯಿಸಿ ವಿಶ್ವ ವಿದ್ಯಾಲಯದಲ್ಲಿ ಅದಕ್ಕೊಂದು ಸ್ಥಾನ ಮಾನ ನೀಡಿದವರು ಜಾನಪದ ವಿದ್ವಾಂಸರೆಂಬುದು ನನ್ನ ಅಭಿಪ್ರಾಯ. ಈ ವಿದ್ವಾಂಸರ ಕ್ಷೇತ್ರ, ಕಾರ್ಯ, ಬೆಳಕಿಗೆ ಬಾರದ ಕಲಾವಿದರ ಗುರುತಿಸುವಿಕೆ. ಅವರಲ್ಲಿರುವ ಕಲೆಯನ್ನು ಸಂರಕ್ಷಿಸಿ ದಾಖಲಿಸುವಿಕೆ ಹಾಗೂ ಅದು ಮುಂದಿನ ತಲೆಮಾರಿಗೆ ಹರಿಯಲು ಕಾರ್ಯೋನ್ಮುಖವಾಗಬೇಕು.

ಕಲಾವಿದರಿಗಾಗಿ ಜಾನಪದ ಅಕಾಡೆಮಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದರೂ. ಅದು ಜನಪದ ಕಲೆಗಳ ಸಂರಕ್ಷಣೆ ಹಾಗೂ ಪ್ರದರ್ಶನಕ್ಕೆ ಸೀಮಿತವಾಗಿದ್ದೂ, ಜನಪದ ಸಿರಿಯನ್ನು ತಮ್ಮ ಒಡಲಲ್ಲಿ ಹೊತ್ತಿರುವ ಅಸಂಖ್ಯಾತ ಜನಪದ ಕಲಾವಿದರು, ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ. ಅವರಲ್ಲಿರುವ ಕಲೆ ನಶಿಸಿ ಹೋಗುವ ಸಂದರ್ಭವೇ ಹೆಚ್ಚಾಗಿದೆ. ಆದ್ದರಿಂದ ಕಲಾವಿದರಿಗೆ ನೀಡುವ ಮಾಸಾಶನ, ಆರ್ಥಿಕ ಸಹಾಯಗಳಿಗೆ ಈಗ ರೂಪಿತವಾಗಿರುವ ನಿಯಮಾವಳಿಗಳನ್ನು ಬದಲಿಸಿ ಸರಳೀಕರಣಗೊಳಿಸಬೇಕು. ಜಾನಪದ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಅಕಾಡೆಮಿ ವತಿಯಿಂದ ಪ್ರತಿ ಜಿಲ್ಲೆಗೊಂದು ಜನಪದ ಕಲೆಗಳ ತರಬೇತಿ ಶಾಲೆ ಆರಂಭಿಸಿ, ಯುವಜನರಿಗೆ ತಜ್ಞ ಕಲಾವಿದರಿಂದ ತರಬೇತಿ ನೀಡಿಸಬೇಕು. ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಜಾನಪದವನ್ನು ಪಠ್ಯ ವಿಷಯವನ್ನಾಗಿ ಮಾಡಿ. ಕಲಾವಿದರಿಂದಲೇ ವಿದ್ಯಾರ್ಥಿಗಳಿಗೆ ಮೂಲಧಾಟಿಯಲ್ಲಿ ಗೀತಗಾಯನಕ್ಕೆ ವ್ಯವಸ್ಥೆಯಾಗಬೇಕು. ಈ ನಿಟ್ಟಿನಲ್ಲಿ ತಾವು ಸರ್ಕಾರದ ಜೊತೆ ವ್ಯವಹರಿಸಿ ಕಾರ್ಯೋನ್ಮುಖವಾಗಬೇಕು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಾನಪದ ಕಲೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತಾಗಬೇಕು.

ಜಾನಪದ ಸಂಸ್ಕೃತಿ ಕೇವಲ ಮದುವೆ ಮನರಂಜನೆಗಳ ವಸ್ತುವಲ್ಲ. ಇದರಲ್ಲಿ ಬರುವ ದೇವರ ಕುರಿತ ಹಾಡುಗಳು ಆಧ್ಯಾತ್ಮಿಕತೆಯ ಸೊಗಡನ್ನು ಸಮಾಜಕ್ಕೆ ತಲುಪಿಸಿದರೆ. ಮದುವೆ ಕುರಿತ ಹಾಡುಗಳು, ಬೀಸುವ ಪದ, ನೀತಿ ಬೋಧನೆ ಹಾಡುಗಳು. ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ. ಸಮಾಜದ ಸ್ವಾಸ್ಥ್ಯ ಕಾಪಾಡುತ್ತವೆ. ಹಾಗೆಯೇ ಇತಿಹಾಸದ ಹಲವು ವ್ಯಕ್ತಿಗಳ ಕುರಿತು ರಚಿವಾಗಿರುವ ಗೀತೆಗಳು ಚಾರಿತ್ರಿಕ ದಾಖಲೆಗಳಾಗಿ ನಮ್ಮ ಬೌದ್ಧಿಕ ವಿಕಾಸಕ್ಕೆ ಕಾರಣವಾಗಿದ್ದರೆ, ಜನಪದ ಪ್ರದರ್ಶನ ಕಲೆಗಳ ಸಮಯದಲ್ಲಿ ಕಲಾವಿದರು ನಡೆಸುವ ಆಂಗಿಕ ಕಸರತ್ತುಗಳು ನಮ್ಮನ್ನು ದೈಹಿಕವಾಗಿ ಬಲಪಡಿಸುವುದರ ಜೊತೆಗೆ ನಮ್ಮ ಆರೋಗ್ಯವನ್ನು ಕಾಪಾಡುತ್ತವೆ.

ಹೀಗೆ ಜಾನಪದ ನೋಡುಗರಿಗೆ ಮನರಂಜನೆ ನೀಡಿದರೂ ತನ್ನ ಒಡಲೊಳಗೆ ಹತ್ತು-ಹಲವು ಆಶಯಗಳನ್ನು ಹೊಂದಿರುವುದರಿಂದ ಇದು ನಮ್ಮ ಗ್ರಾಮೀಣ ಸಂಸ್ಕೃತಿಯೂ ಹೌದು. ಇತಿಹಾಸವೂ ಹೌದು, ವಿಜ್ಞಾನವೂ ಹೌದು. ಆದ್ದರಿಂದ ಎಲ್ಲಾ ಕಲಾವಿದರ ಸಂಘಟನೆಯಂತೆ ರಾಜ್ಯಮಟ್ಟದಲ್ಲಿ ಜನಪದ ಕಲಾವಿದರ ಒಕ್ಕೂಟ ರಚಿಸಲು ನಾವು ಆಲೋಚಿಸಬೇಕು.

## ಕಂಸಾಳೆ ಮಹಾದೇವಯ್ಯ, ಕಂಸಾಳೆ ಕಲಾವಿದರು

೨) ಜಾನಪದ ಕಲಾವಿದರೂ ಸಮಾಜದ ಹಿಂದುಳಿದ ವರ್ಗದವರಾಗಿದ್ದಲ್ಲಿ ಹೆಚ್ಚು ಕಡಿಮೆ ಎಲ್ಲರೂ ಬಡವರೇ ಆಗಿರುವುದರಿಂದ ಹಾಗೂ ಜಾನಪದವೇ ಅವರ ಪೂರ್ಣ ವೃತ್ತಿ ಆಗಿರುವುದರಿಂದಲೂ ಮೊದಲು ಅವರಿಗೆ ದೈನಂದಿನ ಜೀವನ ಸಾಧಿಸಲು ಮಾಶಾಸನ ನೀಡಬೇಕು. ಎರಡನೆಯದಾಗಿ ಅವರು ವಾಸಿಸುವ ಮನೆಗಳಿಲ್ಲದೆ ಎಲ್ಲೆಂದರಲ್ಲಿ ಗುಡಿಸಲು ಜೋಪಡಿಗಳನ್ನು ನಿರ್ಮಿಸಿಕೊಂಡಿರುವುದರಿಂದ ಅವರಿಗೆ ವಾಸಿಸಲು ಯೋಗ್ಯವಾದ ಮನೆ ನಿವೇಶನಗಳನ್ನು ನೀಡಬೇಕು. ಮೂರನೆಯದಾಗಿ ಅವರ ಮಕ್ಕಳಿಗೆ ಸರ್ಕಾರದ ವತಿಯಿಂದ ಉಚಿತ ವಿದ್ಯಾಭ್ಯಾಸ ಕೊಡಿಸಬೇಕು. ನಾಲ್ಕನೆಯದಾಗಿ ಜಾನಪದ ಕಲಾವಿದರಲ್ಲಿ ಜಾನಪದಗಳ ಭಂಡಾರವೇ ಅಡಗಿರುವುದರಿಂದ ಅವರಲ್ಲಿರುವ ಜ್ಞಾನವನ್ನು ಪುಸ್ತಕ ಹಾಗೂ ಧ್ವನಿಸುರುಳಿಗಳ ಮೂಲಕ ಸಂಗ್ರಹಿಸಿ ಮುಂದಿನ ಪೀಳಿಗೆಗೆ ನಮ್ಮ ಜಾನಪದ ಜ್ಞಾನದ ಅರಿವನ್ನು ಮೂಡಿಸಬೇಕು.

೩) ಹಿಂದಿನ ಕಾಲದಲ್ಲಿ ಸಮಾಜದಲ್ಲಿನ ಹಿಂದುಳಿದ ಜನಾಂಗದವರು ವಿದ್ಯೆಯಿಂದ ವಂಚಿತರಾಗಿದ್ದು ಅವಿದ್ಯಾವಂತರಾಗಿದ್ದರೂ ಕೂಡ ಅವರು ಜಾನಪದ ಕಲೆಯ ವಿದ್ವಾಂಸರೇ ಆಗಿದ್ದರು. ಅಂದರೆ ಅಂದಿನ ಯಾವುದೇ ಸಮಾರಂಭಗಳಲ್ಲಿ ಅಲ್ಲಿನ ಜನರು ತಮ್ಮ ಸುಖ ದುಃಖಗಳನ್ನು ವ್ಯಕ್ತ ಪಡಿಸಲು ಆ ಸುಖ ದುಃಖಗಳನ್ನು ಹಾಡಿನ ರೂಪದಲ್ಲಿ ಕಾವ್ಯಮಯವಾಗಿ ಹಾಡುತ್ತಿದ್ದರು. ಅದನ್ನು ಜನರು ಜ್ಞಾನದಿಂದ ಆಲಿಸಿ ಕೇಳಿ ಬಾಯಿಂದ ಬಾಯಿಗೆ ಬಂದಿದ್ದರಿಂದ ಅದನ್ನು ಜನಪದ ಅಥವಾ ಜಾನಪದ ಆಗಿರುತ್ತದೆ. ಅಂದಿನಿಂದ ಇಂದಿನವರೆಗೂ ಬಾಯಿ ಮೂಲಕ ಬಂದ ಈ ಜನಪದವನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುಂದುವರಿಸಿಕೊಂಡು ಹೋಗುತ್ತಿರುವುದರಿಂದ ಇದು ಸಮಾಜದ ಹಿಂದುಳಿದ ಬಡ ಜನಾಂಗದ ಕಲೆಯಾಗಿದೆಯೆಂದು ನಂಬಿರುತ್ತೇನೆ.

**ಗುಣ ಮತು ಸ್ವಭಾವ**

ಜನಪದ ಕಲೆಯು ಒಂದು ಮೂಢ ನಂಬಿಕೆಯಾಗದೆ ಅದು ಒಂದು ಅಪೂರ್ವ ಮಾಹಿತಿಯ ಪೌರಾಣಿಕ, ಐತಿಹಾಸಿಕ, ಕೃಷಿ, ಔಷಧ, ಸತ್ಯ, ಧರ್ಮ ನೀತಿ, ನಿಷ್ಠೆ ಶಾಂತಿ, ಗೌರವ ಇವು ಇಂದಿನ ಸಮಾಜಕ್ಕೆ ಅಗತ್ಯವಾದ ಒಂದು ಅಮೂಲ್ಯ ಕಲೆಯಾಗಿರುತ್ತದೆ. ಅದರಲ್ಲಿ ಯಾರನ್ನೇ ಆಗಲೀ ದೂಷಿಸುವಂತ ಅಥವಾ ಹೀಯಾಳಿಸುವಂತ ಗುಣಗಳಾಗಲಿ ಇಲ್ಲದೆ ಅವು ಶಾಂತಿ ಸ್ವಭಾವದ ನೇರ ಮಾತಿನ ಕಲೆಯಾಗಿದೆ.

**ನನ್ನ ಅನುಭವ**

ಸ್ವಾಮಿ, ನಮ್ಮ ಪೂಜ್ಯ ತಾತನವರಾದ ಗಂಗಾಮತಸ್ಥರಾದ ಲೇಟ್ ಎಡದೊರೆ ಮಾದಯ್ಯನವರ ಪ್ರಥಮ ಪುತ್ರರಾದಂತಹ ಲೇಟ್ ಕಂಸಾಳೆ ಮಾದಯ್ಯನವರು ತಮ್ಮ ತಂದೆಯಿಂದ ಅವರಿಗೆ ಗೊತ್ತಿದ್ದ ಎಲ್ಲಾ ಜಾನಪದ ಗೀತೆಗಳನ್ನು ಕಲಿತು, ನಮ್ಮ ತಂದೆ ಎಲ್ಲಿ ಹಾಡಲು ಹೋದರೂ ಸಹ ನನ್ನನ್ನು ಅತಿ ಚಿಕ್ಕಂದಿನಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರಿಂದ ನನ್ನ ಪೂಜ್ಯ ತಂದೆಯವರಿಗೆ ಗೊತ್ತಿದ್ದ ಎಲ್ಲಾ ಜಾನಪದ ಹಾಡುಗಳನ್ನು ನನಗೆ ಕಲಿಯಲು ಸಹಾಯವಾಯಿತು. ಇದರಿಂದಾಗಿ ನನ್ನ ತಾತ ಮತ್ತು ತಂದೆಯವರಂತೆ ನಮ್ಮ ಮನೆತನದ ಸಂಪ್ರದಾಯದಂತೆ ನನಗೆ ಚಿಕ್ಕಂದಿನಿಂದಲೂ ಕಂಸಾಳೆ ಮಹಾದೇವಯ್ಯ ಎಂದು ಹೆಸರು ಬಂದಿತು.

ಕಂಸಾಳೆಯಲ್ಲಿ ಎರಡು ವಿಧ : (೧) ಬೀಸು ಕಂಸಾಳೆ ಇದರಲ್ಲಿ ಕುಣಿಯುತ್ತಾ ಹಾಡು ಹೇಳುತ್ತಾ ಚಿಟಿಕೆ ತಾಳವನ್ನು ಹಾಕುವಾಗ ಅದು ಕಾಲಿಗೆ ತಗಲಿದರೂ ಮಾನ್ಯ, ಆದರೆ ಎರಡನೆಯದು. ಇದರಲ್ಲಿ ಚಿಟಿಕೆ ತಾಳ ತಮ್ಮಡಿ ಕಂಸಾಳೆ ಇವುಗಳನ್ನು ಬಹಳ ಪವಿತ್ರವೆಂದು ಪರಿಗಣಿಸಲ್ಪಡುವುದರಿಂದ ಇವು ಕಾಲಿಗೆ ಆಪ್ಪಿ ತಪ್ಪಿ ತಗಲಿದರೂ ಬಹಳ ಭಕ್ತಿಯಿಂದ ಅವುಗಳಿಗೆ ನಮಸ್ಕರಿಸಬೇಕು. ಆದ್ದರಿಂದ ನಮ್ಮ ಇಡೀ ವಂಶವೇ ಎರಡನೆಯದಾದ ಜಾನಪದ ಕಂಸಾಳೆ. ಇದು ನಮ್ಮ ಜೀವನ ಉಸಿರಾಗಿ ನಮಗೆ ಕೀರ್ತಿಗಳನ್ನು ಗಳಿಸಿಕೊಟ್ಟು ನಮ್ಮನ್ನು ಜೀವನಾಂಶಕ್ಕೆ ದಾರಿಯಾಗಿ ನಮ್ಮ ಕಾಪಾಡಿಕೊಂಡು ಬಂದ ಕಲೆಯಾಗಿದೆ. ಇದರಂತೆಯೇ ಇನ್ನು ಮುದೆಯೂ ಈ ಕಲೆಯಲ್ಲಿಯೇ ಜೀವನ ಸಾಗಿಸಿ ಈ ಕಲೆಗಾಗಿಯೇ ನನ್ನ ಪ್ರಾಣವನ್ನು ಮುಡುಪಾಗಿ ಇಡುತ್ತೇನೆ, ಇದು ನನ್ನ ಕೊನೆಯ ಆಸೆ.

**ರಾಣಿ ಮಾಚಯ್ಯ,** ಉಮ್ಮತ್ತಾಟ್ ಕಲಾವಿದೆ.

---

೧) ಜಾನಪದ ನಮ್ಮ ಸಂಸ್ಕೃತಿಯ ತಾಯಿಬೇರು ಎಂದರೆ ತಪ್ಪಲ್ಲ. ಇದರ ಬಗ್ಗೆ ವಿದ್ವಾಂಸರಲ್ಲಿ ತಿಳಿಸುವಂತಹುದು. ಇದರಲ್ಲಿ ಸಾಹಿತ್ಯಕವಾಗಿ ಏನೂ ಇಲ್ಲ ಎಂಬ ಭಾವನೆ ಇದ್ದ ಕಾರಣ ಇದು ಮೂಲೆಗುಂಪಾಗಿತ್ತು. ಆದರೆ ಇದರ ಸ್ವಾರಸ್ಯವನ್ನು ಮನಗಂಡು, ಭಾರತೀಯ ಜಾನಪದ ಸಂಗ್ರಹ ಕಾರ್ಯದಲ್ಲಿ ಮೊಟ್ಟ ಮೊದಲಿಗೆ ಆಸಕ್ತಿ ತೋರಿಸಿದವರು ಪಾಶ್ಚಾತ್ಯ ಮಿಷನರಿಗಳು. ಮತ ಪ್ರಚಾರಕ್ಕೆಂದು ಭಾರತಕ್ಕೆ ಬಂದ ಅವರು ಗ್ರಾಮಾಂತರ ಪ್ರದೇಶದ ಜನರ ಒಡನಾಟದೊಂದಿಗೆ ತಮ್ಮ ಮತಾಂತರ ಕಾರ್ಯಕ್ಕಾಗಿ ಆತ್ಮೀಯವಾಗಿ ಬೆರೆಯತೊಡಗಿದರು. ಇದರಿಂದಾಗಿ ಅವರ ಒಡನಾಟದೊಂದಿಗೆ ಸಂಸ್ಕೃತಿಯ ತಾಯಿಬೇರಾದ ಜಾನಪದ ಕಲೆಯ ಬಗ್ಗೆ ಆಸಕ್ತಿ ತಳೆದು ಅದರ ಸಂಗ್ರಹಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜಿ. ಸ್ಟೀವನ್‌ಸನ್ ಗ್ರೀನ್‌ವುಡ್, ಮೋಗ್ಲಿಂಗ್ ಮೊದಲಾದ ಪಾಶ್ಚಿಮಾತ್ಯರು ೧೯ನೇ ಶತಮಾನದಲ್ಲಿ ತೋರಿಸಿದ ಆಸಕ್ತಿ, ಮಾಡಿದ ಸಾಧನೆ, ದೇಶೀಯ ವಿದ್ವಾಂಸರ ಮೇಲೆ ತಕ್ಕ ಮಟ್ಟಿನ ಪ್ರಭಾವವನ್ನುಂಟುಮಾಡಿತು. ಇದರ ಫಲಶ್ರುತಿಯಾಗಿ ಬಾಗಿಲು ತಡೆಯುವ ಪದಗಳು, ಅರ್ಜುನ ಜೋಗಿ .. ಮುಂತಾದ ಪ್ರಕಟಣೆಗಳು ಬೆಳಕಿಗೆ ಬಂದವು. ೧೯ನೇ ಶತಮಾನದಲ್ಲಿ ಪ್ರಾರಂಭವಾದ ಜಾನಪದ ಸಂಗ್ರಹ ಕಾರ್ಯ ೨೦ನೇ ಶತಮಾನದ ಆದಿಭಾಗದವರೆಗೂ ಮುಂದುವರಿಯಿತು. ಆ ನಂತರ ವಿದ್ವಾಂಸರಲ್ಲಿ ಈ ಸಂಗ್ರಹಕಾರ್ಯ ಸ್ವಲ್ಪ ಮಟ್ಟಿಗೆ ನಿಧಾನವಾಯಿತು. ಇದಕ್ಕೆ ಉದಾಹರಣೆ ಎಂಬಂತೆ ಜಾನಪದ ಅಧ್ಯಯನದಲ್ಲಿ ಅತ್ಯಂತ ಮಹತ್ವದ ಸ್ಥಾನಕ್ಕೆ ಅರ್ಹವಾದ 'ಪಟ್ಟೋಲೆ ಪಳಮೆ' ತೀರಾ ಇತ್ತೀಚಿನವರೆಗೆ ಅಜ್ಞಾತವಾಗಿಯೇ ಉಳಿದು ಹೋಗಿರುವುದಕ್ಕೆ ಸಾಕ್ಷಿ.

ವಿದ್ವಾಂಸರು ಈ ನಿಟ್ಟಿನಲ್ಲಿ ಗಮನಾರ್ಹವಾದ ಕೆಲಸ ಮಾಡುತ್ತಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ೧೯೬೬ರಲ್ಲಿ ಜಾನಪದವನ್ನು ಒಂದು ಅಧ್ಯಯನ ವಿಷಯವಾಗಿ ಕನ್ನಡ

ಸ್ನಾತಕೋತ್ತರ ಪದವಿಗೆ ಅಳವಡಿಸುವುದರ ಮೂಲಕ ಮೈಸೂರು ವಿಶ್ವವಿದ್ಯಾನಿಲಯವು ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. ಜೀ. ಶಂ. ಪರಶಿವಯ್ಯ, ಹಾ.ಮಾ. ನಾಯಕ, ದೇಜಗೌ, ಪಿ.ಆರ್. ತಿಪ್ಪೇಸ್ವಾಮಿ ಮೊದಲಾದವರು ಗಣನೀಯವಾದ ಸಾಧನೆ ಮಾಡಿರುವವರು. ಕನ್ನಡ, ತುಳು, ಕೊಂಕಣಿ, ಕೊಡವ ಇತ್ಯಾದಿ ಎಲ್ಲಾ ಭಾಷೆಗಳಲ್ಲಿಯೂ ಕತೆ, ಹಾಡು, ಲಾವಣಿ, ಒಗಟು, ಗಾದೆ ಮುಂತಾದ ಎಲ್ಲಾ ಪ್ರಕಾರಗಳಲ್ಲಿಯೂ ಗಣನೀಯವಾದ ಪ್ರಮಾಣದಲ್ಲಿ ಜಾನಪದ ವ್ಯವಸಾಯ ನಡೆದಿದ್ದರೂ ಅದು ಕೇವಲ ಹಿಂದಿನ ವಿದ್ವಾಂಸರು ಮಾಡಿಟ್ಟ ಕಾರ್ಯಕ್ಕೆ ಅಲ್ಲಲ್ಲಿ ತೇಪೆ ಹಾಕಿದಂತೆ ಅಲ್ಪ ಸ್ವಲ್ಪ ಮಾರ್ಪಾಡಿನೊಂದಿಗೆ ಕ್ಷೇತ್ರಕಾರ್ಯಗಳು ನಡೆದಿವೆಯೇ ಹೊರತು ಹೆಚ್ಚಿನ ಜನಪ್ರಿಯತೆಯ ಸಾಧನೆ ಮಾಡಿಲ್ಲವೆಂಬುದು ಖೇದಕರ ವಿಷಯ.

ವಿಶ್ವವಿದ್ಯಾಲಯಗಳು, ನಗರ ಪ್ರದೇಶಗಳಲ್ಲಿ ಜಾನಪದ ಸಾಹಿತ್ಯ ಕಲೆಗಳು ಅಲ್ಪ ಸ್ವಲ್ಪ ಕಾರ್ಯ ನಡೆಸುತ್ತಿವೆ. ಉದಾಹರಣೆಗೆ ಹೇಳುವುದಾದರೆ ದಸರಾ ಸಮಯದಲ್ಲಿ ಆಯಾಯ ಜಿಲ್ಲೆಗಳ ಜಾನಪದ ಸಂಸ್ಕೃತಿಯನ್ನು ಸ್ತಬ್ಧ ಚಿತ್ರಗಳೊಂದಿಗೆ ಪ್ರದರ್ಶನ ಮಾಡಿ ಮತ್ತೆ ತಪ್ಪಿದರೆ ಇನ್ನೊಂದು ದಸರಾ ಬಂದಾಗ ಮಾತ್ರ ಅದಕ್ಕೆ ಚಾಲನೆ ಸಿಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಂತೂ ಜಾನಪದ ಸಂಸ್ಕೃತಿ ನಶಿಸುತ್ತಿದೆ. ಮುಗ್ಧರು ತಮ್ಮ ಬದುಕಿನ ಬವಣೆಗಳನ್ನು ಮರೆಯುವುದಕ್ಕಾಗಿ ಕತೆ, ಹಾಡು, ಲಾವಣಿಗಳನ್ನು ಬದುಕಿನ ಅವಿಭಾಜ್ಯ ಅಂಗವೆಂದು ಭಾವಿಸಿದ್ದ ಕಾಲವೊಂದಿತ್ತು. ಕಷ್ಟ ಸುಖದ ಹೊರೆಯನ್ನು ಕಮ್ಮಿ ಮಾಡಿಕೊಳ್ಳುತ್ತಿದ್ದ ಈ ಜಾನಪದ ಕಲೆಯು ಹಿರಿಯ ತಲೆಮಾರಿನೊಂದಿಗೆ ಕಣ್ಮರೆಯಾಗುತ್ತಿದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ನಮ್ಮ ಜಾನಪದ ಕಲೆಯನ್ನು ಮೂಲೆಗುಂಪಾಗಿಸಿರುವುದು.

ಹಾಗಾದರೆ ಇದರ ಉಳಿಯುವಿಕೆ ಹಾಗೂ ಬೆಳವಣಿಗೆಯಾಗಬೇಕಾದರೆ ವಿದ್ವಾಂಸರ ಗಮನ ಹಳ್ಳಿಗಾಡಿನ ಜನತೆಯತ್ತ ಹೊರಳಬೇಕು. ಕಾಂಕ್ರೀಟು ಕಟ್ಟಡದ ನಾಲ್ಕು ಗೋಡೆಗಳ ಒಳಗೆ ನಡೆಯುತ್ತಿರುವ ಸಂಶೋಧನೆಗಳು ಇಂದು ಬಾಹ್ಯ ಜಗತ್ತಿಗೆ ಕಾಲಿಡಬೇಕಾಗಿದೆ. ಗ್ರಾಮಾಂತರ ಹಿರಿಯ ಜೀವಿಗಳೊಂದಿಗೆ ಆತ್ಮೀಯತೆಯಿಂದ ಸಂಶೋಧನೆ ಮಾಡುವುದು ಅಗತ್ಯ. ಗ್ರಾಮೀಣ ಜನತೆಯ ಗುಡ್ಡಗಾಡು ವಾಸಿಗಳೊಂದಿಗೆ ಸಂಪರ್ಕಿಸಿ. ಅವರ ನೋವು ನಲಿವುಗಳಿಗೆ ಸ್ಪಂದಿಸಿದಾಗ ವಿದ್ವಾಂಸರ ಸಂಶೋಧನಾ ಕಾರ್ಯ ಹೆಚ್ಚಿನ ಸಫಲತೆ ಪಡೆಯುವುದು ಖಂಡಿತ. ಇಲ್ಲದಿದ್ದರೆ ಯಾರೋ ಸಂಗ್ರಹಿಸಿಟ್ಟ ಜಾನಪದ ಕಲೆ ಹಾಗೂ ಸಂಸ್ಕೃತಿಗೆ ತೇಪೆ ಹಾಕಿದಂತೆ ಆಗುತ್ತದೆಯೇ ಹೊರತು ಬೇರೇನೂ ಸಾಧನೆ ಆಗುವುದಿಲ್ಲ.

ನಮ್ಮ ಕೋಲಾಟದ ಪದಗಳು, ಸೋಬಾನೆ ಪದಗಳು ಇತ್ಯಾದಿಗಳು ಇಂದಿಗೂ

ಬೆರಳೆಣಿಕೆಯಷ್ಟು ಹಿರಿಯರ ಬಳಿ ಇರುವುದು. ಅದರ ಸಂಗ್ರಹ ಕಾರ್ಯ ಆಗಬೇಕು. ವಿದ್ವಾಂಸರ ದೃಷ್ಟಿ ಎಲೆಮರೆ ಕಾಯಂತಿರುವ ಅವರ ಕಡೆ ಹರಿಯಬೇಕಾಗಿದೆ. ಇಂದಿನ ಯುವ ಪೀಳಿಗೆಗೆ ಅದರ ಸೊಗಡಿನ ಪರಿಚಯ ಅತೀ ಅಗತ್ಯ. ಪಠ್ಯ ಪುಸ್ತಕಗಳ ರಚನಾ ಸಮಿತಿಯವರು ಒಂದೊಂದು ಹಂತದ ಪಠ್ಯ ವಸ್ತುವಿನಲ್ಲಿ ಜಾನಪದ ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯ ಮಾಡಬೇಕು.

ಗ್ರಾಮಾಂತರ ಪ್ರತಿಭೆಯನ್ನು ಗುರುತಿಸಿ, ಅವರನ್ನು ಪ್ರೋತ್ಸಾಹಿಸುವ ಕಾರ್ಯವನ್ನು ವಿದ್ವಾಂಸರೆನಿಸಿದವರು ಮಾಡಬೇಕು. ಕ್ಯಾಸೆಟ್ ಹಾಕಿಕೊಂಡು ಮನ ಬಂದಂತೆ ದೇಹವನ್ನು ಬಳುಕಿಸಿಕೊಂಡು ಕುಣಿಯುವ ಇಂದಿನ ಸಂಸ್ಕೃತಿಗೆ ಸ್ವಲ್ಪ ಮಟ್ಟಿನ ತೆರೆ ಎಳೆದಾಗ ಮಾತ್ರ, ನಮ್ಮ ಜಾನಪದ ಕಲೆಯನ್ನು ಉಳಿಸಿಕೊಳ್ಳುವುದು ಸಾಧ್ಯ. ಇಂದಿನ ಯುವ ಜನತೆಯಲ್ಲಿ ಜಾನಪದ ಕಲೆ ಎಂದರೆ ಗ್ರಾಮಾಂತರ ಪ್ರದೇಶದ ಬಡವರ, ಅಲೆಮಾರಿಗಳ, ಬುಡಕಟ್ಟುಜನರ ಕಲೆ ಎಂಬ ಕೀಳರಿಮೆಯನ್ನು ದೂರಮಾಡಿ, ಅರಿವು ಮೂಡಿಸುವ ಕೆಲಸವನ್ನು ವಿದ್ವಾಂಸರು ಮಾಡಬೇಕು.

೨) ಈ ನಿಟ್ಟಿನಲ್ಲಿ ಜಾನಪದ ಅಕಾಡೆಮಿಯು ಹಲವು ಹತ್ತು ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅಗತ್ಯ.

೧) ಜಿಲ್ಲೆಗೊಂದು ಜಾನಪದ ಅಕಾಡೆಮಿ ಸ್ಥಾಪನೆಯಾಗಬೇಕು.

೨) ಬೇರೆ ಬೇರೆ ಭಾಷೆಗಳ ಕಲಾವಿದರೆಲ್ಲರೂ ಒಟ್ಟುಗೂಡಿ, ಪರಸ್ಪರ ವಿಚಾರ ವಿನಿಮಯದೊಂದಿಗೆ ಉತ್ತಮ ಜಾನಪದ ಕೃತಿಗಳ ಸಂಗ್ರಹಕಾರ್ಯ ನಡೆಯಬೇಕಾಗಿದೆ.

೩) ಕಲಾವಿದರೆಲ್ಲರೂ ವರ್ಷಕ್ಕೊಂದಾವರ್ತಿಯಾದರೂ ಜಿಲ್ಲಾ ಮಟ್ಟದಲ್ಲಿ ಒಟ್ಟುಗೂಡಿ, ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶವಿರಬೇಕು.

೪) ಹೋಬಳಿ ಮಟ್ಟದಲ್ಲಿ ತಿಂಗಳಿಗೊಂದಾವರ್ತಿ ಒಟ್ಟು ಸೇರಿ, ಗ್ರಾಮೀಣ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸುವ ಪರಂಪರೆ ಬೆಳೆಸಿಕೊಳ್ಳುವುದು.

೫) ಕಲಾವಿದರಿಗೆ ಅವರವರ ಕಾರ್ಯಕ್ಕನುಗುಣವಾಗಿ ಗೌರವಧನವನ್ನು ಕೊಟ್ಟು ಪ್ರೋತ್ಸಾಹಿಸುವುದು.

೬) ದಸರಾದಂತಹ ನಾಡಹಬ್ಬಗಳಲ್ಲಿ ಜಾನಪದ ಕಲಾವಿದರಿಗೆ ಮಾನ್ಯತೆ ನೀಡುವುದು ಆರೋಗ್ಯಕರ ಬೆಳವಣಿಗೆ.

೭) ಬಯಲುರಂಗ ಮಂದಿಗಳ ಸ್ಥಾಪನೆಯೊಂದಿಗೆ ಜಾನಪದ ಸಂಸ್ಕೃತಿಯನ್ನು ನಾಟಕ, ಹಾಡುಗಾರಿಕೆ, ಕೋಲಾಟ, ಲಾವಣಿ, ಒಗಟುಗಳು ಇತ್ಯಾದಿಗಳ ಮೂಲಕ ಪರಿಚಯಿಸುವಿಕೆ. ತಮ್ಮಲ್ಲಿ ಹುದುಗಿರುವ ಪ್ರತಿಭೆಯನ್ನು ಜಿಲ್ಲಾ, ರಾಷ್ಟ್ರ ಮಟ್ಟದಲ್ಲಿ ಪ್ರದರ್ಶಿಸುವ ಅವಕಾಶ ಅಜ್ಞಾತ ಜಾನಪದ ಕಲಾವಿದರಿಗೆ ಸಿಕ್ಕುವಂತೆ ಮಾಡುವುದು. ಇತ್ಯಾದಿ ಇತ್ಯಾದಿಗಳನ್ನು ಜಾನಪದ ಅಕಾಡೆಮಿಗಳು ಮಾಡುವುದು ಒಳ್ಳೆಯದು. ಉತ್ತಮವಾದ ಜಾನಪದ ಸಾಹಿತ್ಯಗಳ ಕೊರತೆ ನೀಗಬೇಕಾಗಿರುವುದು.

೮) ಜಾನಪದದ ವ್ಯಾಪಕ ಸಂಶೋಧನೆ ಮತ್ತು ಅಧ್ಯಯನಕ್ಕಾಗಿ ವಿವಿಧ ಜಾನಪದ ವಿಷಯಗಳಿಗೆ ಪ್ರತ್ಯೇಕ ಪ್ರತ್ಯೇಕ ಇಲಾಖೆಗಳುಳ್ಳ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆಯ ಅಗತ್ಯ ಇದೆ.

೯) ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ಪರಿಷತ್ತಿನಲ್ಲಿ ಜಾನಪದ ಸಂವರ್ಧನ ಕಾರ್ಯಕ್ಕಾಗಿ ಸಾಕಷ್ಟು ಹಣವನ್ನು ಮೀಸಲಿಡುವುದು. ಜಿಲ್ಲೆಗೊಬ್ಬ ಜಾನಪದ ಸಂಯೋಜನಾಧಿಕಾರಿ ಇದರ ಮಾರ್ಗದರ್ಶಕರಾಗಿರುವುದು.

೧೦) ಗ್ರಾಮಾಂತರ ಪ್ರದೇಶದ ಹಿರಿಯ ಕಲಾವಿದರುಗಳನ್ನು ಆಯ್ದು ಯುವಕರಿಗೆ ಜಾನಪದ ಕಲಾ ಶಿಬಿರಗಳ ಮುಖಾಂತರ ತರಬೇತು ಕೊಡುವ ವ್ಯವಸ್ಥೆ ಮಾಡುವುದು.

೧೧) ಜಾನಪದ ಕಲಾ ತಂಡಗಳಿಗೆ ಸಹಾಯಧನ ನೀಡಿ ವೇಷಭೂಷಣ ಹಾಗೂ ಪ್ರದರ್ಶನಗಳ ಅವಕಾಶವನ್ನು ಕಲ್ಪಿಸಿಕೊಡುವುದು ಸೂಕ್ತ. ಜಿಲ್ಲೆಯಲ್ಲಿ ಜಾನಪದಕ್ಕಾಗಿ ಕೆಲಸ ಮಾಡುವ ಒಳ್ಳೆಯ ಸಂಘ ಸಂಸ್ಥೆಗಳನ್ನು ಗುರುತಿಸಿ ಅವರಿಗೆ ಆರ್ಥಿಕ ನೆರವನ್ನು ಜನಪದ ಕಲೆಯ ಸಂವರ್ಧನೆಗಾಗಿ ಪ್ರೋತ್ಸಾಹಿಸುವಿಕೆ.

೧೨) ಜನಪದ ಕಲೆಗಳಾದ ನೃತ್ಯ, ನಾಟಕ, ಕತೆ, ಗೀತೆ, ಗಾದೆ, ಒಗಟು ಲಾವಣಿಗಳನ್ನು ಜನಪದ ಮಾಹಿತಿ ಹಿನ್ನೆಲೆಯಲ್ಲಿ ಸಂಗ್ರಹಿಸಿ ಧ್ವನಿಮುದ್ರಿಸಿಡುವುದರಿಂದ ಇಂದಿನ ಪೀಳಿಗೆಯವರಿಗೆ ಅದರ ಮೌಲ್ಯದ ಮಾಹಿತಿ ಸಿಗುವುದು. ಶಾಲಾ ಕಾಲೇಜುಗಳಲ್ಲಿ ಜನಪದ ಕಲೆಗಳ ಕಾರ್ಯಾಗಾರ.

೩) **ಜಾನಪದ** : ಜನಪದ ಕಲೆ ತಲೆಮಾರಿನಿಂದ ಬದುಕಿನೊಂದಿಗೆ ಹಾಸುಹೊಕ್ಕಾಗಿ ಬಂದಿರುವ ಸಂಸ್ಕೃತಿ. ಅಕ್ಷರಸ್ಥರು, ಮುಗ್ಧರು, ಗ್ರಾಮಾಂತರ ಪ್ರದೇಶದ ನಿವಾಸಿಗಳು

ತಮ್ಮ ಬದುಕಿನ ನೋವು ನಲಿವು ಸುಖ ದುಃಖವನ್ನು ಹಂಚಿಕೊಂಡ ಸಂಸ್ಕೃತಿಗೆ ತಮ್ಮ ಬದುಕಿನ ಸ್ವಾರಸ್ಯವನ್ನು ನೀಡಿದ್ದಾರೆ. ಅವುಗಳು ಕತೆಗಳೇ ಆಗಬಹುದು. ಲಾವಣಿಗಳೇ ಆಗಬಹುದು, ಒಗಟುಗಳೇ ಆಗಿರಬಹುದು. ಕೋಲಾಟದ ಪದಗಳೇ ಆಗಿರಬಹುದು ಇದು ಕೆಲವರ ಸ್ವತ್ತಲ್ಲ. ಹಲವರ ಸ್ವತ್ತು. ತಮ್ಮದೇ ಆದ ರಾಗದಿಂದ ಹಲವರು ಸೇರಿ ಬಿಂಬಿಸುವ ಸಾಂಸ್ಕೃತಿಕ ಕಲೆ.

ಇದರ ಮರ್ಮ ಬದುಕಿನ ಆಯಾಸ, ನೋವನ್ನು ಮರೆಯುವುದು. ಜನರ ಊರಿನ ಹಿತವನ್ನು ಬಯಸುವುದು. ಅದಕ್ಕಾಗಿ ಯಾವ ತ್ಯಾಗಕ್ಕೂ ಹಿಂಜರಿಯದ ತಾತ್ವಿಕತೆಯ ಮೇಲೆ ನಿಂತಿರುವುದೇ ಈ ಜಾನಪದ ಕಲೆಯ ವೈಶಿಷ್ಟ್ಯ. ಉದಾಹರಿಸುವುದಾದರೆ ಹೆಚ್ಚಿನವರಿಗೆ ತಿಳಿದಿರುವ ಕೆರೆಗೆ ಹಾರ ಜಾನಪದ ಕತೆ. ಊರಿನ ಹಿತಕ್ಕಾಗಿ ಕೆರೆಯನ್ನು ಕಟ್ಟಿಸಿದ ಮಲ್ಲನಗೌಡ ತನ್ನ ಉದ್ದೇಶ ಸಾಫಲ್ಯತೆ ಕಾಣದಿದ್ದಾಗ ಕೆರೆಗೆ ಹಾರ (ಬಲಿ) ಕೊಡಬೇಕೆಂದು ತಿಳಿದ ಮಲ್ಲನಗೌಡ ಅದಕ್ಕಾಗಿ ತನ್ನ ಕಿರಿಯ ಸೊಸೆ ಭಾಗೀರಥಿಯನ್ನೇ ಬಲಿಯಾಗಿಸುವುದು, ಗಂಡ ದೂರದ ಸೈನ್ಯದಲ್ಲಿದ್ದರೂ ಲೆಕ್ಕಿಸದೆ ಮಾವನ ಮಾತಿಗೆ ಬೆಲೆ ಕೊಡುವಳು. ತನ್ನ ಒಬ್ಬಳ ಬದುಕಿಗಿಂತ ಊರಿನವರ ಬದುಕಿಗೆ ಬೆಲೆ ಕಟ್ಟಿದ ಭಾಗೀರಥಿಯ ಕತೆ ಜಾನಪದ ಸಾಹಿತ್ಯದಲ್ಲಿನ ಒಂದು ಶ್ರೇಷ್ಠ ಉದಾಹರಣೆ. ಈ ರೀತಿ ಹಲವು ಹತ್ತು ರೀತಿಯ ಜಾನಪದ ಕಲೆ ಇಂದಿಗೂ ಗ್ರಾಮಾಂತರ ಬದುಕಿನೊಂದಿಗೆ ಬೆಸೆದುಕೊಂಡಿದೆ.

ಉತ್ತಮ ಸಾಹಿತ್ಯ ನಿರ್ಮಾಣ, ಜಾನಪದ ಕಲೆ ಹಾಗೂ ಕಲಾವಿದರಿಗೆ ಪ್ರೋತ್ಸಾಹ ಮಾಡುವುದರಿಂದ ಮೂಲೆಗುಂಪಾಗಿರುವ ಈ ಕಲೆಯನ್ನು ಜಾನಪದ ವಿದ್ವಾಂಸರು, ಬೆಳೆಸುವುದರೊಂದಿಗೆ ಉಳಿಸಿಕೊಂಡು ಹೋಗಬಹುದಾಗಿದೆ. ಪಾಶ್ಚಾತ್ಯ ಸಂಸ್ಕೃತಿಗಿಂತ ನಮ್ಮ ಜಾನಪದ ಸಂಸ್ಕೃತಿಯು ಹೆಚ್ಚು ಸಂಪದ್ಭರಿತವಾಗಿರುವುದು ಇಂದಿನ ಯುವ ಜನತೆಗೆ ಅರಿವಾಗುವುದು.

ಮಾನವನ ಅನುಭವಗಳ ಶ್ರೀಮಂತಭರಿತ ಜನಾಂಗದ ಸಂಸ್ಕೃತಿಯ ಅಧ್ಯಯನಕ್ಕೆ ಅತ್ಯಮೂಲ್ಯವಾದ ಸಾಮಗ್ರಿ. ಇದು ಎಷ್ಟು ಸಂಪದ್ಭರಿತವೆಂದರೆ ಆಧುನಿಕ ವಿದ್ವಾಂಸರ ಆಸಕ್ತಿಯನ್ನು ಸೆಳೆಯುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಸಮೃದ್ಧವಾದ ಜನಪದ ಸಾಹಿತ್ಯ, ಕಲೆಯನ್ನು ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿರುವುದು.

## ಬಸವಲಿಂಗಯ್ಯ ಹಿರೇಮಠ, ಜನಪದ ಗಾಯಕರು

ನಿಸರ್ಗದಲ್ಲಿ ಜೀವಿಗಳ ಹುಟ್ಟಿನೊಂದಿಗೆ ಅವಿಭಾಜ್ಯ ಅಂಗವಾಗಿ ಬೆಳೆದು ಬಂದ ಜಾನಪದದ ಹುಟ್ಟಿನ ಇತಿಹಾಸ ಪ್ರಾಚೀನವಾದದ್ದು, ಸಂಜ್ಞೆ, ಕೂಗು, ಅಂಗಚಲನೆಯಿಂದ ಬರುಬರುತ್ತ ಭಾಷೆ ಸೃಷ್ಟಿಸಿಕೊಂಡ ಮಾನವ ಮಾತನಾಡುವುದನ್ನು ಕಲಿತ. ತನ್ನ ಒಟ್ಟುಗೂಡಿ ಇದ್ದವರೊಂದಿಗೆ ಪ್ರತಿದಿನದ ಬದುಕಿನ ವಿವಿಧ ಹಂತಗಳಲ್ಲಿ ಈ ಜನಪದವನ್ನು ಒಟ್ಟಾಗಿ ಮುಂದುವರಿಸಿಕೊಂಡು ಬಂದ. ಬದುಕನ್ನು ಹಂತ ಹಂತವಾಗಿ ಸುಧಾರಿಸಿಕೊಳ್ಳಲು ಹಲವಾರು ವಿದ್ಯೆ, ಉದ್ಯೋಗ, ಒಡನಾಡಿ, ಮನೋರಂಜನೆ ಅವಶ್ಯಕತೆಗಳ ಹುಡುಕಾಟದಲ್ಲಿ ಬರುವ ಎಲ್ಲ ಕ್ರಿಯೆಗಳನ್ನು ನಾವು ಜನಪದ ಬದುಕು ಎಂದರೆ ತಪ್ಪಾಗಲಾರದು.

ಬದುಕುವ ಜೀವಿಯ ಹುಡುಕಾಟದಲ್ಲಿ ಬರುವ ವಸ್ತುಗಳಿಗೆ, ಸಮಸ್ಯೆಗಳಿಗೆ, ಅವುಗಳನ್ನು ಎದುರಿಸಿ ಪರಿಹಾರ ಕಂಡುಕೊಳ್ಳುವಲ್ಲಿ ಜಾನಪದದ ಲೇಪನ ಇದ್ದೇ ಇರುತ್ತದೆ. ಒಟ್ಟಾರೆ ಜಾನಪದವೆಂದರೆ ಜೀವಿಗಳ ಬದುಕಿನೊಂದಿಗೆ ಬರುವ, ಕ್ರಿಯೆಗಳು, ವಸ್ತುಗಳು, ಮನೋರಂಜನೆಯ ಆಕರಗಳು, ಸಾರ್ವತ್ರಿಕ ಸಂಸ್ಕಾರ, ಆರಾಧನೆಯ ರೂಪ ವಸ್ತುಗಳು ಅನುಸರಿಸುವ ನಂಬಿಕೆಗಳು, ಉಡುಪುಗಳು ಅವಿಷ್ಕಾರಗಳು, ಜಾತ್ರೆ, ಹಬ್ಬ ಹರಿದಿನಗಳಲ್ಲಿ ಬರುವ ತಾರತಮ್ಯಗಳು ಒಟ್ಟಾರೆ ಬದುಕಿನಲ್ಲಿ ಹರಡಿಕೊಂಡು ಬರುವ ಎಲ್ಲವನ್ನೂ ವಿಶಾಲ ಅರ್ಥದಲ್ಲಿ 'ಜಾನಪದ' ಎನ್ನಬಹುದು.

ಈಗಂತೂ ಮಾನವ ಗಗನದೆತ್ತರ ಬೆಳೆದಿದ್ದಾನೆ. ಕಾಲ 'ಸಂಸ್ಕೃತಿ' ಎಂಬ ವಿಶಾಲ ಅರ್ಥದಲ್ಲಿ ಎಲ್ಲವನ್ನು ಸಂಶೋಧನೆಯ ತೆಕ್ಕೆಗೆ ಸಿಲುಕಿಸಿ ಆಕಾರ ನೀಡುತ್ತಿರುವ ಈ ಸಂದರ್ಭದಲ್ಲಿ ಸಾಹಿತ್ಯದಲ್ಲಿ ಹಲವಾರು ಪ್ರಕಾರಗಳನ್ನು ಕಂಡುಕೊಂಡಿದ್ದಾನೆ. ಆದರೆ ಅಂತರಶಿಸ್ತಿನ ಅಧ್ಯಯನದೊಂದಿಗೆ ಎಲ್ಲವನ್ನು ಒರೆ ಹಚ್ಚಿನೋಡಿದರೆ. ಪ್ರತಿಯೊಂದು ಸಾಹಿತ್ಯದ ಪ್ರಕಾರಕ್ಕೆ, ಜಾನಪದ ಸಾಹಿತ್ಯದ ಲೇಪ ಹರಡಿರುವುದನ್ನು ಕಂಡುಕೊಂಡಿದ್ದಾನೆ. ಜಾನಪದ ಬಿಟ್ಟು ಬದುಕಿನ ಸುರಳಿತ ಸಾಗುವಿಕೆ ಸಾಧ್ಯವಿಲ್ಲ ಎಂದಾಗ ಜಾನಪದ, ಜೀವಿಗಳ

ಅವಿಭಾಜ್ಯ ಅಂಗ, ಜಾನಪದ ಜನಾಂಗೀಯ ಬದುಕು. ಜಾನಪದ ಜೀವಿಗಳ ಬದುಕು ಎಂಬ ಮಹತ್ವದ ವಿಚಾರಗಳತ್ತ ನಮ್ಮ ಸಂಶೋಧಕರ ಚಿತ್ತ ಮತ್ತು ಜಾಗತಿಕ ಜನರು ಜಾನಪದವನ್ನು ಒಂದು ವಿಶಿಷ್ಟ ಸ್ಥಾನದಲ್ಲಿ ಇಟ್ಟು ಅಂತರ್‌ಶಿಸ್ತಿನ ಅಧ್ಯಯನಕ್ಕೆ ಒಳಪಡಿಸುತ್ತಿರುವುದು ಜಾಗತಿಕ ಮಟ್ಟದಲ್ಲಿ ಜಾನಪದಕ್ಕೆ ಇರುವ ಕಲ್ಪನೆಯ ವಿಕಾಸ ಎದ್ದು ಕಾಣುತ್ತದೆ.

೧೯೫೦ ರಿಂದ ಈಚೆಗೆ ವಿಶ್ವವಿದ್ಯಾಲಯದ ಮಟ್ಟದಲ್ಲಿ ಜಾನಪದದ ಬಗ್ಗೆ ಆದ ಕ್ಷೇತ್ರಕಾರ್ಯ, ಸಂಶೋಧನೆ, ಅಧ್ಯಯನಗಳ ಸುರಿಮಳೆಯನ್ನೇ ಕಾಣುತ್ತೇವೆ. ಆದರೆ ಈ ಅಧ್ಯಯನಗಳ ಹಿಂದೆ ಹಿರಿಯರ, ಜಾನಪದ ಜೀವಿಗಳ, ಜಾನಪದ ಕಲಾವಿದರ, ಅನುಭವಿಗಳ ಕೊಡುಗೆ ಅಪಾರವಾಗಿದೆ. ಇಲ್ಲಿ ಸಂಶೋಧಕ ಕ್ರಿಯಾಶೀಲನಾಗಿ ಕೆಲಸ ಮಾಡಿದ್ದು ಹೊಸ ಸಾಧ್ಯತೆಗಳ ಬಗ್ಗೆ ಚಿಂತಿಸುವ ಹಾದಿಯಲ್ಲಿದ್ದರೆ. ಇನ್ನು ಕೆಲವರು ಏಜೆಂಟರಂತೆ ಕೆಲಸ ಮಾಡಿದ್ದು ಜಾನಪದದ ಬೆಳವಣಿಗೆಗೆ ಕುಂಠಿತವಾಗಿ ಸಂಶೋಧನೆಯ ಆಕರದಂತಿರುವ ಚೇತನಗಳಿಗೆ ನೋವಾಗಿದೆ. ಏನೇ ಆದರೂ ಜಾನಪದದ ಬಗ್ಗೆ ಸಂಶೋಧನೆಗಳು ವಿಪುಲವಾಗಿ ನಡೆದು ಜಾನಪದ ಜಗತ್ತು ತಕ್ಕ ಮಟ್ಟಗೆ ಅಗ್ರ ಪಂಕ್ತಿಯಲ್ಲಿ ಇದೆ ಎನ್ನುವುದೊಂದೇ ಸಮಾಧಾನ.

ಜಾನಪದ ವಸ್ತುಗಳು, ಜಾನಪದ ಉಡುಗೆ ತೊಡುಗೆ, ಜಾನಪದ ನಂಬಿಕೆಗಳು, ಜಾನಪದ ಆರಾಧನೆಗಳು, ಜಾನಪದ ಔಷಧಿಗಳು, ಜಾನಪದ ಸಾಹಿತ್ಯದ ವಿವಿಧ ಮಜಲುಗಳು ಮತ್ತು ಜಾನಪದವನ್ನು ಜೀವಂತವಾಗಿಟ್ಟು ಕಾಪಾಡಿದ, ಜಾನಪದ ಕಲೆಗಳ ಎಲ್ಲ ಪ್ರಕಾರಗಳ ಬಗ್ಗೆ ಅಧ್ಯಯನ ನಡೆದುಕೊಂಡು ಬಂದರೂ ಸಾಗರದಂತಿರುವ ಜಾನಪದ ಕ್ಷೇತ್ರದಲ್ಲಿ ಇನ್ನೂ ಬಗಿಯಬೇಕಾದ್ದು ಬಹಳಷ್ಟಿದೆ. ಸದ್ಯಕ್ಕೆ ದೊರಕಿದ್ದು ಇಷ್ಟು ದೊರಕದ್ದು ಇನ್ನೂ ಅಗೋಚರ ಎಂಬುದಕ್ಕೆ ಇಂಬು ಸಿಕ್ಕಿದೆ.

ಜಾನಪದದ ಸ್ವಭಾವ, ಸ್ವರೂಪ, ಚಟುವಟಿಕೆಗಳಿಗೆ ಜೀವಿಯು ಬದುಕಿನ ನಿರ್ವಹಣೆಯಲ್ಲಿ ಬರುವ ದಿನನಿತ್ಯದ ಸಂಬಂಧಗಳು, ಸಮಸ್ಯೆಗಳು, ಸಮಸ್ಯೆಗಳ ನಿವಾರಣೆಗೆ ಹುಟ್ಟುವ ಹೊಸ ಸಾಧ್ಯತೆಗಳ ಸ್ಪಂದನಗಳೂ ಕೂಡಾ ಜಾನಪದದ ಲೇಪ ಅಂಟಿಕೊಂಡವುಗಳಾದರೂ ಈ ಜಾನಪದ ಜೀವನ ಚಿತ್ರಣವು ಸ್ಪಷ್ಟವಾಗಿ ಗೋಚರಿಸಲು ಪ್ರಮುಖ ಸಾಧನ ನಮ್ಮ ಅಪರೂಪದ ಜಾನಪದ ಕಲೆಗಳು.

ಈ ಜಾನಪದ ಕಲೆಗಳು ಭೌಗೋಳಿಕವಾಗಿ ಮತ್ತು ಪ್ರಾದೇಶಿಕವಾಗಿ ಪ್ರತಿ ೫೦ ಕಿ.ಮೀಟರ್ ಅಂತರದಲ್ಲಿ ಆಯಾ ಮಣ್ಣಿನ ಗುಣ, ಸಾಮಾಜಿಕ, ರಾಜಕೀಯ, ಆರ್ಥಿಕ, ಹಿನ್ನೆಲೆಯ ಪ್ರಭಾವದಿಂದ ಅಲ್ಪ ಸ್ವಲ್ಪ ಬದಲಾವಣೆ ಕಾಣುತ್ತ ಅಸಂಖ್ಯಾತ ಕಲೆಗಳು ಇದ್ದದ್ದು ನಮಗೆ ಗೋಚರವಾಗುವುದು ಸತ್ಯ.

ಆ ನಿಟ್ಟಿನಲ್ಲಿ ನಮ್ಮ ಜಾನಪದ ಅಕಾಡೆಮಿಯ ಈಗಿನ ಅಧ್ಯಕ್ಷರು ಶ್ರೀಯುತ

ರಾಮಚಂದ್ರೇಗೌಡ್ರು, ಒಂದಲ್ಲ ಒಂದು ಹೊಸ ವಿಚಾರಗಳಿಂದ ಪ್ರಾಯೋಗಿಕ ನೆಲೆಯ ಜೊತೆಗೆ ಚಿಂತಿಸುವುದು ಸ್ತುತ್ಯಾರ್ಹವಾದದ್ದು. ಅಂತಲೇ ಬಹುಶಃ ಕಲಾವಿದರ ಮನದಾಳದ ವೇದನೆಗಳಿಗೆ ಪ್ರಾಮುಖ್ಯತೆ ನೀಡಿ, ಕಲಾವಿದರ ವಿಚಾರಧಾರೆಗಳನ್ನು ಕೆದಕಿ ಹೊರತರಲು ಇಂಥ ಲೇಖನಗಳನ್ನು ಬರೆಯುವುದಕ್ಕೆ ನಮಗೆ ಮತ್ತು ಕರ್ನಾಟಕದ ಹಲವಾರು ಕಲಾವಿದರಿಗೆ, ಕೇಳಿಕೊಂಡಿದ್ದು, ಮುಕ್ತ ವಿಚಾರಗಳತ್ತ ಜನಪದ ಜನರನ್ನು ಕರೆತಂದದ್ದು ಜಾನಪದ ಕಲೆಗಳ ಉಳುವಿಗೆ ಉಪಕಾರಿಯಾಗುತ್ತದೆ ಎಂಬುದು ನನ್ನ ಭಾವನೆ.

ಏಜೆಂಟರಂತೆ ಕೆಲಸ ಮಾಡುವ ಪಂಡಿತರು ಕಲಾವಿದರ ನೋವು ನಲಿವುಗಳಿಗೆ ಸ್ಪಂದಿಸಿ ಕ್ರಿಯಾಶೀಲರಾದರೆ ಇಂಥ ಹೊಸ ಪ್ರಯತ್ನಗಳಿಗೆ ಯಶದೊರಕುವುದು ಎಂಬ ಮಾತಿನೊಂದಿಗೆ ಜಾನಪದವನ್ನು ಆಡಿರಿ, ಜಾನಪದವನ್ನು ಹಾಡಿರಿ, ಜಾನಪದವನ್ನು ಉಡಿರಿ, ಜಾನಪದವನ್ನು ತಿನ್ನಿರಿ, ಜಾನಪದ ಕುಡಿಯಿರಿ. ಜಾನಪದ ಬದುಕು ನಡೆಸಿಕೊಂಡು ಜಾನಪದ ಉಸಿರಾಡಿಸಿರಿ. ಜೀವನ ಜಾನಪದಮಯವಾಗಲಿ.

□

## ಮಲ್ಲಯ್ಯಸ್ವಾಮಿ ಅಥಣಿ

'ರಾಜ್ಯಪ್ರಶಸ್ತಿ ಪುರಸ್ಕೃತ' ಶ್ರೀಕೃಷ್ಣ ಪಾರಿಜಾತದಾಟದ ಕಲಾವಿದರು

### ಜನಪದ ಸಾಗರದ ಮೀನುಗಾರ

ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಆಕಾಡೆಮಿಯ ಅಧ್ಯಕ್ಷರಾದ ಶ್ರೀ ಹಿ.ಶಿ. ರಾಮಚಂದ್ರೇಗೌಡ ಅವರು ನನಗೂ ಒಂದು ಪತ್ರ ಕಳಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಇನ್ನೂ ಅಗತ್ಯವಾಗಿರುವ ವಿಷಯಗಳನ್ನು ಹಾಗೂ ಉಳಿದುಕೊಂಡಿರುವ ಕೊರತೆಗಳನ್ನು ಪರಿಹರಿಸಲು ಸರಕಾರ ಕೈಗೊಳ್ಳಬೇಕಾದ ಕೆಲಸವೇನು? ಅಥವಾ ಜಾನಪದ ಕೆಲಸದ ಮೂಲಕ ಆಗಬೇಕಾಗಿರುವ ಕೆಲಸಗಳನ್ನು ಸರ್ಕಾರದ ಮುಂದಿಡುವ ಮತ್ತು ಜನಜೀವನದ ಮುಂದಿಡುವ ವಿಶೇಷ ಕೆಲಸ ತಮ್ಮಿಂದ ಏನೇನಿದೆ ಎನ್ನುವುದನ್ನು, ಆಯಾ ಪ್ರಾದೇಶಿಕ ಜಾನಪದ ಚಿಂತಕರಿಂದ ಸಂಗ್ರಹಿಸುವ ಕೃತಿ ಸಾಹಸವನ್ನು ಕೈಗೆತ್ತಿಕೊಂಡಿರುವುದು ತುಂಬ ಸುತ್ತ್ಯವಾದ ಕಾರ್ಯ.

ಈ ದಿಶೆಯಲ್ಲಿ ನನಗೂ ಈ ಮೂಲಕ ಅವಕಾಶ ಒದಗಿಸಿರುವುದಕ್ಕೆ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ೧೯೮೦ರಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿಯು ಈವರೆಗೆ ಸಾಕಷ್ಟು ಕೆಲಸ ಮಾಡಿದೆ. ಆಕಾಡೆಮಿಯು ಸದಾ ಕ್ರಿಯಾಶೀಲವಾಗಿ ಸರಕಾರದೊಂದಿಗೆ ಸ್ಪಂದಿಸುತ್ತಲೇ ಬಂದಿದೆ. ಈಗ ಅಧ್ಯಕ್ಷರು ನಾಡಿನ ಜಾನಪದ ಕಲಾಚಿಂತಕರಿಗೆ ಮೂರು ಪ್ರಶ್ನೆಗಳನ್ನಿಟ್ಟು ಕಲಾವಿದರ ಮನಸ್ಸನ್ನು ಕೆಲಸಕ್ಕೆ ತೊಡಗಿಸಿದ್ದಾರೆ. ಈ ಆಕಾಡೆಮಿ ಹುಟ್ಟುವ ಮೊದಲೇ ಈ ಮಣ್ಣಿನಲ್ಲಿ ಮನುಷ್ಯ ಜನ್ಮ ತಳೆದಾಗಿನಿಂದಲೂ ಜನಪದ ಬದುಕು ಹುಟ್ಟಿದೆ. ಈ ಜಾನಪದ ಸಂಸ್ಕೃತಿಯಲ್ಲಿ ಅಡಗಿದ ಸತ್ವವನ್ನು ಅಗಿಯಬೇಕಾದದ್ದು ನಿರಂತರ ಕ್ರಿಯೆ. ಈಗ ಅಗೆದು ತೆಗೆದದ್ದು ಕಡಿಮೆ ಏನಲ್ಲ ಅಗೆದಂತೆ ಕಡಿಮೆಯಾಗುವುದಲ್ಲ ತುಂಬಿಕೊಳ್ಳುವುದೇ ಆಗಿದೆ. ಅದು ಜಾನಪದ ಸಂಸ್ಕೃತಿಯ ಗುಣ. ವಿದ್ವಾಂಸರು ತಮ್ಮನ್ನು ತಾವು ಇದರಲ್ಲಿ ತೊಡಗಿಸಿದಂತೆ ಸಮೃದ್ಧವಾಗುತ್ತದೆ. ತಮ್ಮ

ಪ್ರಾಬುದ್ಧ್ಯವೂ ಸಾರ್ಥಕವಾಗುತ್ತದೆ. ಜಾನಪದ ಕಲೆ ಆಧುನೀಕರಣದ ಮೂಲಕ ನಶಿಸಿ ಹೋಗುತ್ತದೆನ್ನುವುದನ್ನು ನಾನಂತು ಒಪ್ಪುವುದಿಲ್ಲ. ಈ ಜಾನಪದ ಕಲೆಯನ್ನು ನಾವು ಬೆಂಗ್ಳೂರಿನ ಅಕಾಡೆಮಿಗಳಲ್ಲಾಗಲಿ - ವಿಧಾನ ಸೌಧದಲ್ಲಾಗಲೀ ಕಟ್ಟಿಯಿಡುವುದಿಲ್ಲ. ಜಾನಪದ ಅಕಾಡೆಮಿ ಮೂಲಕ ಬಂದಿರುವ ಎಲ್ಲ ಪುಸ್ತಕಗಳನ್ನು ಸಾಂಸ್ಕೃತಿಕ ಚಿಂತನೆಗಳ ಮೂಲಕ ನಾಡಿನ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಠ್ಯವಾಗಿ ಪಠನಗೊಳ್ಳಬೇಕು. ಈ ಪುಸ್ತಕಗಳು ಮಕ್ಕಳ ಮಸ್ತಕಗಳಲ್ಲಿ ಮಾನಸಿಕ, ಬೌದ್ಧಿಕ ಕೆಲಸ ಮಾಡಬೇಕು. ಜನಜನಿತಗೊಳ್ಳಬೇಕು. ಈಗಾಗಲೇ ಈ ಕೆಲಸ ವಿಶ್ವವಿದ್ಯಾಲಯಗಳಲ್ಲಾಗಿರಬಹುದು. ಅದು ಗ್ರಾಮೀಣ ಮಕ್ಕಳ ತನಕ ಮುಟ್ಟಬೇಕು. ಕಲೆ ಪರಂಪರೆಯ ಬೀಜ. ಅದನ್ನು ಪರಂಪರೆಯಲ್ಲಿಯೇ ಬಿತ್ತಬೇಕು. ಅದು ಮಕ್ಕಳ ಮೂಲಕ ಬೆಳೆಯಬೇಕು. ಆಸಕ್ತಿ ಹುಟ್ಟಬೇಕು. ಅಂದರೆ ಅದು ಜನಜೀವನದ ತನಕ ಬರುತ್ತದೆ.

ಜಾನಪದ ಕಲಾವಿದರಿಗಾಗಿ ಸರಕಾರ ಮಾಡಬೇಕಾದುದೇನು? ಇದು ಕೂಡ ಮತ್ತೊಂದು ಪ್ರಶ್ನೆ ಕಲಾವಿದರನ್ನು ಕಾಡುತ್ತಿದೆ. ಯಾವುದೇ ಕಲೆ ವೃತ್ತಿಯಲ್ಲ. ಅದೊಂದು ಪ್ರತಿಭಾ ಪ್ರದರ್ಶನ. ಅಂದರೆ ಅದು ಪ್ರವೃತ್ತಿಯೇ ಹೌದು. ಆದರೆ ಕಲೆಯ ಗೀಳು ಹಚ್ಚಿಕೊಂಡ ಕಲಾವಿದ ಮನೆಗೆದ್ದು ಮಾರುಗೆಲ್ಲು ಎನ್ನುವಂತೆ ಎರಡನ್ನು ನಿಭಾಯಿಸಬೇಕಾಗುತ್ತದೆ. ಆದರೆ ನಮ್ಮ ನಾಡಿನ ಕಲಾವಿದರಲ್ಲಿ ಬಹಳಷ್ಟು ಕಲಾವಿದರೂ ಇದನ್ನು ಕಳೆದುಕೊಂಡಿದ್ದಾರೆ. ಕಲೆಯಲ್ಲಿ ಬೆಳೆದಿದ್ದಾರೆ. ಜೀವನದಲ್ಲಿ ಸೋತಿದ್ದಾರೆ. ಕಲಾಜೀವನಕ್ಕೂ ಕಪ್ಪು ಚಿಕ್ಕೆಯನ್ನಿಟ್ಟಿದ್ದಾರೆ. ಹಾಗೆಯೆ, ಕಲೆಯಲ್ಲಿ ಬೆಳೆದಿದ್ದನ್ನು ಗುರ್ತಿಸಿ ಪ್ರೋತ್ಸಾಹಿಸಿದಂತೆ, ಸೋತಿದ್ದರಲ್ಲಿರುವ ಕೊರಗು ಕೊರತೆಯನ್ನು ಗುರ್ತಿಸಿಕೊಂಡು ಸೋತ ಕಲಾವಿದರನ್ನು ಮತ್ತು ಅವರನ್ನು ಅವಲಂಬಿಸಿದ ಕುಟುಂಬದವರನ್ನು ಮಾನವೀಯವಾಗಿ ಗುರ್ತಿಸಬೇಕು. ಸಣ್ಣತನದಿಂದ ದೂರ ಸರಿದು ದೊಡ್ಡತನ ಮೆರೆಯಬೇಕು.

ಮೂರನೆ ಪ್ರಶ್ನೆಯೇ ನಿಜವಾದ ಪ್ರಶ್ನೆ. ಒಬ್ಬ ಕಲಾವಿದನು ನೀಡಬೇಕಾದ ಉತ್ತರ, ತಾನು ಕಲಾವಿದ ಹೌದೋ-ಅಲ್ಲೋ ಎನ್ನುವುದನ್ನು ತಿಳಿದುಕೊಳ್ಳುವ ಪರೀಕ್ಷೆ ಕೂಡ ಇದಾಗಿದೆ. ಜಾನಪದ ಕ್ಷೇತ್ರದಲ್ಲಿ ಸುಶಿಕ್ಷಿತರೂ ಸೇರಿಕೊಳ್ಳುತ್ತಾರೆ. ತಮ್ಮ ಅಧ್ಯಯನದ ಮೂಲಕ ಈ ಪ್ರಶ್ನೆಗೆ ಉತ್ತರ ನೀಡುತ್ತಾರೆ. ಅದು ಸರಿಯೊ-ತಪ್ಪೊ ಮುಖ್ಯವಲ್ಲ. ಆದರೆ, ಜನಪದ ಅನ್ನುವುದೇ ಒಂದು ಸಂಸ್ಕೃತಿ. ಅದು ಅನಕ್ಷರಸ್ಥರದೂ ಆಗಿರಬಹುದು ಸುಶಿಕ್ಷಿತರೂ ಆಗಿರಬಹುದು. ಆದರೆ, ಮೂಲತಃ ಅದೊಂದು ಬದುಕು. ಸಾಂಸ್ಕೃತಿಕವಾಗಿ ನೋಡುವುದೇ ಜನಪರ ದೃಷ್ಟಿ. ಅಕ್ಷರಸ್ಥರಿಗಿಂತಲೂ ಅನಕ್ಷರಸ್ಥರೇ ನಿಜವಾದ ಸಾಂಸ್ಕೃತಿಕ ಬದುಕನ್ನು ಬದುಕುತ್ತಾರೆ. ಈ ಜನಪದ ಸಂಸ್ಕೃತಿಯ ಬೇರುಗಳು ನೂರಾರು ಸಾವಿರಾರು. ಆ ಒಂದೊಂದು ಬೇರು ಸಂಸ್ಕೃತಿಯ ಒಂದೊಂದು ಪರಂಪರೆಯನ್ನು ಹೇಳುತ್ತದೆ. ಆ ಪ್ರತಿಯೊಂದು ಬೇರಿನ ಸತ್ವವನ್ನು ಹುಡುಕುವುದು ಜಾನಪದ ಅಕಾಡೆಮಿಯ ಕೆಲಸ ಆಗಬೇಕೆಂದು ನಾನು ಅಪೇಕ್ಷಿಸುತ್ತೇನೆ.

ಈಗಾಗಲೇ ಆದಿದ್ದು ಕಡಿಮೆ ಎಂದೇನಲ್ಲ; ಆಗಬೇಕಾದದ್ದು ಬಹಳಿದೆ. ಇದನ್ನು ಸಹಜ ಬದುಕಿನ ಸೃಜನಶೀಲರಿಂದ ಸಂಗ್ರಹಿಸುವುದೇ ಹೆಚ್ಚು ಸೂಕ್ತ. ಆ ಚಿಂತನೆ ಸಾಧನೆಗೊಂದು ಬೆಲೆಯಿದೆ.

ಜೀವಹುರಿಯಿಂದ ಅನುಭವದ ನಿಧಿಯಿಂದ ಬಂದ ಧ್ವನಿ ಜನಪದ. ಈ ಜಾನಪದವು ಜಲಸಾಗರದ ಹಾಗೆ, ಮೂರ್‍ನಾಲ್ಕಾಂಶ ಭಾಗ ಭೌತಿಕವಾಗಿ ವ್ಯಾಪಿಸಿಕೊಂಡಿರುವ ಸಾಗರವೇನಲ್ಲ. ಇದೊಂದು ಜೀವಸಾಗರ. ಸಾಂಸ್ಕೃತಿಕ ಬದುಕಿನ ಮಹಾಸಾಗರ. ಈ ಸಾಗರದ ವಾರಸುದಾರರಾದ ನೀವು ಬರೀ ಮೀನುಗಾರರು ಮಾತ್ರ. ಇದರಿಂದ ನಮ್ಮ ಮಸ್ತಕ ಪುಸ್ತಕ ಉದರಮಾತ್ರ ತುಂಬೀತು. ಇದು ನಮ್ಮ ಲಾಭದ ಕೆಲಸವೇ ಹೊರತು ಜಾನಪದ ಜೀವ ಸಾಗರದ ಖರ್ಚು ವೆಚ್ಚ ಜಮಾವಣೆಯ ಯಾವ ಜಮಾಬಂದಿಯೂ ಅಲ್ಲ. ಮನುಷ್ಯ ಜೀವಿಯೂ ಎಷ್ಟು ಹೆಕ್ಕಿ ಕುಕ್ಕಿದರೂ ಇನಿತಿನಿತು ಖರ್ಚಾದದ್ದು ಮತ್ತೆ ಮತ್ತೆ ಚಿಗಿತುಕೊಳ್ಳುವ ಸದಾ ಸಂತಸದ ಹಚ್ಚ ಹಸುರಿನ ಸಂಪತ್ತು.

ನಾನೊಬ್ಬ ಕಲಾವಿದ, ನನ್ನ ಸುಮಾರು ೫೫ ವರ್ಷಗಳ ಕಲಾ ಅನುಭವವನ್ನು ಇದರಲ್ಲಿ ಪ್ರಸ್ತುತಪಡಿಸಿರುತ್ತೇನೆ. ಜಾನಪದ ಅಕಾಡಮಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಈ ಸುಸಂಧಿಯನ್ನು ಒದಗಿಸಿಕೊಟ್ಟದ್ದಕ್ಕಾಗಿ ನನ್ನ ಕೃತಜ್ಞತೆಗಳು.

೧) ಒಳ್ಳೆಯ ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆ. ಆದರೆ ಇದಷ್ಟೇ ಸಾಲದು. ಒಂದೊಂದು ಭಾಗದ ನಾಮಾಂಕಿತ ಕಲಾವಿದ, ಕವಿ, ನಾಟಕಕಾರ, ಶಿಲ್ಪಿಗಳನ್ನು ಮಾತ್ರ ಬೆಳಕಿಗೆ ತಂದರೆ ಜಾನಪದಕ್ಕೆ ನ್ಯಾಯ ಒದಗಿಸಿದಂತಾಗುವುದಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ಪ್ರಶಸ್ತಿ ಪ್ರಚಾರ ಬಯಸದೆ ಕಲಾಸೇವೆ ಮಾಡಿಕೊಂಡಿರುವಂಥ ಕಲಾವಿದರನ್ನು ಗುರುತಿಸಿ ಅವರ ಅಮೂಲ್ಯ ಜನಪದ ಸಂಗ್ರಹವನ್ನು ಪ್ರಕಾಶಗೊಳಿಸಬೇಕು. ಉದಾಹರಣೆಗೆ ಸಾಕಷ್ಟು ಜನ ಸೋಬಾನೆ ಪದ, ಎದುರುಗೊಳ್ಳುವ ಪದ, ಜೋಕುಮಾರನ ಪದ, ಹೋಳಿ ಹುಣ್ಣಿಮೆ ಪದವನ್ನು ಹಾಡುವ ಹಾಡುಗಾರರು, ಲಾವಣಿಕಾರರು ಈಗಲೂ ಇದ್ದಾರೆ. ಇವರನ್ನು ಗುರುತಿಸುವ ಕಾರ್ಯವಾಗಬೇಕು.

೨) ಮುಖ್ಯವಾಗಿ ಅವರನ್ನು ಗುರುತಿಸಿ ಪರಿಚಯಿಸಬೇಕು. ಕೇವಲ ಪ್ರಶಸ್ತಿ, ಪುರಸ್ಕಾರ, ಮಾಸಾಶನ ನೀಡುವುದರಿಂದ ಕಲಾವಿದರ ಹೊಟ್ಟೆ ತುಂಬುವುದಿಲ್ಲ. ಜಾನಪದ ಕಲೆಗಳ ಪ್ರದರ್ಶಗಳು ನಿಯಮಿತವಾಗಿ ನಡೆಯುವಂತೆ ವೇದಿಕೆಗಳನ್ನು ಒದಗಿಸಬೇಕು. ಜನಪದ ಕಲೆಗಳ ಪುನರುಜ್ಜೀವನಕ್ಕೆ ತಂಡ ರಚಿಸಿ ರಾಜ್ಯ, ದೇಶ ಹಾಗೂ ವಿಶ್ವದ ತುಂಬ ಮೌಲಿಕ ಪ್ರದರ್ಶನಗಳನ್ನು ನೀಡಬೇಕು.

೩) ಜನಪದ ಎಂದರೆ ಜನರ ಹಾಡು, ಜನಸಾಮಾನ್ಯರು ಜನಸಾಮಾನ್ಯರ ಬದುಕನ್ನು ಕಣ್ಣುಗಳಿಂದ ನೋಡಿ ಹೃದಯದೊಳಗೆ ತುಂಬಿಕೊಂಡು ಅಭಿವ್ಯಕ್ತಪಡಿಸುವ ಮಾಧ್ಯಮ. ಜನಪದ ಶ್ರಮ ಮೂಲವಾದದ್ದು. ಇದಕ್ಕೆ ನೆಲವೇ ಬೇರು, ಮುಗಿಲೇ ಹೂವು. ಬಾಯಿಂದ ಬಾಯಿಗೆ ಬಂದದ್ದು ಮಾತ್ರ ಜನಪದ ಎಂದು ಹೇಳುವ ವಿದ್ವಾಂಸರು ತುಂಬ ಅಪಚಾರ ಮಾಡಿದ್ದಾರೆ ಎನ್ನಿಸುತ್ತದೆ. ಲೆಕ್ಕ ಬರೆದಿಡಲು ಅನುಕೂಲವಾಗಲಿ ಎಂದು ನಮ್ಮ ಅವ್ವ ನನಗೆ ಅಕ್ಷರ ಕಲಿಸಿದ ಮಾತ್ರಕ್ಕೆ ನಾನು ಜಾನಪದ ಅಲ್ಲ ಎಂದು ಹೇಳುವುದು ನನಗೆ ಅವಮಾನ ಮಾಡಿದಂತೆನಿಸುತ್ತದೆ. ನಾನು ನನ್ನಂಥವರು ಬಾಯಿ ತೆಗೆದರೆ ಜನರ ಪಾಡು ಹಾಡಾಗಿ ಹೊರಹೊಮ್ಮುತ್ತದೆ. ದಿನನಿತ್ಯ ಹೊಸ ಒಗಟುಗಳನ್ನು ಸೃಷ್ಟಿಸುತ್ತಿರುವ ನನ್ನಂಥವರು ಜನಪದರಲ್ಲವೆಂದರೆ ನೋವಾಗದಿರುತ್ತದೆಯೆ? ಕಾಲ ಬದಲಾದಂತೆ ವ್ಯಾಖ್ಯೆಯು ಬದಲಾಗಬೇಕು.

ಜಾನಪದ ಗುಣ-ಸ್ವಭಾವಗಳು :

೧) ಸರಳತೆ

೨) ಮುಗ್ಧತೆ

೩) ತಲ್ಲೀನತೆ

೪) ದೇಶಿ ಹಾಗೂ ವೃತ್ತಿ ಮೂಲಕ ಪ್ರತಿಭೆಗಳನ್ನು ಒಳಗೊಂಡಿರುವದು

೫) ಬದುಕನ್ನು ಹೃದಯದ ಮೂಲಕ ನೋಡುವುದು

೬) ಅನುಕರಣಶೀಲವಾದುದು

೭) ದೈವೀಶಕ್ತಿಯನ್ನು ನಂಬಿ ಬೆಳೆದುಬಂದಿರುವಂತದು

೮) ಸಮ್ಮೋಹಕ ಶಕ್ತಿಯನ್ನು ಹೊಂದಿರುವದು.

೯) ಕಾಲ, ದೇಶ ಹಾಗೂ ಮತಾತೀತವಾದುದು.

**ಯಳಸಂಗಿ ಕಲ್ಲಣ್ಣ,** ನಿರ್ದೇಶಕರು, ಕರ್ನಾಟಕ ಜನಪದ ಕಲೆಗಳ ಸಂಘ

೧) ಮಾರ್ಗದರ್ಶಕ, ಪರಿಸರ, ಪುಸ್ತಕ, ಪತ್ರಿಕೆಗಳಿಂದ ತಾವು ನಿಗದಿಪಡಿಸಿಕೊಂಡ ವಿಷಯದ ಬಗ್ಗೆ ಸಂಗ್ರಹಿಸುವದು ಇದು ಒಳ್ಳೆಯ ಕೆಲಸ. ಮೊಸರು ಕಡೆದು ಬೆಣ್ಣೆ ಬಂದಂತೆ, ಸುರ-ಅಸುರರು ಸಮುದ್ರಮಂಥನ ಮಾಡಿ ಹದಿನಾಲ್ಕು ರತ್ನಗಳು ಬಂದಂತೆ, ಹಳೇ ಅರಿವೆ ಹೊಸ ಕೌದಿಯಂತೆ.

೨) ಅಕಾಡೆಮಿಗೆ ಸದಸ್ಯರಾದವರು ತನ್ನದು ಹಾಗೂ ತಮ್ಮವರೆಂಬುದು ಬಿಡಬೇಕು. ವಿವಿಧ ಕಲೆಗಳ ಬಗ್ಗೆ ಹಾಗೂ ಕಲಾವಿದರ ಬಗ್ಗೆ ಪರಿಪೂರ್ಣ ಬಲ್ಲವರಾಗಿರಬೇಕು. ಕಲಾಮೇಳಗಳಿಗೆ ಬೇಕಾಗುವ ವಾದ್ಯ ಸಲಕರಣೆ ವೇಷಭೂಷಣಗಳು ಕೊಂಡುಕೊಡಬೇಕು. ಕಲಾಮೇಳಗಳ ಪ್ರದರ್ಶನದ ಚಿತ್ರೀಕರಣ, ಧ್ವನಿಸುರಳಿ, ಹಾಗೂ ಚಿತ್ರ ಸಂಕಲನ (ಆಲ್ಬಂ) ಇರಬೇಕು. ಸದಸ್ಯರು, ಸಂಘಟಿತ-ಅಸಂಘಟಿತ ಕಲೆಗಳು ಗುರ್ತಿಸಿಕೊಳ್ಳಬೇಕು. ಆಧುನಿಕ ವಾದ್ಯಗಳು ವೇಷಭೂಷಣ ಬೇಡ. ಡೊಳ್ಳಿನ ಪದಗಳು ಬೀರೇಶನಿಂದ ಬಂದವುಗಳು. ವಡಬುಗಳು ವೀರೇಶನಿಂದ ಬಂದವುಗಳು ಇರಬೇಕು. ಕಲಾಪ್ರದರ್ಶನ ನೀಡಿದ ಕಲಾವಿದರಿಗೆ ಬರೀ ಪ್ರಶಸ್ತಿ ಕೊಟ್ಟರೆ ಸಾಲದು. ದಾರಿಯವೆಚ್ಚ ಹಾಗೂ ಗೌರವಧನ ನೀಡಬೇಕು. ಮಾಸಾಶನಕ್ಕಾಗಿ ಅರ್ಜಿ ಹಾಕಿದ ಕಲಾವಿದರಿಗೆ ಸಂದರ್ಶನ ಅತ್ಯವಶ್ಯಕ. ಅದರಂತೆ ರಾಜ್ಯ ಪ್ರಶಸ್ತಿಗಾಗಿ ಅರ್ಜಿ ಹಾಕಿದವರಿಗೂ ಸಂದರ್ಶನ ಬೇಕು. ಅಕಾಡೆಮಿಯ ಸಹಾಯಧನದಿಂದ ಕಾರ್ಯಕ್ರಮಗಳಿಗೆ ಊಟ, ಉಪಹಾರ (ತಿಂಡಿ) ಭಾಗವಹಿಸಿದ ಕಲಾವಿದರಿಗೆ ಅತಿಥಿಗಳಿಗೆ ಹಾಗೂ ಅಕಾಡೆಮಿಯ ಅಧ್ಯಕ್ಷರು ರಿಜಿಸ್ಟ್ರಾರರು ಮತ್ತು ಸದಸ್ಯರಿಗೆ ಒಂದೇ ತೆರನಾಗಿರಬೇಕು. ಕಾರ್ಯಕ್ರಮಗಳ ಅಂಗವಾಗಿ ಸದರಿಯವರಿಗೆ ಸನ್ಮಾನಗಳು ಬೇಡ, ಯಾಕೆಂದರೆ ಅಕಾಡೆಮಿಯ ಸಹಾಯ ಧನದಿಂದ ಕಾರ್ಯಕ್ರಮಗಳು ಜರುಗುವುದು ತಮ್ಮ ಹಣದಿಂದ ತಾವೇ ಸನ್ಮಾನ ಮಾಡಿಕೊಂಡಂತಾಗುವುದು. ನಾಗರೀಕರಾಗಲಿ

ಅಥವಾ ಸಂಘ-ಸಂಸ್ಥೆಗಳು ಸನ್ಮಾನ ಮಾಡಿದರೆ ಸೈ. ಅಕಾಡೆಮಿಯಿಂದ ಪುಸ್ತಕ, ಪತ್ರಿಕೆ, ಕ್ಯಾಸೆಟ್ಟುಗಳನ್ನು ಅಕಾಡೆಮಿಯು ಸಂಘ-ಸಂಸ್ಥೆಗಳಿಗೆ (ಪ್ರತಿಷ್ಠಿತ) ಪುಕ್ಕಟೆಯಾಗಿ ಕೊಡಬೇಕು. ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳು ಸಾದಾ ಇರಬೇಕು. ಇದಕ್ಕೆ ಹೆಚ್ಚಿಗೆ ಹಣ ಸಲ್ಲದು. ಅಕಾಡೆಮಿಯ ಸದಸ್ಯರಾದವರು ತಮ್ಮ ಕ್ಷೇತ್ರದಲ್ಲಿ ಕೆಲಸಗಳು ಮಾಡಿದ ಬಗ್ಗೆ ದಿನಚರಿ ಇಡುವದು ಸೂಕ್ತ, ಜಾನಪದ ಕಲಾವಿದರು ಬಡವರು, ಅವರ ಆರೋಗ್ಯದ ಬಗ್ಗೆ ಗಮನ ಹರಿಸಬೇಕು. ಎಲ್ಲಾ ಅಕಾಡೆಮಿಗಳ ತಾಯಿ ಬೇರು ಜಾನಪದ ಅಕಾಡೆಮಿ. ಸರ್ಕಾರದಿಂದ ಇದಕ್ಕೆ ಅನುದಾನ ಹೆಚ್ಚಿಗೆ ಬೇಕು. ಈ ಬಗ್ಗೆ ಸರ್ಕಾರದ ಕೂಡ ಚರ್ಚಿಸಬೇಕಾಗುವದು. ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಜನಪದ ಕಲಾವಿದರಿಗೆ ಹೆಚ್ಚು ಸಿಗುವಂತಾಗಬೇಕು. ಜಾನಪದದಿಂದ ಪಿಹೆಚ್.ಡಿ. ಹಾಗೂ ಎಂ.ಫಿಲ್ ಆದವರಿಗೆ ಪ್ರೋತ್ಸಾಹಿಸಬೇಕು ಹಾಗೂ ಜಾನಪದದ ಬಗ್ಗೆ ಪುಸ್ತಕ-ಪತ್ರಿಕೆ ಹೊರತರುವವರ ಬಗ್ಗೆ ಧನಸಹಾಯ ನೀಡಬೇಕು. ಕಲಾಪ್ರದರ್ಶನಗಳು ಗ್ರಾಮೀಣ ಪ್ರದೇಶದಲ್ಲಿ ಜರುಗಬೇಕು. ಪಟ್ಟಣಿಗರಿಗೆ ಸಿನೇಮಾ ದೂರದರ್ಶನ ವಿಡಿಯೋಗಳ ಕಡೆಗೆ ಹೆಚ್ಚು ಗಮನ ಕಾರಣ ವ್ಯರ್ಥವಾಗಿ ಹಣ ಸೂರೆ ಮಾಡಿದಂತಾಗುವುದು.

೩) ಜಾನಪದ ಕಲೆ ಬಾಯಿಂದ ಬಾಯಿಗೆ ತಲೆ-ತಲಾಂತರಗಳಿಂದ ಬಂದದ್ದು. ಇದು ಯಾರೂ ಬರೆದಿಟ್ಟದ್ದು ಅಲ್ಲಾ, ಅದುವೇ ನಿಜವಾದ ನೈಜ ಜಾನಪದ. ಅಸಲಿ ಅಶ್ಲೀಲ ಅಲ್ಲ.

❐

ಈ ನಿಮ್ಮ ಮೂರು ಪ್ರಶ್ನೆಗಳಿಗೆ ನನಗೆ ತಿಳಿದ ಮಟ್ಟಿಗೆ ಉತ್ತರಿಸುತ್ತೇನೆ.

೧) ಜಾನಪದ ವಿದ್ವಾಂಸರೆಂಬುವವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಬಗ್ಗೆ ನಮಗೆ ಹೆಚ್ಚು ತೃಪ್ತಿ ತರುತ್ತದೆ. ಅಲ್ಲದೇ ಈ ಜಾನಪದ ಎಂಬ ಕಥೆ ಅಥವ ಕಾವ್ಯವನ್ನು ಹೋಗಲಾಡಿಸದೆ ಉಳಿಸಿಕೊಂಡು ಬರಬೇಕೆಂದು ನಮ್ಮ ಅಭಿಪ್ರಾಯ ಇದಕ್ಕೆ ನಾವು ಕೂಡ ಸಾಕಷ್ಟು ದುಡಿಯುತ್ತಿದ್ದೇವೆ.

೨) ಇವಾಗಿನ ಜನಪದ ಅಕಾಡೆಮಿಯ ಕಲಾವಿದರು ಹಿಂದೆ ಹೊಟ್ಟೆಪಾಡಿಗಾಗಿ ಈ ಕಥೆಯನ್ನು ಊರಿಂದ ಊರಿಗೆ ಹೋಗಿ ಹಾಡಿಕೊಂಡು ಬರುತ್ತಿದ್ದರು. ಆವಾಗ ಕರ್ನಾಟಕದ ಘನ ಸರ್ಕಾರದವರು ಇದಕ್ಕೆ ಒಂದು ಗೌರವ ಕೊಟ್ಟು ಇದು ಇಲ್ಲಿಗೆ ಅಳಿಸಿ ಹೋಗಬಾರದೆಂದು ಆ ಕಲಾವಿದರಿಗೆ, ಹೀಗೆ ಹಾಡುವವರಿಗೆ ಗೌರವಧನವನ್ನು ಕೊಟ್ಟು ಇವರನ್ನು ಆಕಾಶವಾಣಿ ಬೆಂಗಳೂರು ಇಲ್ಲಿ ಹಾಡಿಸಿರುತ್ತಾರೆ. ಈವಾಗ ಅವರಿಗೆ ಇನ್ನೂ ಸ್ವಲ್ಪ ಗೌರವಧನ ಹೆಚ್ಚಿಸಿ ಈ ಬಡ ಕಲಾವಿದರಿಗೆ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ.

೩) ಜನಪದ ಈವಾಗ ಜಾನಪದವಾಗಿದೆ. ಇದನ್ನು ಜಾನಪದ ಶೈಲಿಯಲ್ಲಿ ಹಾಡಿದರೆ ಇದು ಜಾನಪದವಾಗುತ್ತದೆ. ಇದಕ್ಕೆ ಉಗಮಸ್ಥಾನ ಯಕ್ಷಗಾನ. ಯಕ್ಷಗಾನದಿಂದ ಬಂದಿರುತ್ತೆ ಕಥೆ.

ಇದನ್ನು ನಮ್ಮ ಗುರುಗಳು ಹೇಳಿ ಕೊಟ್ಟಿರುವ ಪ್ರಕಾರವೇ ಹಾಡಬೇಕು. ಉದಾಹರಣೆ ಸಾರಣೆ, ಅನುಸಾರಣೆ, ಇಂದ್ರ,ಮಂದ್ರ, ಪಲ್ಲವಿ, ಅನುಪಲ್ಲವಿ, ಕುಡುಪೆ, ಜಂಪೆ, ಕಾಂಬೋದಿ, ಗೌಳ, ಶಂಕರಾಭರಣ, ಸಾವೇರಿ ಇವುಗಳನ್ನು ಅನುಸರಿಸಿಯೇ ಹಾಡಬೇಕು. ಆವಾಗ ಇದು ಜನಪದ ಹೊಂದಿರುತ್ತದೆ.

## ಜನಪದ ಕಲಾವಿದರ ವಿಳಾಸಗಳು

೧. ಶ್ರೀಮತಿ ಜಲ್ಲೆ ಸಿದ್ದಮ್ಮ
ಯರಕಿನ ಗದ್ದೆ
ಬಿಳಿಗಿರಿ ರಂಗನ ಬೆಟ್ಟ
ಯಳಂದೂರು ತಾ॥
ಚಾಮರಾಜನಗರ ಜಿಲ್ಲೆ

೨. ಸುಕ್ರಿ ಬೊಮ್ಮಗೌಡ
ಬಡಗೇರಿ, ಅಂಕೋಲ
ಉತ್ತರ ಕನ್ನಡ ಜಿಲ್ಲೆ

೩. ಹಿರಿಯಡಕ ಗೋಪಾಲರಾವ್
ಯಕ್ಷಗಾನ ಕಲಾವಿದರು
ಅಂಚೆ - ಹಿರಿಯಡಕ-೫೭೬
೧೧೩. ಓಂತಿಬೆಟ್ಟು, ಉಡುಪಿ

೪. ಎಂ. ಆರ್. ಬಸಪ್ಪ
ವೀರಗಾಸೆ ಕಲಾವಿದರು,
ಮಾಳೇನಹಳ್ಳಿ,
ಚಿಕ್ಕಮಗಳೂರು ಜಿಲ್ಲೆ

೫. ಮಾರೆಪ್ಪ ಮಾರೆಪ್ಪ ದಾಸರ
ಸಾ॥ ತುಮ್ಮರಗುದ್ದಿ,
ತಾ॥ ಯಲಬುರ್ಗಾ
ಜಿ॥ ಕೊಪ್ಪಳ

೬. ನೆಲ್ಲೀಗೆರೆ ತಿಮ್ಮಪ್ಪಾಚಾರ್ಯ
ಶ್ರೀಕಾಳಿಕಾಂಬ ಯುವಜನ
ಯಕ್ಷಗಾನ ಮಂಡಲಿ,
ನೆಲ್ಲೀಗೆರೆ, ನಾಗಮಂಗಲ ತಾ॥
ಮಂಡ್ಯ ಜಿಲ್ಲೆ

೭. ಶ್ರೀಮತಿ ಬಂಗಾರಮ್ಮ
ಸಂಜೀವಪ್ಪನವರ ಪತ್ನಿ
ಬರಗರಕಣ್ಣ ಗುಡ್ಡ
ಜಗಳೂರು ತಾ॥
ದಾವಣಗೆರೆ ಜಿಲ್ಲೆ

೮. ಬಿ.ಹೆಚ್. ಪುಟ್ಟಶ್ಯಾಮಾಚಾರ್ಯ
ಸೂತ್ರದ ಗೊಂಬೆ ಕಲಾವಿದರು,
ಯಕ್ಷಗಾನ ಭಾಗವತರು
ಹಾಗೂ ಕರಕುಶಲಿ,
ಬೆಳ್ಳೂರು, ನಾಗಮಂಗಲ ತಾಲ್ಲೂಕು
ಮಂಡ್ಯ ಜಿಲ್ಲೆ

೯. ಶ್ರೀ ಪುಟ್ಟಮಲ್ಲೇಗೌಡ
ಗೊರವರ ಕುಣಿತ ಕಲಾವಿದರು
ಕುರುಬರ ಬೀದಿ
ರಾಮಸಮುದ್ರ
ಚಾಮರಾಜನಗರ ಜಿಲ್ಲೆ

೧೦. ಎ. ಎನ್. ಚನ್ನಬಸವಯ್ಯ,
ಮೂಡಲಪಾಯ ಯಕ್ಷಗಾನ
ಭಾಗವತರು
ಅರಳಗುಪ್ಪೆ
ತಿಪಟೂರು ತಾಲ್ಲೂಕು
ತುಮಕೂರು ಜಿಲ್ಲೆ

೧೧. ಶ್ರೀ ವಸಂತ ನಾರಾಯಣ ರಣ್ಣವರೆ
ಜಗ್ಗಲಿಗೆ ಕಲಾವಿದರು
ಸಾ|| ಸುಳ್ಳ, ತಾ|| ಹುಬ್ಬಳ್ಳಿ
ಜಿ|| ಧಾರವಾಡ

೧೨. ಶ್ರೀ ಮುನಿವೆಂಕಟಪ್ಪ
ತಮಟೆ ಕಲಾವಿದರು
ಪಿಂಡಪಾಪನಹಳ್ಳಿ,
ಕೋಲಾರ ಜಿಲ್ಲೆ

೧೩. ಶ್ರೀ ಭಾಸ್ಕರ ಕೊಗ್ಗ ಕಾಮತ್
ಯಕ್ಷಗಾನ ಸೂತ್ರದ ಗೊಂಬೆ
ಕಲಾವಿದರು
ಉಪ್ಪಿನಕುದ್ರು, ಉಡುಪಿ ಜಿಲ್ಲೆ

೧೪. ತುಡುಮು ಮುನಿವೆಂಕಟಪ್ಪ
ಪಾರೇ ಹೊಸಹಳ್ಳಿ,
ಕಾಮಧೇನಹಳ್ಳಿ ಅಂಚೆ,
ಕೋಲಾರ ತಾಲ್ಲೂಕು,
ಕೋಲಾರ ಜಿಲ್ಲೆ

೧೫. ಎಂ. ಎಂ. ಹಾಲಯ್ಯ
ದೊಡ್ಡಾಟ ಕಲಾವಿದರು
ಹಡಗಲಿ ತಾಲ್ಲೂಕು
ಬಳ್ಳಾರಿ ಜಿಲ್ಲೆ

೧೬. ಬಸವೇಗೌಡ
ಭಾಗವಂತಿಕೆ ಕಲಾವಿದರು
ಎಲೆಕೊಪ್ಪ , ನಾಗಮಂಗಲ ತಾ||
ಮಂಡ್ಯ ಜಿಲ್ಲೆ

೧೭. ಗೋವಿಂದಗೌಡಾ
ಅಂಕೋಲ, ಉತ್ತರ ಕನ್ನಡ ಜಿಲ್ಲೆ

೧೮. ಎಚ್.ಎನ್. ಮಾದಯ್ಯ
ಕಂಸಾಳೆ ಕಲಾವಿದರು
ನಂ. ೧೦೦, ಬಿ.ಎಸ್.ವಿ.ನಗರ,
ದೇವನಾಥಾಚಾರ್ ಬೀದಿ,
೫ನೇ ಮುಖ್ಯರಸ್ತೆ, ೭ನೇ ಅಡ್ಡರಸ್ತೆ,
ಚಾಮರಾಜಪೇಟೆ, ಬೆಂಗಳೂರು-೧೮.

೧೯. ಕೆ. ಗುಡ್ಡಪ್ಪ ಜೋಗಿ
ಕಿನ್ನರ ಜೋಗಿ ಕಲಾವಿದರು
ಹೊಸೂರು
ಶಿವಮೊಗ್ಗ ಜಿಲ್ಲೆ

೨೦. ನಿಂಗನಗೌಡ ಬಸನಗೌಡ
ಮುಂಡರಗಿ
ಸಾ|| ಸುಳ್ಳ, ತಾ|| ಹುಬ್ಬಳ್ಳಿ,
ಜಿ|| ಧಾರವಾಡ

೨೧. ರಾಮಣ್ಣ
ಪಟಾ ಕುಣಿತ ಕಲಾವಿದರು
ಬೈರಸಂದ್ರ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ

೨೧. ನೀಲಗಾರ ಮಹದೇವಯ್ಯ
ಅಂಬೇಡ್ಕರ್ ಬೀದಿ, ಹಿನಕಲ್
ಅಂಚೆ, ಮೈಸೂರು ತಾ||,
ಮೈಸೂರು ಜಿಲ್ಲೆ

೨೨. ಶ್ರೀಮತಿ ಕಪ್ಪಗಲ್ ಪದ್ಮಮ್ಮ
ದೇವಿನಗರ, ೫ನೇ ಅಡ್ಡರಸ್ತೆ
ಕ್ಲಬ್ ರೋಡ್, ಬಳ್ಳಾರಿ

೨೩. ಕಲ್ಲುಮನೆ ಎ.ಎಸ್. ನಂಜಪ್ಪ
ಮೂಡಲಪಾಯ
ಯಕ್ಷಗಾನ ಭಾಗವತರು
ಅರಳಗುಪ್ಪೆ, ತಿಪಟೂರು ತಾ||
ತುಮಕೂರು ಜಿಲ್ಲೆ

೨೪. ಡಿ. ಎಸ್. ಗಂಗಾಧರಗೌಡ
ಸೋಮನ ಕುಣಿತ ಕಲಾವಿದರು
ದಂಡಿನಶಿವರ, ತುರುವೇಕೆರೆ ತಾ||
ತುಮಕೂರು ಜಿಲ್ಲೆ

೨೫. ಸೋಬಾನೆ ಕೃಷ್ಣೇಗೌಡ
ಲಕ್ಷ್ಮೀಸಾಗರ, ಮಹದೇಶ್ವರ ಅಂಚೆ.
ಪಾಂಡವಪುರ ತಾ||, ಮಂಡ್ಯ ಜಿಲ್ಲೆ

೨೬. ಕಂಸಾಳೆ ಮಹಾದೇವಯ್ಯ
ನಂ. ೪೩೭೨, ೧೨ನೇ ಕ್ರಾಸ್,
ಅಶ್ವತ್ಥಕಟ್ಟೆ ರಸ್ತೆ, ಕ್ಯಾತಮಾರನಹಳ್ಳಿ,
ನಜರಾಬಾದ್ ಮೊಹಲ್ಲಾ,
ಮೈಸೂರು -೧೯

೨೭. ರಾಣಿ ಮಾಚಯ್ಯ
ಉಮ್ಮತ್ತಾಟ್ ಕಲಾವಿದೆ
ಮಂಡಿಕೇರಿ, ಕೊಡಗು ಜಿಲ್ಲೆ

೨೮. ಬಸವಲಿಂಗಯ್ಯ ಹಿರೇಮಠ
ಅಧ್ಯಕ್ಷರು,
ಜಾನಪದ ಸಂಶೋಧನ ಕೇಂದ್ರ,
ಸಪ್ತಾಪುರ, ಧಾರವಾಡ

೨೯. ಮಲ್ಲಯ್ಯಸ್ವಾಮಿ ಅಥಣಿ
ಶ್ರೀ ವೆಂಕಟೇಶ್ವರ ಕೃಷ್ಣ
ಪಾರಿಜಾತ ಕಂಪನಿ.
ಪಿ.ಬಿ. ಹೈಸ್ಕೂಲ್ ಗಲ್ಲಿ, ಜಮಖಂಡಿ
ತಾ|| ಜಮಖಂಡಿ
ಜಿಲ್ಲಾ|| ಬಾಗಲಕೋಟೆ

೩೦. **ಯಳಸಂಗಿ ಕಲ್ಲಣ್ಣ**
ನಿರ್ದೇಶಕರು, ಕರ್ನಾಟಕ ಜಾನಪದ
ಕಲೆಗಳ ಸಂಘ
ಸಾಲೋಟಗಿ, ತಾಲ್ಲೂಕು ಇಂಡಿ,
ಜಿಲ್ಲೆ ಬಿಜಾಪುರ

೩೧. **ಕಾಳಶೆಟ್ಟಿ**
ಕುಂತೂರು
ಕೊಳ್ಳೇಗಾಲ ತಾಲ್ಲೂಕು
ಚಾಮರಾಜನಗರ ಜಿಲ್ಲೆ.

ಅಭಿವೃದ್ಧಿಯನ್ನು ಅನುಸರಿಸುವುದು ಅಪರಾಧವಲ್ಲ, ಅನುಸರಿಸುವವನು ಸೃಷ್ಟಿಶೀಲನೂ ಆಗಬೇಕಾದುದು ಉಚಿತ. ಅನುಸರಣೆಯೆ ಜೀವನವಾದರೆ 'ನಾವು' ಖಾಲಿಯಾಗುವುದು ಖಂಡಿತ. ಬೆಳಗುವ ದೀಪವೊಂದರ ಕಡೆಗೆ ಕಣ್ಣಿಟ್ಟವರು ಆದರ ತಳದ ಕತ್ತಲೆಯನ್ನು ಗ್ರಹಿಸದಿದ್ದರೆ ಹೇಗೆ? ಅಂಥ ಹಣತೆಯನ್ನು ತನ್ನಲ್ಲಿ ಹತ್ತಿಸಿಕೊಳ್ಳದಿದ್ದರೆ ಹೇಗೆ ?

ಈಗ ನಮ್ಮ ನಮ್ಮ ಜನಪದ ಹಣತೆಗಳನ್ನು ಹತ್ತಿಸಿಕೊಳ್ಳೋಣವೆ ! ನೂರು ಜನಪದಗಳಿಗೆ ನೂರು ದೀಪಗಳಿವೆ. ಅವುಗಳನ್ನು ಕೂಡಿಸಿಕೊಳ್ಳುವ, ಜೋಡಿಸಿಕೊಳ್ಳುವ ಕೆಲಸವನ್ನು ಆಮೇಲೆ ಮಾಡೋಣ. ಮೊದಲು ನಮ್ಮ ನಮ್ಮ ಮನೆಯ ಹಣತೆಗಳು ಉರಿಯಲಿ.

ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - 560 002